ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಗಳ ಉತ್ತರ.

+ಶ್ರೀ ಎಸ್.ಎಂ.ಕೃಷ್ಣ(ಮುಖ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಕಳೆದ ಹಲವಾರು ದಿನಗಳಿಂದ ಮಾರ್ಚ 15 ತಾರೀಖು ಮಾನ್ಯ ರಾಜ್ಯಪಾಲರು ವಿಧಾನಮಂಡಲದಲ್ಲಿ ಮಾಡಿದ ಭಾಷಣಕ್ಕೆ ನಮ್ಮ ವಂದನೆಗಳನ್ನು ಸೂಚಿಸುವ ಮಾನ್ಯ ಸಿ.ಎಂ.ಲಿಂಗಪ್ಪನವರು ಮಂಡಿಸಿದಂತಹ ಈ ನಿರ್ಣಯದ ಮೇಲೆ ಹಲವಾರು ಮಾನ್ಯ ಸದಸ್ಯರು ಮಾತನಾಡಿ ತಮ್ಮ ಅನಿಸಿಕೆಗಳನ್ನು ಸದನದ ಮುಂದಿಟ್ಟಿದ್ದಾರೆ. ಇದನ್ನು ಇಡತಕ್ಕಂತಹ ಸಮಯದಲ್ಲಿ ಸರ್ಕಾರದ ಹತ್ತು ಹಲವಾರು ಕಾರ್ಯಕ್ರಮಗಳನ್ನು, ನಾವು ಘೋಷಣೆ ಮಾಡಿರತಕ್ಕಂತಹ ಯೋಜನೆಗಳ ಬಗ್ಗೆ ಒಂದು ಕ್ರಿಟಿಕಲ್ ಅಸೆಸ್‌ಮೆಂಟ್‌ನ್ನು ಮಾಡಿದ್ದಾರೆ. ಅದಕ್ಕೆ ಸರ್ಕಾರದ ಹಾಗೂ ನನ್ನ ವತಿಯಿಂದ ನಾನು ಆಭಾರಿಯಾಗಿದ್ದೇನೆ. ರಾಜ್ಯದ ಬೆಳವಣಿಗೆಯ ದೃಷ್ಟಿಯಿಂದ ನಾವು ತೆಗೆದುಕೊಳ್ಳತಕ್ಕಂಥ ಪ್ರತಿಯೊಂದು ತೀರ್ಮಾನವನ್ನು ಕೂಡ ಒಂದು ವಿಭಿನ್ನವಾದ ದೃಷ್ಟಿಯಿಂದ ನೋಡಿದ್ದೀರಿ. ಅದರ ಬಗ್ಗೆ ವಿಶೇಷವಾಗಿ ನಾವು ಗಮನವನ್ನು ಹರಿಸಬೇಕಾಗಿದೆ. ಅದು ನಮ್ಮ ಮೇಲೆ ಬಿದ್ದಿರತಕ್ಕಂತಹ ಹೊಣೆಗಾರಿಕೆ. ಆ ಹೊಣೆಗಾರಿಕೆಯಿಂದ ನಾವು ನುಣಚಿಕೊಳ್ಳತಕ್ಕಂಥ ಪ್ರಯತ್ನಗಳನ್ನು ಮಾಡುತ್ತಿಲ್ಲ, ಮತ್ತು ಮಾಡುವುದಿಲ್ಲ; ಎನ್ನತಕ್ಕಂಥ ಆಶ್ವಾಸನೆಯನ್ನು ಕೊಡುತ್ತೇನೆ. ರಾಜ್ಯಪಾಲರ ಭಾಷಣ ಒಂದು ಸರ್ಕಾರದ ಹತ್ತು ಹಲವಾರು ಕಾರ್ಯಕ್ರಮಗಳ ಒಂದು ವಿಹಂಗಮ ನೋಟ. ಆ ನೋಟದಲ್ಲಿ ನಾವು ಹಲವಾರು ಕ್ಷೇತ್ರಗಳಲ್ಲಿ ಏನೆಲ್ಲಾ ಮಾಡಬೇಕೆಂದು ಆಲೋಚನೆಯನ್ನು ಮಾಡಿದ್ದೇವೆ, ಆ ಆಲೋಚನೆಗಳನ್ನು ಪ್ರತಿಬಿಂಬಿಸತಕ್ಕಂತಹ ಒಂದು ಸರ್ಕಾರದ ಡಾಕ್ಯುಮೆಂಟ್. ಹಿಂದೆ ಹಲವಾರು ರಾಜ್ಯಪಾಲರ ಭಾಷಣಗಳನ್ನು ನಾನು ಕಳೆದ 3-4 ದಿವಸಗಳಲ್ಲಿ ಓದಿದ್ದೇನೆ, ಪ್ರತಿಯೊಂದು ರಾಜ್ಯಪಾಲರ ಭಾಷಣದಲ್ಲಿ ಕೂಡ ಆ ದಿವಸ ಅಸ್ತಿತ್ವದಲ್ಲಿರತಕ್ಕಂತಹ ಸರ್ಕಾರ, ಆ ವರ್ಷ ಹಾಕಿಕೊಳ್ಳತಕ್ಕಂಥ ಯೋಜನೆಗಳಿಗೆ ಹಿಡಿದಂತಹ ಒಂದು ಕನ್ನಡಿಯಾಗಿದೆ.

ಆ ದೃಷ್ಟಿಯಿಂದಲೇ ನಾವು ಪ್ರತಿಯೊಂದು ರಾಜ್ಯಪಾಲರ ಭಾಷಣವನ್ನು ಕೂಡ ವಿಮರ್ಶೆ ಮಾಡಬೇಕಾಗುತ್ತದೆ. ವಿಶ್ಲೇಷಣೆ ಮಾಡಬೇಕಾಗುತ್ತದೆ. ಆ ವಿಶ್ಲೇಷಣೆಯನ್ನು ಮಾಡತಕ್ಕಂಥ ಕಾಲದಲ್ಲಿ ಹಲವಾರು ಹೋಲಿಕೆಗಳು ಸ್ವಾಭಾವಿಕವಾಗಿ ಇರುತ್ತದೆ ಎಂದು ನಾನು ಭಾವನೆ ಮಾಡುತ್ತೇನೆ. ಹಲವಾರು ಸದಸ್ಯರುಗಳು ತಮ್ಮ ಭಾಷಣಗಳಲ್ಲಿ ಪ್ರಸ್ತಾಪ ಮಾಡಿರತಕ್ಕಂಥಾದ್ದು ನಮ್ಮ ರಾಜ್ಯದ Law and Order situation ಬಗ್ಗೆ. ಒಂದೆರಡು ಘಟನೆಗಳ ಆಧಾರದ ಮೇಲೆ, ಅವುಗಳ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಒಂದು ದೊಡ್ಡ ಭಯಂಕರವಾದಂಥ law and order problem create ಆಗಿದೆ ಎನ್ನತಕ್ಕಂಥ ಭಾವನೆಗಳು ಬರತಕ್ಕಂಥ ರೀತಿಯಲ್ಲಿ ಕೆಲವು ಸದಸ್ಯರುಗಳು ತಮ್ಮ ಭಾಷಣಗಳಲ್ಲಿ ನಮೂದಿಸಿದ್ದಾರೆ. ಇದನ್ನು ನಾನು ಬಹಳ ಸ್ಪಷ್ಟವಾಗಿ

ಅಲ್ಲಗಳೆಯುವುದಕ್ಕ ಈ ಸದನದ ವೇದಿಕೆಯನ್ನು ಉಪಯೋಗಿಸಿಕೊಳ್ಳುತ್ತಿದ್ದೇನೆ. ಹಿಂದಿನ ಸರ್ಕಾರಗಳು ಅಥವಾ ಹಿಂದಿನ ಸರ್ಕಾರ ಮಾಡಿದ್ದು ಏನು? ಲಾ ಅಂಡ್ ಆರ್ಡರ್ ವಿಚಾರದಲ್ಲಿ ನಾವು ವಿಮರ್ಶೆ ಮಾಡತಕ್ಕಂಥ ಕಾಲದಲ್ಲಿ ಮೊದಲು ನೀವು ಪೋಲೀಸಿನವರ ಜೊತೆಯಲ್ಲಿ ಯಾವ ರೀತಿ ವರ್ತನೆ ಮಾಡಿದಿರಿ, ಅದರಿಂದ ಏನು ಪರಿಣಾಮ ಆಯಿತು ಎನ್ನತಕ್ಕಂಥಾದ್ದನ್ನು ನಾನು ಉದಾಹರಿಸಿದರೆ ಅದು ಅಪ್ರಸ್ತುತ ಆಗಲಿಕ್ಕೆ ಸಾಧ್ಯವಿಲ್ಲ. ನೀವು ಪೋಲೀಸಿನವರ ಜೊತೆಯಲ್ಲಿ ಅದರಲ್ಲೂ ಪೋಲೀಸ್ ಮುಖ್ಯಸ್ಥರ ನೇಮಕದ ವಿಚಾರದಲ್ಲಿ ನಡೆಸಿಕೊಂಡಂಥ ರೀತಿನೀತಿಗಳು, ನೀವು ನಡೆಸಿದಂಥ ಆಡಳಿತಕ್ಕೆ ಹಿಡಿದಂಥ ಸ್ಪಷ್ಟವಾದ ಕನ್ನಡಿ ಎನ್ನತಕ್ಕಂಥಾದ್ದನ್ನು ನಾನು ಹೇಳುತ್ತೇನೆ. ರಾಜ್ಯವನ್ನು ಕೋರ್ಟುಗಳಿಗೆ ಎಳೆಯುವುದಕ್ಕೆ ನೀವು ಕಾರಣೀಭೂತರಾಗಿದ್ದೀರಿ. ಯಾವ ನಾಲಗೆಯಿಂದ ಈ ಸರ್ಕಾರವನ್ನು ಇವತ್ತು ನೀವು ಕೇಳುವುದು? Law and Order situation ಕಂಬಾಲಪಲ್ಲಿಯಲ್ಲಿ ಹೀಗೆ ಆಯಿತು, ಮತ್ತೊಂದು ಕಡೆ ಹಾಗೆ ಆಯಿತು ಎಂದು? ಬಿ.ಜೆ.ಪಿ.ಯವರು ಏನು ಹೇಳುತ್ತಾರೋ ಗೊತ್ತಿಲ್ಲ. ಆ ವಿಚಾರದಲ್ಲಿ ನೀವು ಚಕಾರ ಎತ್ತಲಿಲ್ಲ. ಚಕಾರ ಎತ್ತದೇ ಇರುವುದು ಇದು ನಿಮ್ಮ ನೈತಿಕ ದಿವಾಳಿತನವನ್ನು ತೋರಿಸುತ್ತದೆ. ಬಾಕಿ ಎಲ್ಲ ವಿಚಾರಗಳ ಬಗ್ಗೆ ಮಾತನಾಡಿದ್ದೇ ಮಾತನಾಡಿದ್ದು. ಎಲ್ಲಿ ಸರ್ಕಾರ ಒಳ್ಳೆಯ ಕೆಲಸ ಮಾಡುತ್ತದೆ, ಎಲ್ಲಿ derail ಆಗಿದ್ದಂಥ ಪೋಲೀಸ್ ಫೋರ್ಸ್‌ನ್ನು Rail ಮೇಲೆ ತಂದು ನಿಲ್ಲಿಸಿದ್ದೇವೆ ನಾವು. ಅದಕ್ಕೆ ಒಂದು ಒಳ್ಳೆಯ ಮಾತು ಇಲ್ಲ. ಹಿಂದೆ ಏನು ಮಾಡಿದ್ದರು ಗೊತ್ತಿಲ್ಲ ನಮಗೆ. ಆದರೆ ಇವತ್ತು ನಾವು ಸ್ಪಷ್ಟವಾಗಿ ಧೈರ್ಯದಿಂದ, ನಿರ್ಭೀತಿಯಿಂದ, ಆತ್ಮಸಾಕ್ಷಿಗೋಸ್ಕರ ನಾವು ಹೇಳುತ್ತಿದ್ದೇವೆ ಇವತ್ತು ಪೋಲೀಸ್ ಫೋರ್ಸ್‌ನಲ್ಲಿ ನಾವು ಹಸ್ತಕ್ಷೇಪ ಮಾಡುತ್ತಿಲ್ಲ. ಹಿಂದೆ ಏಕೆ ಹಸ್ತಕ್ಷೇಪ ಮಾಡಿದಿರಿ ಎಂದು ನಾವು ಕೇಳುತ್ತಿದ್ದೇವೆ. ಇನ್ನು ಕ್ರೈಮ್‌ರೇಟ್ ಬಗ್ಗೆ ಹೇಳಬೇಕೆಂದರೆ ಈ ಫಿಗರ್ಸ್ ಏನಿವೆ ಅದು ಇವತ್ತಿನ, ವರ್ತಮಾನ ಪರಿಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ. ಸಮಾಜದಲ್ಲಿ ತೀಕ್ಷ್ಣತೆಗಳು ಜಾಸ್ತಿಯಾಗುತ್ತಿದೆ, ಸಮಾಜದಲ್ಲಿ Complexities ಜಾಸ್ತಿಯಾಗುತ್ತಿದೆ. ಒಂದುಕಡೆ ಇರುವವರು ಮತ್ತು ಇಲ್ಲದೇ ಇರುವವರ ಮಧ್ಯೆ ಇರತಕ್ಕಂಥ ಕಂದಕ ದೊಡ್ಡದಾಗುತ್ತಾ ಇದ್ದರೆ ಇನ್ನೊಂದು ಕಡೆ ಜಾತಿ ಮತ್ತು ಉಪಜಾತಿಗಳ ಹೆಸರಿನಲ್ಲಿ ಈ ದಿವಸ ಸಮಾಜವನ್ನು ಉದ್ವಿಗ್ನವಾದಂಥ ಪರಿಸ್ಥಿತಿಯತ್ತ ತಳ್ಳತಕ್ಕಂಥ ಶಕ್ತಿಗಳಿಗೆ ನಮ್ಮ ರಾಜ್ಯದಲ್ಲಿ, ನಮ್ಮ ದೇಶದಲ್ಲಿ ಕೊರತೆ ಇಲ್ಲ. ಆದರೆ, ಆ ಶಕ್ತಿಗಳನ್ನು ನಿಯಂತ್ರಣ ಮಾಡತಕ್ಕಂಥ ಶಕ್ತಿ ಈ ಸರ್ಕಾರಕ್ಕೆ ಇದೆಯೇ? ರಾಜಕೀಯ ಇಚ್ಛಾಶಕ್ತಿ ಈ ಸರ್ಕಾರಕ್ಕೆ ಇದೆಯೇ ಎನ್ನತಕ್ಕಂಥಾದ್ದನ್ನು ನಾವು ಒರೆಗಲ್ಲಿಗೆ ಹಾಕಿ ನೋಡಬೇಕಾಗುತ್ತದೆ. ಅಕ್ಟೋಬರ್ 1998 ಮತ್ತು ಮಾರ್ಚ್ 99ರವರೆಗೆ Reported crimes-murder, Dacoity, Robbery etc., ಇವುಗಳು 14,394. ಕಳೆದ ಅಕ್ಟೋಬರ್ 1999 ರಿಂದ ಮಾರ್ಚ್ 2000ದವರೆಗೆ 13,567. ಎಲ್ಲಿ Marginal increase ಆಗಬೇಕೋ ಅಲ್ಲಿ you will find a marginal decrease in the

crime rate ಇದು ಏನನ್ನು ತೋರಿಸುತ್ತದೆ? law and order situation ಕೈಮೀರಿ ಹೋಗಿದೆ ಎನ್ನುವುದಕ್ಕೆ ಈ ಫಿಗರ್ಸ್ ದ್ಯೋತಕವಾಗುತ್ತದೆಯೋ ಅಥವಾ law and order situation ನಿಯಂತ್ರಣಕ್ಕೆ ತಕತಕ್ಕಂಥ ದಿಸೆಯಲ್ಲಿ ಈ ಸರ್ಕಾರ ಕಾರ್ಯೋನ್ಮಗ್ನವಾಗಿದೆಯೇ ಎನ್ನತಕ್ಕಂಥಾದ್ದನ್ನು ಪ್ರತಿಬಿಂಬಿಸುತ್ತಿದೆ ಎನ್ನುವುದನ್ನು ಸದನ ಯೋಚನೆ ಮಾಡಬೇಕಾಗಿರತಕ್ಕಂಥಾದ್ದು ಬಹಳ ಅಗತ್ಯ. ಮತ್ತು ಪೋಲೀಸಿನವರ ಅತಿರೇಕಗಳ ಬಗ್ಗೆ ಮಾತನಾಡಿದ್ದಾರೆ. ಮಾನ್ಯ ಗೃಹಸಚಿವರು ಈಗಾಗಲೇ ಹೇಳಿದ್ದಾರೆ. ಪೋಲೀಸಿನವರು ಈ ರಾಜ್ಯದಲ್ಲಿ ರಕ್ಷಣಾ ವ್ಯವಸ್ಥೆಯನ್ನು, ನಮ್ಮ ನಾಗರಿಕರ ಮೂಲಭೂತ ಹಕ್ಕುಗಳನ್ನು ರಕ್ಷಣೆ ಮಾಡತಕ್ಕದ್ದು, ಅವರ ಆಸ್ತಿಗಳನ್ನು, ಅವರ ಪ್ರಾಣವನ್ನು ಜೋಪಾನವಾಗಿ ಇಡತಕ್ಕದ್ದು, ಭದ್ರಗೊಳಿಸತಕ್ಕದ್ದು ಪೋಲೀಸಿನವರು ತಮ್ಮ ಮೇಲೆ ಹೊತ್ತುಕೊಂಡಿರತಕ್ಕಂಥ ಜವಾಬ್ದಾರಿ. ಈ ಜವಾಬ್ದಾರಿಯನ್ನು ನಿರ್ವಹಣೆ ಮಾಡುವ ಕಾಲದಲ್ಲಿ ಪೋಲೀಸಿನವರು ಆಯಾಯ ಪ್ರಕರಣಗಳ ಇತಿಮಿತಿಗೆ ತಕ್ಕಂತೆ ಅವರು ವರ್ತನೆ ಮಾಡಲೇಬೇಕಾಗುತ್ತದೆ. ಇಲ್ಲದಿದ್ದರೆ ರಾಜ್ಯದಲ್ಲಿ ಶಾಂತಿಯನ್ನು ಕಾಯುವುದಕ್ಕೆ ಸಾಧ್ಯವಾಗುವುದಿಲ್ಲ. ಇಂತಹ ಸಮಯದಲ್ಲಿ ಕೆಲವು ಸಮಯ Response-short of our expectation ಆಗಬಹುದು. ಇದು sometimes subjective assessment ಮೇಲೆ ನಿರ್ಣಯವಾಗಬೇಕಾಗುತ್ತದೆ. Sometimes objective assessmentನ್ನು ನಾವು ಮಾಡಿ ನಿರ್ಣಯ ಮಾಡಬೇಕಾಗುತ್ತದೆ. ಆದರೆ ಕಳೆದ ಆರು ತಿಂಗಳಲ್ಲಿ ಎಲ್ಲಿಯೂ ಗೋಲಿಬಾರು ನಡೆದಿಲ್ಲ ಎನ್ನತಕ್ಕಂಥಾದ್ದು ನಾವು ಗಮನಕ್ಕೆ ತೆಗೆದುಕೊಳ್ಳಬೇಕಾಗಿರತಕ್ಕಂಥ ಅತ್ಯಂತ ಪ್ರಾಮುಖ್ಯವಾದಂಥ ವಿಚಾರ. ಪೋಲೀಸ್ ಮ್ಯಾನ್ಯುಯಲ್‌ನಲ್ಲಿ ಒಂದು ರಹಸ್ಯ ಏನೆಂದರೆ ಎಲ್ಲಿ ಪೋಲೀಸಿನವರು ಗೋಲಿಬಾರಿಗೆ, ಗುಂಡು ಹಾರಿಸುವುದಕ್ಕೆ ಉದ್ಯುಕ್ತರಾಗುವುದಿಲ್ಲ, ಆ ರಾಜ್ಯದಲ್ಲಿ, ಆ ಪ್ರದೇಶದಲ್ಲಿ ಯಶಸ್ವಿಯಾಗಿ ಪೋಲೀಸ್ ತನ್ನ ಆಡಳಿತವನ್ನು ನಡೆಸುತ್ತಿದೆ ಎನ್ನುವುದಕ್ಕೆ ಅದು ಒಂದು Benchmark ಒಂದು Barameter ಈ ದೃಷ್ಟಿಯಿಂದ ನಮ್ಮ ರಾಜ್ಯದ ಪೋಲೀಸಿನವರು ಕಳೆದ ಆರು ತಿಂಗಳಲ್ಲಿ ನಡೆಸಿಕೊಂಡು ಬಂದಿರತಕ್ಕಂಥ ರೀತಿನೀತಿಗಳು, ಎಲ್ಲಿಯಾದರೂ ಅತಿರೇಕಗಳು ಆಗಿದ್ದರೆ ಅಲ್ಲಿ ತಕ್ಷಣ ರಾಜ್ಯ ಸರ್ಕಾರ ನಿಮ್ಮ ಅನಿಸಿಕೆಗಳಿಗೆ ಸ್ಪಂದಿಸಿದೆ ಎನ್ನತಕ್ಕಂಥ ಸಮಾಧಾನ ನಮ್ಮದು. ಅಸ್ನೋಟಕರ್ ಅವರ ಕೊಲೆಯಾಯಿತು. ಇದೇ ಸದನದಲ್ಲಿ ಆವತ್ತು ನಾನು ಹೇಳಿದ್ದೆ. ನೀವು ಸಿ.ಬಿ.ಐ. ಎನ್‌ಕ್ವೈರಿ ಮಾಡಿಯೆಂದು ಹೇಳಿದಿರಿ. ನಾನು ಹೇಳಿದ್ದೆ ಇದು ಸಾಧ್ಯವಾಗುವುದಿಲ್ಲವೆಂದು. ನಮ್ಮ ಗೃಹಸಚಿವರೂ ಸಾಧ್ಯವಾಗುವುದಿಲ್ಲವೆಂದು ಹೇಳಿದರು. ಏಕೆಂದರೆ ನಮ್ಮ ಪೋಲೀಸಿನವರಲ್ಲಿ ನಮ್ಮ ವಿಶ್ವಾಸದ ಮಟ್ಟ ಅಷ್ಟರಮಟ್ಟಿಗೆ ಇತ್ತು. ಯಾರು ಆರೋಪಿಗಳು ಎಂದು ಹೇಳಿ ಯಾರಮೇಲೆ ಕೈಬೆಟ್ಟು ತೋರಿಸುತ್ತಿದೆ ಅಂತಹವರನ್ನು ಹಿಡಿದು ತರುತ್ತೇವೆ ಎನ್ನತಕ್ಕಂಥ ಆತ್ಮವಿಶ್ವಾಸ ನಮ್ಮಲ್ಲಿ ಇತ್ತು. ಆದ್ದರಿಂದಲೇ ನಾನು ಹೇಳಿದ್ದೆ ನಮ್ಮ ಪೋಲೀಸಿನವರು, ಸಿ.ಒ.ಡಿ.ಯವರೇ ಈ

ಕೆಲಸ ಮಾಡುತ್ತಾರೆ ಎಂದು. ಹಿಂದೆ ಯಾವ ಸರ್ಕಾರವೂ ಮಾಡದೇ ಇದ್ದಂಥ, ಅದರಲ್ಲೂ ದುಬ್ಯಾನಲ್ಲಿ Extradition Treaty ನಮಗೆ ಇಲ್ಲ ದುಬ್ಯಾಗೆ ಹೋಗಿ ಅವಿತುಕೊಂಡಿದ್ದಂಥ ಒಬ್ಬ ಅಕ್ಯೂಸ್ಡ್‌ನ್ನು ಕರ್ನಾಟಕಕ್ಕೆ ತೆಗೆದುಕೊಂಡು ಬಂದು ಇಲ್ಲಿಯ ನ್ಯಾಯಸ್ಥಾನದ ಮುಂದೆ ಅವನನ್ನು ನಿಲ್ಲಿಸತಕ್ಕಂಥಾದ್ದು ಸಾಮಾನ್ಯವಾದ ಸಾಧನೆ ಎಂದು ತಿಳಿದಿದ್ದೀರೇನು?

ಇಂತಹ ಒಂದು ಸಾಧನೆಯನ್ನು ನೀವು ಮಾಡಿದ್ದೇವೆಂದು ಹೇಳುವುದಕ್ಕೆ ಸಾಧ್ಯವಾಗುತ್ತದೆಯೇ? ಇನ್ನು ಚಿತ್ತರಂಜನ್‌ರವರ ಕೊಲೆಯಾಯಿತು, ಸಿ.ಬಿ.ಐ.ಗೆ ಕೊಟ್ಟಿರಿ, ಹಾಕಿದರು ನಿಮಗೆ ಪಂಗನಾಮ. ಆದ್ದರಿಂದ ನಿಮಗೆ ಒಂದು ಕಿವಿ ಮಾತು ಹೇಳುತ್ತೇನೆ. ನಿಮಗೆ ''ಹಿತ್ತಲ ಗಿಡ ಮದ್ದಲ್ಲ'' ನಿಮಗೆ ಬೇಕು ಸಿ.ಬಿ.ಐ. ಮದ್ದು. ಅವರಿಂದ ನಾನು ಅರ್ಥಮಾಡಿಕೊಳ್ಳಬಲ್ಲೆ. ನೀವು ಏಕೆ ಆ ಟ್ರ್ಯಾಕಿಗೆ ಬೀಳುತ್ತಿದ್ದೀರೋ ನನಗೆ ಗೊತ್ತಾಗುತ್ತಿಲ್ಲ. ಆದ್ದರಿಂದ, ಆಸ್ನೋಟಕರ್ ಕೊಲೆ ಮೊಕದ್ದಮೆಯಲ್ಲಿ, ನಮ್ಮ ಸಿ.ಓ.ಡಿ. ಪೋಲೀಸಿನವರು ಹೇಗೆ ಕಾರ್ಯನಿರ್ವಹಣೆ ಮಾಡಿದರು ಎನ್ನುವುದನ್ನು ಕೇವಲ ಸರ್ಕಾರ ಶ್ಲಾಘನೆ ಮಾಡತಕ್ಕಂಥದ್ದಲ್ಲ. ಇಡೀ ಸದನ ಒಕ್ಕೊರಲಿನಿಂದ ಆ ಪೋಲೀಸಿನವರ ಈ ಸಾಧನೆಯನ್ನು ಈ ದಿವಸ ಪ್ರಶಂಸೆ ಮಾಡಬೇಕಾಗಿರತಕ್ಕಂತಾದ್ದು ಬಹಳ ಅಗತ್ಯವೆಂದು ನಾನು ಭಾವನೆ ಮಾಡುತ್ತೇನೆ. ಈ ಸರ್ಕಾರ ಬಂದು, ಹೊಸ ಮಂತ್ರಿಮಂಡಲ ಬಂತು, ಬೇಕಾದಷ್ಟು ಹಣ ಪೋಲು ಮಾಡಿಬಿಟ್ಟರು, ವಾಸ್ತುಗೆ ಹಣ ಹಾಕಿದರು, ಕಟ್ಟಡಗಳು ಈ ರೀತಿ ಇದ್ದುದನ್ನು, ಈ ರೀತಿ ತಿರುಗಿಸಿದರು ಎಂದು ಬಹಳ ಜನ ಭಾಷಣ ಮಾಡಿದರು. 1989ನೇ ಇಸವಿಯಿಂದ ಬಂದಂಥ ಮುಖ್ಯಮಂತ್ರಿಗಳು ಎಷ್ಟೆಷ್ಟು ಹಣವನ್ನು ಖರ್ಚುಮಾಡಿದ್ದಾರೆಂಬ ಮಾಹಿತಿ ನನ್ನ ಹತ್ತಿರ ಇದೆ. ಅವರು ಇವತ್ತು ಟೆನೆಂಟ್ ಆಗಿ ಉಳಿಯುತ್ತಾರೆ. ಈಗ ನಾನೇನು ಟೆನೆಂಟ್ ಆಗಿದ್ದೇನೆ 'ಅನುಗ್ರಹ'ದಲ್ಲಿ, ಈ ಸದನದ ಅನುಗ್ರಹ ಇರುವವರೆಗೆ ಕೂಡ ನಾನು ಅಲ್ಲಿ ಟೆನೆಂಟ್ ಆಗಿರುತ್ತೇನೆ. ಆ 'ಅನುಗ್ರಹ'ದ ಮೇಲೆ ಎಷ್ಟು ಹಣ ಖರ್ಚು ಮಾಡಿದ್ದಾರೆ? 80 ಲಕ್ಷ ರೂಪಾಯಿಗಳು ವಾಸ್ತು, ವಿನ್ಯಾಸ, ಮತ್ತಿತರೆ ಕೆಲಸಕ್ಕಾಗಿ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಪೀಠೋಪಕರಣಕ್ಕೆ 10 ಲಕ್ಷ 68 ಸಾವಿರ ರೂಪಾಯಿಗಳು ಆಧುನೀಕರಣಕ್ಕೆ 24 ಲಕ್ಷದ 96 ಸಾವಿರ ರೂಪಾಯಿಗಳು, ಮಾನ್ಯ ವೀರಪ್ಪ ಮೊಯ್ಲಿಯವರು ಮುಖ್ಯಮಂತ್ರಿಯಾಗಿದ್ದಾಗ ಪೀಠೋಪಕರಣಕ್ಕೆ 11 ಲಕ್ಷ 85 ಸಾವಿರ ರೂಪಾಯಿಗಳು ಆಧುನೀಕರಣಕ್ಕೆ 11 ಲಕ್ಷದ 70 ಸಾವಿರ ರೂಪಾಯಿಗಳು, ಮಾನ್ಯ ದೇವೆಗೌಡರು ಮುಖ್ಯಮಂತ್ರಿಗಳಾಗಿದ್ದಾಗ ಪೀಠೋಪಕರಣಕ್ಕೆ 12 ಲಕ್ಷದ 29 ಸಾವಿರ ರೂಪಾಯಿಗಳು ಆಧುನೀಕರಣಕ್ಕೆ 5 ಲಕ್ಷದ 43 ಸಾವಿರ ರೂಪಾಯಿಗಳು, ಮಾನ್ಯ ಜೆ.ಹೆಚ್.ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಪೀಠೋಪಕರಣಕ್ಕೆ 19 ಲಕ್ಷ 69 ಸಾವಿರ ರೂಪಾಯಿಗಳು ಆಧುನೀಕರಣಕ್ಕೆ 7 ಲಕ್ಷ 3 ಸಾವಿರ ರೂಪಾಯಿಗಳು ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾದ ಮೇಲೆ ಪೀಠೋಪಕರಣಕ್ಕೆ 3 ಲಕ್ಷ 27 ಸಾವಿರ

ರೂಪಾಯಿಗಳು ಆಧುನೀಕರಣಕ್ಕೆ 14 ಲಕ್ಷದ 900 ರೂಪಾಯಿ. ನೀವು ಇದನ್ನು ಕಂಪೇರ್ ಮಾಡಿ ನೋಡಿ. ಜನತಾ ದಳದ ಇಬ್ಬರು ಮುಖ್ಯ ಮಂತ್ರಿಗಳ ವೆಚ್ಚವನ್ನೂ ಇದರ ಜೊತೆಯಲ್ಲಿ ಕಂಪೇರ್ ಮಾಡಿ. ಇದು 1994 ಪ್ರೈಸಸ್, ನಮ್ಮಲ್ಲಿಯೂ ಎಕಾನಮಿಸ್ಟ್ ಇದ್ದಾರೆ. ಅವರು ಯಾವಾಗಲೂ ಈ ಎಸ್ಕಲೇಷನ್‌ನ್ನು ಲೆಕ್ಕಾಚಾರ ಮಾಡುತ್ತಾರೆ. ನೀವು ಏನು ಉತ್ತರ ಕೊಡುತ್ತೀರಿ?

ನಿನ್ನೆ ಯಾರೋ ಶ್ರೀಕಂಠಯ್ಯನವರ ಬೆಡ್‌ರೂಮ್ ವಿಚಾರದ ಬಗ್ಗೆ ಮಾತನಾಡಿದರು. ಇದಕ್ಕೆ ನೀವು ಏನು ಹೇಳುತ್ತೀರಿ? ಇನ್ನು ಮಂತ್ರಿಗಳು ಎಷ್ಟೆಷ್ಟು ಖರ್ಚು ಮಾಡಿದರು ಎನ್ನುವುದಕ್ಕೆ ಮಾನ್ಯ ಬಸವಲಿಂಗಪ್ಪನವರ ಕಾಲದಿಂದ ಎಲ್ಲಾ ವಿವರಗಳೂ ನನ್ನ ಹತ್ತಿರ ಇವೆ. ಮಾನ್ಯ ಬೈರೇಗೌಡರು ಪೀಠೋಪಕರಣಗಳಿಗಾಗಿ 11 ಲಕ್ಷ 50 ಸಾವಿರ ರೂಪಾಯಿಗಳು ಆಧುನೀಕರಣಕ್ಕೆ 18 ಲಕ್ಷ ರೂಪಾಯಿಗಳು ಅವತ್ತು ನೀವು ಯಾರಾದರೂ ಇದನ್ನು ಪ್ರಶ್ನೆ ಮಾಡಿದರೇನು? ನೀವು ಯಾರೂ ಆ ಗೋಜಿಗೇ ಹೋಗಲಿಲ್ಲ.

ಶ್ರೀ ಸಿ.ಬೈರೇಗೌಡ: ಅದು ವಾಸ್ತುವಿಗೋಸ್ಕರ ಖರ್ಚು ಮಾಡಿಸಿದ್ದಲ್ಲ. ಕಟ್ಟಡ ವಿಸ್ತರಣೆಗಾಗಿ ಹೆಚ್ಚುವರಿಯಾಗಿ ಖರ್ಚಾಗಿರತಕ್ಕಂತಾದ್ದು. ವಾಸ್ತು ಎಂಬ ನಂಬಿಕೆ ವೈಯಕ್ತಿಕವಾಗಿರತಕ್ಕಂತಾದ್ದು. ಈ ವಾಸ್ತುವಿಗೆ ಸರ್ಕಾರದ ಹಣವನ್ನು ಪೋಲು ಮಾಡುವಂತಾದ್ದು ಎಲ್ಲಿದೆ? ನೀವು ಅರ್ಥ ಮಾಡಿಕೊಂಡು ಮಾತನಾಡಬೇಕಾಗುತ್ತದೆ.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೇ, ವಿಧಾನ ಸಭೆಯಲ್ಲಿ ಈ ಚರ್ಚೆಗಳು ಹಿಟ್ ಅಂಡ್ ರನ್ ಆಗುವುದಕ್ಕೆ ನಾವು ಅವಕಾಶ ಕೊಡುವುದಿಲ್ಲ When you hit me, you should be able to receive it. ನಾನು ಬುರುಡೆ ಬಿಡುತ್ತಾ ಇಲ್ಲ, ಬೊಗಳೆ ಹೊಡೆಯುತ್ತಾ ಇಲ್ಲ.

ಶ್ರೀ ಸಿ.ಬೈರೇಗೌಡ: ನೀವು ನಂಜಿಕೆ ಇಟ್ಟಿದ್ದೀರಲ್ಲ, ಆ ನಂಬಿಕೆಗಳಿಗೆ ನಾವು ಹಣ ಖರ್ಚು ಮಾಡಿರುವುದಲ್ಲ. ಅದು ವಾಸ್ತುಗೋಸ್ಕರ ಖರ್ಚು ಮಾಡಿರುವುದಲ್ಲ. ಕಟ್ಟಡ ವಿಸ್ತರಣೆ ಮಾಡುವುದಕ್ಕೆ ಖರ್ಚು ಮಾಡಿರುವುದು. ನೀವು ಅದನ್ನು ತೆಗೆಸಿ. ಯಾವ ವಾಸ್ತುವನ್ನು ಕರೆಸುತ್ತೀರೋ ಕರೆಸಿ, ನೋಡೋಣ. ನಿಮ್ಮ ವೈಯಕ್ತಿಕ ನಂಬಿಕೆಗಳಿಗೆ ಸರ್ಕಾರದ ಹಣವನ್ನು ಖರ್ಚು ಮಾಡಿದ್ದೀರಲ್ಲ, ಅದನ್ನು ನಾವು ಪ್ರಶ್ನೆ ಮಾಡತಕ್ಕಂತಾದ್ದು.

ಅಧ್ಯಕ್ಷರು: ಈ ರೀತಿ ಮಧ್ಯದಲ್ಲಿ ಕೇಳುವುದು ಬೇಡ. ಕೊನೆಯಲ್ಲಿ ಕೇಳಿ.

ಶ್ರೀ ಎಸ್.ಎಂ.ಕೃಷ್ಣ: ಸಾರ್ವಜನಿಕ ಕಟ್ಟಡಗಳ ಮೇಲೆ ನಾವು ನಿರ್ವಹಣೆ ಮಾಡತಕ್ಕಂಥ ಪರಿಪಾಠವನ್ನು ಮುಂದುವರಿಸಿಕೊಂಡು ಬರದೇ ಹೋದರೆ, ನಮ್ಮ

ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನವರು ಕಟ್ಟತಕ್ಕ ಯಾವ ಕಟ್ಟಡಗಳೂ ಕೂಡ ಉದ್ಧಾರವಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಅದನ್ನು ಮಾಡಬೇಕಾಗಿರತಕ್ಕಂಥದ್ದು ಅವಶ್ಯಕ ಎನ್ನುವುದನ್ನು ಪ್ರತಿಪಾದನೆ ಮಾಡಲಿಕ್ಕೆ ನಾನು ನಿಂತಿದ್ದೇನೆ. ಪ್ರತಿಯೊಂದು ಸರ್ಕಾರಿ ಕಟ್ಟಡವನ್ನು, ವಿಧಾನ ಸೌಧ ಕಟ್ಟಡವನ್ನೂ ಒಳಗೊಂಡು, ನಮ್ಮ ಪರಿವೀಕ್ಷಣಾ ಮಂದಿರಗಳನ್ನೂ ಸೇರಿಸಿಕೊಂಡು, ಶಾಲಾ ಕಟ್ಟಡಗಳನ್ನೂ ಸೇರಿಸಿಕೊಂಡು ನಿರ್ವಹಣೆ ಬಗ್ಗೆ ನಾವು ಹೆಚ್ಚು ಗಮನವನ್ನು ಕಳೆದ ಹತ್ತಾರು ವರ್ಷಗಳಿಂದಲೂ ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಇದರಿಂದ ಕಟ್ಟಡಗಳ ಲಾಂಗ್‌ವಿಟಿ ದಿನೇ ದಿನೇ ಕಡಿಮೆಯಾಗುತ್ತಿದೆ. ನಮ್ಮ ಪೂರ್ವಿಕರು ಕಟ್ಟಿದಂಥ ಕಟ್ಟಡಗಳು, ರಸ್ತೆಗಳು ನೂರಾರು ವರ್ಷಗಳಿಂದ ಇವೆ. ಆದರೆ, ನಾವು ಕಟ್ಟಿದಂಥ ಸೇತುವೆಗಳು, ನಾವು ಕಟ್ಟಿದಂಥ ಕಟ್ಟಡಗಳು ನೂರು ವರ್ಷಗಳು ಇರುತ್ತವೆಂದು ಯಾರಾದರೂ ಧೈರ್ಯವಾಗಿ ಹೇಳುವುದಕ್ಕೆ ಸಾಧ್ಯವಾಗುತ್ತದೆಯೇ? ಆ ದೃಷ್ಟಿಯಿಂದ ನಾನು ಈ ಪ್ರಶ್ನೆಗೆ ಸ್ಪಂದಿಸುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇನೆ. ಇಂತಹ ಸಣ್ಣ ವಿಚಾರಗಳಿಗೆ ನಾವು ಹೆಚ್ಚು ಗಮನವನ್ನು ಕೊಡತಕ್ಕಂಥದ್ದು ಕೆಲವೊಮ್ಮೆ ಬಹಳ ಅವಶ್ಯಕ ಆಗಬಹುದು. ಹಾಗೆ ಇವತ್ತು ಅವಶ್ಯಕತೆ ಇದೆಯೆಂದು ನಾನು ಭಾವನೆ ಮಾಡುತ್ತೇನೆ. ನಾವು ಕಟ್ಟಡಗಳ ಮೇಲೆ ಎಷ್ಟು ಹಣ ಖರ್ಚುಮಾಡಿದ್ದೇವೆ ಎಂಬುದನ್ನು ನೀವು ಸಾರ್ವಜನಿಕರ ಗಮನಕ್ಕೆ ತಂದು ಉಪಕಾರ ಮಾಡಿದ್ದೀರಿ. ಇಲ್ಲದೇ ಹೋದರೆ, ನಾವು ಈ ಹೋಲಿಕೆ ಪಟ್ಟಿಯನ್ನು ಸದನದ ಮುಂದೆ ಇಡಲಿಕ್ಕೆ ಸಾಧ್ಯವೇ ಆಗುತ್ತಿರಲಿಲ್ಲ. ಅದಕ್ಕೋಸ್ಕರ ನಿಮಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತಾ ಇದ್ದೇನೆ. ಆದರೆ, ಮುಂದಿನ ನಾಲ್ಕುವರೆ ವರ್ಷಗಳಲ್ಲಿ ಸರ್ಕಾರಿ ಕಟ್ಟಡಗಳನ್ನು ನಿರ್ವಹಣೆ ಮಾಡಲಿಕ್ಕೆ ವಿಶೇಷವಾದ ಗಮನವನ್ನು ಕೊಡಲು ನಾವು ತೀರ್ಮಾನ ಮಾಡಿದ್ದೇವೆ. ಅದರಲ್ಲಿ ಮಂತ್ರಿಗಳು ಟೆನೆಂಟ್‌ಗಳಾಗಿ ಉಳಿದಿರತಕ್ಕ ಕಟ್ಟಡಗಳೂ ಸೇರುತ್ತವೆ ಎಂದು ಹೇಳುತ್ತೇನೆ. ಅದು ವಾಸ್ತುಗೋಸ್ಕರ ಮಾಡುತ್ತಾರೋ, ಮತ್ತೊಂದಕ್ಕೋಸ್ಕರ ಮಾಡುತ್ತಾರೋ ಅದು ಗೌಣ. ಆದರೆ, ಎಷ್ಟು ಹಣ ಖರ್ಚು ಮಾಡಿದ್ದಾರೆಂಬುದು ಪ್ರಾಮುಖ್ಯ. ಮಾನ್ಯ ಎಸ್.ಎಸ್.ಪಾಟೀಲರು ಬಹಳ ಸಂಕಟಪಟ್ಟು ನಾನು 20 ಪರ್ಸೆಂಟ್ ಬಿಟ್ಟುಬಿಡುತ್ತಿದ್ದೇನೆ ನೀವು ಎಲ್ಲಾ ಬಿಟ್ಟುಬಿಡಿ, ದೇಶ ಉದ್ಧಾರ ಮಾಡುವುದಕ್ಕೋಸ್ಕರ, ರಾಜ್ಯ ಉದ್ಧಾರ ಮಾಡುವುದಕ್ಕೋಸ್ಕರ ಎಂದು ನನಗೆ ಸೂಚನೆ ಕೊಟ್ಟಿದ್ದಾರೆ. ಆ ಸೂಚನೆಯನ್ನೂ ನಾನು ಪರಿಶೀಲನೆ ಮಾಡಬೇಕಾಗುತ್ತದೆ. ಏಕೆಂದರೆ, ನೀವೇ ಅಷ್ಟರಮಟ್ಟಿಗೆ ತ್ಯಾಗ ಮಾಡಲಿಕ್ಕೆ ಮುಂದೆ ಬಂದಿರುವಾಗ, ನಾವು ಪರಿಶೀಲಿಸಬೇಕಾಗುತ್ತದೆ. ಇನ್ನು ಆಡಳಿತದಲ್ಲಿ ಚುನಾವಣಾ ಪ್ರಣಾಳಿಕೆ ಮತ್ತು ಇಲ್ಲಿ ರಾಜ್ಯಪಾಲರು ಮಾಡಿರತಕ್ಕಂಥ ಭಾಷಣ. ಇವು ಒಂದಕ್ಕೊಂದಕ್ಕೆ ತಾಳೆ ಇಲ್ಲವೆಂದು ಮಾನ್ಯ ಸದಸ್ಯರು ಭಾಷಣ ಮಾಡಿದ್ದಾರೆ. ಎಲ್ಲರೂ ಚುನಾವಣಾ ಪ್ರಣಾಳಿಕೆಯನ್ನು ಹೊರಡಿಸುತ್ತಿರುತ್ತಾರೆ. ಚುನಾವಣಾ ಪ್ರಣಾಳಿಕೆಯನ್ನು ಯಾವ ಪಕ್ಷ ಹೊರಡಿಸುವುದಕ್ಕಾಗುವುದಿಲ್ಲವೆಂದರೆ, ಯಾರಿಗೆ ಪ್ರಿಂಟಿಂಗ್ ಚಾರ್ಜಸ್ ಕೊಡುವುದಕ್ಕೆ ಶಕ್ತಿ ಇಲ್ಲವೋ ಆ ಪಕ್ಷಗಳು ಮಾತ್ರ ಚುನಾವಣಾ ಪ್ರಣಾಳಿಕೆ

ಹೊರಡಿಸುವುದಿಲ್ಲ. ಬಾಕಿ ಎಲ್ಲಾ ಪಕ್ಷಗಳೂ ಹೊರಡಿಸುತ್ತವೆ. ನಮ್ಮ ಮಾನ್ಯ ಸದಸ್ಯರು 1994ನೇ ಇಸವಿಯಲ್ಲಿ ಚುನಾವಣಾ ಪ್ರಣಾಳಿಕೆಯನ್ನು ಹೊರಡಿಸಿದರು. ಅವರೂ 5 ವರ್ಷ ಮುಗಿಸಿದರು. ಅವರು 5 ವರ್ಷ ಮುಗಿಸಿದ ಮೇಲೆ, ಆ ಚುನಾವಣಾ ಪ್ರಣಾಳಿಕೆಯಲ್ಲಿರತಕ್ಕ ಎಷ್ಟು ಅಂಶಗಳನ್ನು ಅವರು ಕಾರ್ಯರೂಪಕ್ಕೆ ತಂದಿದ್ದಾರೆ ಎಂಬ ಲೆಕ್ಕವನ್ನು ಈ ಸದನಕ್ಕೆ ಕೊಡಬೇಕಾಗಿರತಕ್ಕಂಥದ್ದು ಅವಶ್ಯಕವಾಗಿದೆ.

12-40 ಪಿ.ಎಂ

ನಾನು ಎರಡು ಮೂರು ವಿಚಾರಗಳನ್ನು ಮಾತ್ರ ಅವರ ಗಮನಕ್ಕೆ ತರುತ್ತೇನೆ. ಭ್ರಷ್ಟಚಾರ ಲೋಕಾಯುಕ್ತದ ಹಲ್ಲು ಮತ್ತಷ್ಟು ಹರಿತ ಮಾಡುತ್ತವೆ ಹಾಗೆ ಎಂದು ಹೇಳಿದ್ದಾರೆ. ಲೋಕಾಯುಕ್ತವನ್ನು ಸ್ವಾಯತ್ತಗೊಳಿಸಿ ಶಿಕ್ಷಿಸುವ ಅಧಿಕಾರವನ್ನು ಅದಕ್ಕೆ ನೀಡುತ್ತೇವೆ ಎನ್ನುವ ವಚನವನ್ನು ನೀಡುತ್ತೇವೆ ಎಂದು ಹೇಳಿದ್ದಿರಿ. ಎಲ್ಲಿ ಮಾಡಿದಿರಿ ಸ್ವಾಮಿ ಹೇಳಿ.

ಶ್ರೀ ಸಿ.ಬೈರೇಗೌಡ: ಮಾನ್ಯ ಅಧ್ಯಕ್ಷರೇ, ನಿನ್ನೆ ನಾನೇ ಪ್ರಸ್ತಾಪ ಮಾಡಿದ್ದೆ. ಇದೇ ಸದನದಲ್ಲಿ ತಾವು ಕೊಟ್ಟಿರತಕ್ಕಂಥ ಉತ್ತರವನ್ನೇ ನಾನು ಉಲ್ಲೇಖಿಸಿದ್ದೇನೆ. ಲೋಕಾಯುಕ್ತ ಅವರು ರೈಡ್ ಮಾಡಿದ ಮೇಲೆ ಈ ರೀತಿ ಕ್ರಮ ತೆಗೆದುಕೊಳ್ಳಬೇಕೆಂದು ಮಾಡುತ್ತಾರೆ. ತಾವು ಮಾಡಿಲ್ಲ ಎಂದು ತಾವೇ ಹೇಳುತ್ತಿದ್ದೀರಿ. ನಾವು ಮಾಡಿದ್ದೇವೆಯೋ ಬಿಟ್ಟಿದ್ದೇವೆಯೋ ಅದು 5 ವರ್ಷಗಳ ಹಿಂದೆ ಮುಗಿದಿದೆ. ತಾವು ಬಂದಮೇಲೆ, ತಾವು ಮುಖ್ಯಮಂತ್ರಿಗಳಾದ ಮೇಲೆ ಇದೇ ಲೋಕಾಯುಕ್ತ ಮಾಡಿರತಕ್ಕಂಥ ಶಿಫಾರಸ್ಸುಗಳನ್ನು ಎಷ್ಟು ಜಾರಿಗೆ ತಂದಿದ್ದೀರಿ? ಆದ್ದರಿಂದಲೇ ನಾನು ಹೇಳಿರತಕ್ಕಂಥಾದ್ದು ಲೋಕಾಯುಕ್ತವನ್ನು It is not only demoralise it has been derailed ಎನ್ನತಕ್ಕಂಥಾದ್ದನ್ನು ಹೇಳಿರತಕ್ಕಂಥಾದ್ದು. ಈಗ ಹೇಳಿ ಸ್ವಾಮಿ, ನೀವು ಕೊಟ್ಟಿರತಕ್ಕಂಥ ಉತ್ತರದಿಂದಲೇ ಹೇಳಿದ್ದು.

ಶ್ರೀ ಎಸ್.ಎಂ.ಕೃಷ್ಣ: ನಾನು ಪ್ರಣಾಳಿಕೆ ವಿಷಯವನ್ನು ಮಾತನಾಡುತ್ತಿದ್ದೇನೆ. ನೀವು ಈ ಪ್ರಣಾಳಿಕೆಯಲ್ಲಿ ನಮೂದಿಸಿರತಕ್ಕಂಥ, ಅತ್ಯಂತ ಪ್ರಾಮುಖ್ಯವಾದ ಪ್ರಚಲಿತವಾದ ವಿದ್ಯಮಾನಗಳ ಬಗ್ಗೆ ಬಹಳ ಹೆಚ್ಚಿನ ಮಹತ್ವವನ್ನು ಪಡೆದಿರತಕ್ಕಂಥ ಒಂದು ವಿಚಾರದ ಕಡೆಗೆ ತಮ್ಮ ಗಮನವನ್ನು ಸೆಳೆಯಬಯಸುತ್ತೇನೆ. ತಾವು ಏಕೆ ಇದನ್ನು ಮಾಡಲಿಲ್ಲ ಎಂದು ಕೇಳುತ್ತಿದ್ದೇನೆ? ನಿಮಗೆ ಮಾಡಲಿಕ್ಕೆ ಸಾಧ್ಯವಾಗದಿದ್ದರೆ ಏಕೆ ಬರೆದಿರಿ ಇಲ್ಲಿ ಹಾಗೆ ಎಂದು ಹೇಳಿ. ಆಮೇಲೆ ಖಾಸಗಿಯವರಿಗೆ ಮತ್ತು ಜಂಟೀ ವಲಯಕ್ಕೆ ಪಾರಿಗೆಯನ್ನು ಕೊಡುವುದು ಸಾಧುಮಾರ್ಗವೆಂದು ನಾವು ಭಾವಿಸಿದ್ದೇವೆ. ಇದನ್ನು 5 ವರ್ಷಗಳಲ್ಲಿ ಕಾರ್ಯಗತಗೊಳಿಸುವ ಭರವಸೆಯನ್ನು ನಾವು ನೀಡುತ್ತೇವೆ. ಒಂದು ವರ್ಷದಲ್ಲಿ ಎಲ್ಲ ಜಿಲ್ಲೆಗಳಲ್ಲೂ, ನಂತರದ 4 ವರ್ಷಗಳಲ್ಲಿ ಎಲ್ಲಾ ತಾಲ್ಲೂಕುಗಳಲ್ಲಿ ಶೃತ್ಯಾಗಾರಗಳನ್ನು ನಿರ್ಮಿಸುವ ಕಾಲಬದ್ಧ ಸ್ಪಷ್ಟ ಭರವಸೆಯನ್ನು ನೀಡುತ್ತೇವೆ.

ಶೈತ್ಯಾಗಾರಗಳನ್ನು ನಿರ್ಮಿಸಿ ಆಮೇಲೆ ನಿರ್ಗಮಿಸಿದಿರಿ ತಾವು. ಎಷ್ಟು ಶೈತ್ಯಾಗಾರಗಳನ್ನು ನಿರ್ಮಿಸಿ ಆನಂತರ ನಿರ್ಗಮಿಸಿದಿರಿ ಎಂದು ನಾನು ಕೇಳುತ್ತಿದ್ದೇನೆ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದೊಂದು ಶೈತ್ಯಾಗಾರಗಳನ್ನು ಮಾಡುತ್ತೇವೆಂದು ಹೇಳಿ, ಆಮೇಲೆ 4 ವರ್ಷಗಳಲ್ಲಿ ಪ್ರತಿಯೊಂದು ತಾಲ್ಲೂಕುಗಳಲ್ಲಿಯೂ ಮಾಡುತ್ತೇವೆಂದು ಹೇಳಿದ್ದೀರಲ್ಲ ಅದನ್ನಾದರೂ ಕೃಪೆ ಮಾಡಿದ್ದರೆ ರಾಜ್ಯದ ಜನತೆ ನಿಮಗೆ ಇನ್ನೊಂದು 10 ಓಟು ಜಾಸ್ತಿ ಕೊಡುತ್ತಿದ್ದರು. ಅದನ್ನು ಮಾಡಲಿಲ್ಲ ನೀವು. ದಿನವೊಂದಕ್ಕೆ 10 ಗಂಟೆಗಳ ಕಾಲ ಕನಿಷ್ಟ ತಡೆರಹಿತವಾಗಿ ವಿದ್ಯುಚ್ಛಕ್ತಿಯನ್ನು ಪೂರೈಸುತ್ತೇವೆ ಎನ್ನುವ ಸ್ಪಷ್ಟ ಭರವಸೆ ನೀಡುತ್ತೇವೆ. ತಾವು ಐದು ವರ್ಷಗಳ ಕಾಲದಲ್ಲಿ 10 ಗಂಟೆಗಳ ಕಾಲ ವಿದ್ಯುಚ್ಛಕ್ತಿ ಕೊಟ್ಟಿರಿ.

ಶ್ರೀ ಸಿ.ಬೈರೇಗೌಡ: ತಾವೇ ನಮ್ಮ ಸರ್ಕಾರಕ್ಕೆ ಧನ್ಯವಾದಗಳನ್ನು ಸಲ್ಲಿಸಿದ್ದೀರಿ. ಅದನ್ನು ತಾವು ಸ್ವಲ್ಪ ಜ್ಞಾಪಕ ಇಟ್ಟುಕೊಂಡು ಉತ್ತರ ಕೊಟ್ಟರೆ ಒಳ್ಳೆಯದು.

ಶ್ರೀ ಎಸ್.ಎಂ.ಕೃಷ್ಣ: ಉದ್ಯೋಗ ಭರವಸೆ ಯೋಜನೆಯನ್ನಾಗಿ ಮಾರ್ಪಡಿಸಲು ತನ್ಮೂಲಕ ಪ್ರತಿಯೊಬ್ಬ ಸಶಕ್ತ ದುಡಿಯುವ ಯುವ ಜನರಿಗೆ ಉದ್ಯೋಗಾವಕಾಶ ಒದಗಿಸಲಾಗುವುದೆಂಬ ಭರವಸೆಯನ್ನು ನೀಡುತ್ತೇವೆ. ಉದ್ಯೋಗ ಭರವಸೆ ನಾವು ನೀಡಿದೆವು ಎನ್ನತಕ್ಕಂಥ ಯಾವುದಾದರೊಂದು ಪ್ರಣಾಳಿಕೆಯನ್ನು ತೋರಿಸಬೇಕು ನನಗೆ. ಕಳೆದ 50 ವರ್ಷಗಳಲ್ಲಿ ಬಂದಿರತಕ್ಕಂಥ ಪ್ರಣಾಳಿಕೆಗಳಲ್ಲಿ ಯಾವುದಾದರೂ ಒಂದನ್ನು ತೋರಿಸಿ ನಾವು ಪ್ರತಿಯೊಬ್ಬ ದುಡಿಯುವ ಕೈಗಳಿಗೆ ನಾವು ಉದ್ಯೋಗವನ್ನು ಕೊಡುತ್ತೇನೆ. ಬಸವಣ್ಣನವರು ಹೇಳಿದಂತೆ ಕಾಯಕವೇ ಕೈಲಾಸ ಹಾಗೆ ಎಂದು ಹೇಳಿ ಆ ಕಾಯಕವೇ ಕೈಲಾಸ ಪ್ರತಿಯೊಂದು ಪ್ರಣಾಳಿಕೆಯಲ್ಲಿ ಪ್ರತಿಯೊಂದು ರಾಜಕೀಯ ಪಕ್ಷದವರು ಕೊಡತಕ್ಕಂಥವರು. ಇವೆಲ್ಲವೂ ಹಾಕಿ ಕೊಂಡಿರತಕ್ಕಂಥಾದ್ದು ತಪ್ಪು ಎಂದು ನಾನು ಹೇಳುತ್ತಿಲ್ಲ. ನಾವು ಹಾಕಿಕೊಂಡಿರತಕ್ಕಂಥ ಗುರಿಗಳು, ಕೆಲವು ಸಮಯ ಗುರಿಗಳು ನೂರಕ್ಕೆ ನೂರರಷ್ಟು ನಾವು ಅದನ್ನು ಸಾಧಿಸುವುದಕ್ಕೆ ಸಾಧ್ಯವಾಗುತ್ತದೆ. ಕೆಲವು ಸಮಯ ಆ ಗುರಿಯನ್ನು ನಾವು ಒಂದಲ್ಲ ಒಂದು ಕಾರಣಕೋಸ್ಕರ ಅದರಿಂದ ವಿಚಲಿತರಾಗುತ್ತೇವೆ, ಅಥವಾ ಅದರಿಂದ ದೂರ ಸರಿಯುತ್ತೇವೆ, ಅಥವಾ ಅದನ್ನೆಲ್ಲಾ ಸಾಧನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಬರೀ ಟಾಸ್ಕ್‌ಫೋರ್ಸ್‌ಗಳು, ಬರೀ ಕಮಿಟಿಗಳು ಇದರಿಂದ ಏನು ಪ್ರಯೋಜನ ಎಂದು ಹೇಳಿ ಹಲವಾರು ಸದಸ್ಯರು ಭಾಷಣ ಮಾಡಿದ್ದಾರೆ.

ಸ್ವಾಮಿ ನಾನು ಎಲ್ಲ ವಿಚಾರಗಳನ್ನು ಬಲ್ಲೆ ಎಂದು ಹೇಳಿ ಹೇಳಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ನನಗೆ ಇಷ್ಟು ವಯಸ್ಸಾದರೂ ಕೂಡ ಕಲಿಯಬೇಕಾಗಿರುವಂಥಾದ್ದು ಬಹಳ ಇದೆ. ನಮ್ಮ ಮಂತ್ರಿಮಂಡಲದ ಎಲ್ಲಾ ಸಚಿವರಿಗೂ ಮತ್ತು ಸರ್ಕಾರಕ್ಕೂ ಕೂಡ ಇದು ಅನ್ವಯಿಸುತ್ತದೆ. ಆದ್ದರಿಂದ

ಹೊರಗಡೆಯಿಂದ ಬರತಕ್ಕಂಥ ಐಡಿಯಾಸ್ ಏನು ಇವ ಅದರಲ್ಲೂ ಪರಿಣಿತರಿಂದ ಬರತಕ್ಕಂಥ ಐಡಿಯಾಸ್ ಏನು ಇವೆ ಅವುಗಳಿಗ ಹೆಚ್ಚು ಗಮನ ಕೊಡಬೇಕಾಗಿರುವಂತಹ ಅವಶ್ಯಕತೆ ಇದೆ ಎಂದು ಹೇಳಿ ಸರ್ಕಾರ ಭಾವಿಸುತ್ತದೆ. ಪ್ರತಿಯೊಂದು ಸರ್ಕಾರಕ್ಕೂ ಕೂಡ ಅವರದ್ದೆ ಆದ ಸ್ಟೈಲ್ ಆಫ್ ಪಂಕ್ಷನಿಂಗ್ ಇರುತ್ತದೆ. ಹಿಂದಿನ ಸರ್ಕಾರದ ಸ್ಟೈಲ್ ಆಫ್ ಪಂಕ್ಷನಿಂಗ್ ನಮಗೆ ಬರುವುದಿಲ್ಲ. ಅಥವಾ ಈ ಸರ್ಕಾರದ ಸ್ಟೈಲ್ ಆಫ್ ಪಂಕ್ಷನಿಂಗ್ ಮುಂದೆ ಯಾವುದಾದರೂ ಸರ್ಕಾರ ಬರುತ್ತದೆಯಲ್ಲ ಆ ಸರ್ಕಾರಕ್ಕೆ ಬರುವುದಿಲ್ಲ. ಇದು ಒಪ್ಪಬೇಕಾಗಿರತಕ್ಕಂಥ ವಿಚಾರ. ನಾವು ನೀವು ಎಲ್ಲರೂ ಕೂಡ. ಪಂಪ ಮಹಾಕವಿಯ 'ಆದಿ ಪುರಾಣ' ಜ್ಞಾಪಕಕ್ಕೆ ಬರುತ್ತದೆ. ಆ ಕಾಲದಲ್ಲಿ ಒಂದು ಪ್ರಸಂಗ ಬರುತ್ತದೆ. ಭರತ ಚಕ್ರವರ್ತಿ ಯುದ್ಧ ಮಾಡಿ ಇಡೀ ಭೂಮಂಡಲವನ್ನೇ ಜಯಿಸುತ್ತಾನೆ. ತನ್ನನ್ನು ಬಿಟ್ಟರೆ ಇಡೀ ಜಗತ್ತನ್ನೇ ಜಯಸಿಲ್ಲ ಎನ್ನತಕ್ಕಂಥ ಮದ, ಅಹಂಕಾರ ಅವನಿಗೆ ಇರುತ್ತದೆ. ಅವನು ವೃಷಭಾಚಲಕ್ಕೆ ಹೋಗುತ್ತಾನೆ. ಅವನ ಒಂದು ಕನಸು ಏನಿತ್ತು ಎಂದು ಹೇಳಿದರೆ ಆ ವೃಷಭಾಚಲದ ಮೇಲೆ ಭರತ ಚಕ್ರವರ್ತಿ ಇಡೀ ವಿಶ್ವವನ್ನೇ ಗೆದ್ದಂತಹ ವೀರ ಆದ್ದರಿಂದ ಅಲ್ಲಿ ತನ್ನ ಹೆಸರನ್ನು ಪ್ರತಿಷ್ಠಾಪನೆ ಮಾಡಬೇಕು ಹಾಗೆಂದು ಹೇಳಿ, ಆ ವೃಷಭಾಚಲದ ಮೇಲೆ ಭರತ ಚಕ್ರವರ್ತಿ ಏನು ಬರೆಯಬೇಕೆಂದು ಆಸೆ ಮಾಡಿದ್ದ ಎಂದು ಹೇಳಿದರೆ ಇಡೀ ಭೂಮಂಡಲವನ್ನೇ ಜಯಸಿದ ಚಕ್ರಾಧಿಪತಿ ಎಂದು ಹೇಳಿ ಬರೆಯಬೇಕೆಂದು ಇದ್ದ. ಆಗ ಮೇಲೆ ಆ ವೃಷಬಾಚಲಕ್ಕೆ ಹೋಗಿ ನೋಡಿದಾಗ ಒಂದು ಇಂಚುಸ್ಥಳ ಇರಲಿಲ್ಲ ಅಲ್ಲಿ. ಬಾಕಿಯವರೆಲ್ಲಾ ಆಗಲೇ ಒತ್ತಿ ಆಗಿ ಹೋಗಿತ್ತು. ಏಕೆಂದರೆ ಇಡೀ ವಿಶ್ವವನ್ನೇ ಜಯಸಿದೆವು ಹಾಗ ಎಂದು ಹೇಳಿ. ಹಾಗೆ ನಮ್ಮ ಈ ಸರ್ಕಾರಕ್ಕೆ ಇಡೀ ವಿಶ್ವವನ್ನೇ ಜಯಸಿತು, ಎನ್ನತಕ್ಕಂಥ ಅಹಂಕಾರ ನಮಗೆ ಇಲ್ಲ. ಭರತ ಚಕ್ರವರ್ತಿಗೆ ಆಗ ಜ್ಞಾನೋದಯವಾಗುತ್ತದೆ, ಏನು ಆ ಜ್ಞಾನೋದಯ ಎಂದು ಹೇಳಿದರೆ ಏಯ್ ಎಂತಹ ಹೆಡ್ಡ ಇದ್ದೀಯ ನೀನು, ನಾನು ಇಡೀ ಭೂ ಮಂಡಲವನ್ನೇ ಸಾಧನೆ ಮಾಡಿದೆ, ಜಯಸಿದೆ ಎನ್ನತಕ್ಕಂಥ ಮದದಿಂದ, ಅಹಂಕಾರದಿಂದ ಆ ಒಂದು ಮೋಹದ ಮದದಿಂದ ನೀನು ಸಿಲುಕಿದ್ದೆ, ಎಂದು ಆಗ ಆ ವೃಷಭಾಚಲದ ಮೇಲೆ ಅವನಿಗ ಜ್ಞಾನೋದಯವಾಗುತ್ತದೆ. ನಾವು ಆ ವೃಷಬಾಚಲಕ್ಕೆ ಹೋಗಬೇಕಾಗಿಲ್ಲ, ನಮಗ ಈಗಾಗಲೇ ಜ್ಞಾನೋದಯವಾಗಿದೆ. ಆದ್ದರಿಂದಲೇ ನಾವು ಈ ಟಾಸ್ಕ್‌ಫೋರ್ಸ್, ಮೆಷಿನ್ಸ್, ಅಡ್ಮಿನಿಸ್ಟ್ರೇಶನ್ ರಿಫಾರ್ಮ್ಸ್, ಕಮೀಷನ್ಸ್ ಎಷ್ಟು ಸಾರಿ ತಾವು ಸರ್ಕಾರದ ಗಮನಕ್ಕೆ ತಂದಿದ್ದೀರಿ. ವಿಳಂಬ ಸರ್ಕಾರದ ಮಟ್ಟದಲ್ಲಿ ಆಗುತ್ತಿದೆ. ಆ ವಿಳಂಬವನ್ನು ಜನಸಾಮಾನ್ಯರು ಸಹಿಸಲಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇಡೀ ದೇಶದಲ್ಲಿ ಮತ್ತು ರಾಜ್ಯದಲ್ಲಿ ಈ ರೀತಿ ಆಗಿದೆ. ಇದನ್ನು ಇವತ್ತು ಯಾರಾದರೂ ಒಬ್ಬರು ಪ್ರಾರಂಭ ಮಾಡಬೇಕಲ್ಲ. ಇದನ್ನೆಲ್ಲಾ ಸುಧಾರಣೆ ಮಾಡುವುದಕ್ಕೆ ಈಗ ನನಗೆ ಸಿಕ್ಕಿರತಕ್ಕಂಥ ಅಸ್ತ್ರ ಯಾವುದು? ಬ್ಯೂರಾಕ್ರಸಿ. ಯಾರು ನಮ್ಮ ಬ್ರಿಟೀಷರ ಕಾಲದಲ್ಲಿ ಈ ಸರ್ವೀಸ್ ರೂಲ್ಸ್ ಜಾರಿಗೆ ಬಂದಿದೆ, ಆದಾದ ನಂತರ ಹಿಂದಿನ ಮೈಸೂರು ಸಂಸ್ಥಾನದಲ್ಲಿ

ಗೊರವಾಲೇ ಅಡ್ಮಿನಿಸ್ಟ್ರೇಶನ್ ರಿಫಾರಮ್ಸ್ ಮೇಲೆ ಅನಂತರ ಬಂದಿದ್ದು ಮುರಾರ್ಜಿ ದೇಸಾಯಿ ಮತ್ತು ಹನುಮಂತಯ್ಯನವರ ಅಡ್ಮಿನಿಸ್ಟ್ರೇಶನ್ ರಿಫಾರಮ್ಸ್, ಆದಾದ ಮೇಲೆ ನಮ್ಮ ರಾಜ್ಯದ ಮಟ್ಟಿಗೆ ನಾವು ಸೀಮಿತ ಮಾಡಿ ನಾವು ಹೇಳಿಕೊಳ್ಳಬಹುದಾದರೆ ಯಾವ ಒಂದು ಕಮೀಷನ್ ಸಹ 1978ರಿಂದ 1980ನೇ ಇಸವಿ ಆದಮೇಲೆ ಆಗಲಿಲ್ಲ. ಇವತ್ತು ನಮಗೆ ಅನಿಸಿತು, ಅಂತಹ ಒಂದು ಎಕ್ಸ್‌ರ್‌ಸೈಜ್ ಅವಶ್ಯಕತೆ ಇದೆ ಹಾಗೆ ಎಂದು ಹೇಳಿ ಸರ್ಕಾರದ ಮಟ್ಟದಲ್ಲಿ ಈ ವಿಳಂಬದಿಂದ ಆಗುವ ಜನರ ಹಿಂಸೆಗಳಿಗೆ ನಾವು ಇವತ್ತಿನ ದಿವಸ ಪರಿಹಾರವನ್ನು ಕಂಡು ಹಿಡಿಯಬೇಕಾಗಿದೆ. ಅದಕ್ಕೋಸ್ಕರ ಕೆಲವರು ಹಿರಿಯರು, ತಿಳಿದವರು ನಮಗಿಂತ ಬುದ್ಧಿವಂತರಾಗಿರತಕ್ಕಂಥವರ ಒಂದು ಸಮಿತಿಯನ್ನು ಮಾಡಿ ಅವರ ರೆಕಮಂಡೇಶನ್ಸ್‌ನ್ನು ನಾವು ಸ್ವಲ್ಪ ಯೋಚನೆ ಮಾಡಬಹುದಾಗಿತ್ತು. ಹೆಲ್ತ್ ಟಾಸ್ಕ್ ಫೋರ್ಸ್ ಮಾಡಿದ್ದೇವೆ. ನಿನ್ನೆ ತಾನೇ ಅವರು ಒಂದು ಶಿಫಾರಸ್ಸನ್ನು ಕೊಟ್ಟಿದ್ದಾರೆ. ಅದರ ಪ್ರಮುಖರು ಡಾ:ಸುದರ್ಶನ್‌ರವರು. ಮೊನ್ನೆ ತಾನೇ ಅವರಿಗೆ ಪದ್ಮಶ್ರೀ ಗೌರವವು ಸಿಕ್ಕಿತು. ಅವರ ಸಮಿತಿಯು ಶಿಫಾರಸ್ಸನ್ನು ನಿನ್ನೆ ಕೊಟ್ಟಿದೆ. ಈ ಸಮಿತಿಯಲ್ಲಿರತಕ್ಕಂಥ ಮಹನೀಯರು ಮತ್ತು ಮಹಿಳೆಯರು ಯಾರು? ಅವರಿಗಿರುವ ಕಾಲ ಎಷ್ಟು ಪ್ರಿಶಿಯಸ್ ಎನ್ನತಕ್ಕಂಥದ್ದು? ಎನ್ನುವುದು ಅವರಗಳ ಹೆಸರುಗಳನ್ನು ನೋಡಿದಾಗ ನಮಗೆ ಗೊತ್ತಾಗುತ್ತದೆ. ಡಾ:ಕಾಮಿನಿ ರಾವ್, ಸ್ವಾಮಿ ಕೃಪಾನಂದ, ಸುರೇಶ್ ಕುಲಕರ್ಣಿ, ಚಲ್ಮ ನಾರಾಯಣ್, ಲತಾ ಜಗನ್ನಾಥನ್, ಜಯಪ್ರಕಾಶ್ ನಾರಾಯಣ್, ವೆಲ್ಲೂರಿನ ಡಾ:ಫ್ರಾನ್ಸಿಸ್ ಸಿ.ಎಂ. ಇವರುಗಳೆಲ್ಲರೂ ಸೇರಿ ತುಂಬಾ ಕಷ್ಟ ಪಟ್ಟು 28 ಸಿಟ್ಟಿಂಗ್ಸ್‌ನ್ನು ಮಾಡಿದ್ದಾರೆ. ಈಗ ಅವರು ಇಂಟೀರಿಯಮ್ ರೆಕಮಂಟೇಶನ್ಸ್ ಕೊಟ್ಟಿದ್ದಾರೆ. ಇದು ಕೇವಲ ಈ ಸರಕಾರಕ್ಕೆ ಮಾತ್ರ ರೆಕಮಂಡೇಶನ್ಸ್ ಆಗುವುದಿಲ್ಲ. ಹೆಲ್ತ್ ಹ್ಯೂಮನ್‌ರಿಸೋರ್ಸ್‌ಸ್ ಡೆವಲಪ್‌ಮೆಂಟ್, ಪಾಪ್ಯುಲೇಶನ್ ಸ್ಟೆಬಿಲೈಸೇಶನ್, ನ್ಯೂಟ್ರೀಶಿಯನ್, ಎಮರ್ಜೆನ್ಸಿ ಹೆಲ್ತ್ ಸರ್ವೀಸಸ್, ಮುಂತಾದ ವಿಚಾರಗಳು ಇದರಲ್ಲಿ ಬರುತ್ತವೆ. ತಾವುಗಳು ಇವಲ್ಲವೂ ನಮಗೆ ಗೊತ್ತಿಲ್ಲವೇ ಎಂದು ಯಾರಾದರೂ ಕೇಳಬಹುದು. ಆದರೆ ನಮಗೆ ಗೊತ್ತಿಲ್ಲ ಎಂದು ನಾವು ಹೇಳುತ್ತಿದ್ದೇವೆ. ಆದ್ದರಿಂದ ನಮ್ಮ ಗೈಡೆನ್ಸ್‌ಗೋಸ್ಕರ ಬಹಳ ಅವಶ್ಯಕ ಎಂದು ಇಂಥ ಟಾಸ್ಕ್‌ಫೋರ್ಸ್‌ನ್ನು ಮಾಡಿದ್ದೇವೆ. ಬೆಂಗಳೂರು ಅಜೆಂಡಾ ಟಾಸ್ಕ್ ಫೋರ್ಸ್. ಆರು ತಿಂಗಳುಗಳ ಕೆಳಗೆ ಇಲ್ಲಿನ ರಸ್ತೆಗಳು ಹೇಗಿರುತ್ತವೆ ಎಂದು ಗೊತ್ತಾಗುತ್ತಿರಲಿಲ್ಲ. ನಮ್ಮ ರಾಜ್ಯದಲ್ಲಿ ಎಲ್ಲ ಕಡೆಗಳಲ್ಲಿಯೂ ಇದೇ ಪರಿಸ್ಥಿತಿ ಇತ್ತು. ಇನ್ನು ಸರಿಪಡಿಸತಕ್ಕಂಥದ್ದು ಬಹಳಷ್ಟು ಇವೆ ರಸ್ತೆಗಳ ಸ್ಥಿತಿಗತಿಗಳು ಹೇಗಿತ್ತು? ಎಂದು ನೆನೆಸಿಕೊಂಡಾಗ ಆ ಬಗ್ಗೆ ಸರಕಾರ ಏನು ಮಾಡುತ್ತಾ ಇತ್ತು ಎನ್ನುವ ಬಗ್ಗೆಯೂ ಕೂಡ ಜನರು ಯೋಚನೆ ಮಾಡುತ್ತಾರೆ. ಸುಧಾರಣೆಗಳನ್ನು ನಾವು ಜಾರಿಗೆ ತರಬೇಕಾಗಿದೆ. ಅದನ್ನು ತರುವಂಥ ಮನೋಭಾವನೆಯು ನಮ್ಮಲ್ಲಿದೆ. ಅಧಿಕಾರ ವಿಕೇಂದ್ರೀಕರಣ, ನೀವೆಲ್ಲಿ ಚುನಾವಣೆ ಮಾಡುತ್ತೀರಿ? ನಿಮ್ಮ ಪಕ್ಷದಲ್ಲಿ ಜಗಳ ನಡೆಯುತ್ತಾ ಇದೆ, ಒಬ್ಬರನ್ನು ಕಂಡರೆ ಇನ್ನೊಬ್ಬರಿಗೆ ಆಗುವುದಿಲ್ಲ, ನಮ್ಮನ್ನು ನೋಡಿ ನಾವೆಷ್ಟು

ಚೆನ್ನಾಗಿದ್ದೇವೆ? ನಾವೆಷ್ಟು ಅನ್ಯೋನ್ಯವಾಗಿದ್ದೇವೆ? ಅನ್ಯೋನ್ಯತೆ ಹುಟ್ಟಿದ್ದೇ ನಮ್ಮಿಂದ ಎಂಬ ಭ್ರಮೆಯಲ್ಲಿಯೇ ಇನ್ನೂ ಕೆಲವರು ಇದ್ದಾರೆ. ಆದರೆ ಮಧ್ಯದಲ್ಲಿ ಪೂಜಾರಿಗಳು ತಮ್ಮ ಪ್ರಯತ್ನವನ್ನು ಮಾಡುತ್ತಲೇ ಇದ್ದಾರೆ. ಒಂದಾಗಿಸೋಣವೆ? ಬೇರೆಯಾಗಿಸೋಣವೇ? ಯಾವರೀತಿಯಲ್ಲಿ ಒಂದಾಗಬೇಕು, ಕೇಂದ್ರ ಸರಕಾರದ ಜೊತೆಯಲ್ಲಿ ನಿಮ್ಮ ಸಂಬಂಧ ಹೇಗೆ ಇರಬೇಕು? ಎಂಬಿತ್ಯಾದಿಯಾಗಿ ತೊಳಲಾಡುತ್ತಿರುವವರು ನಮಗ ಉಪದೇಶವನ್ನು ಹೇಳುತ್ತಿದ್ದಾರೆ. ನಿಮ್ಮಲ್ಲಿ ಒಗ್ಗಟ್ಟಿಲ್ಲ, ಸಾಮರಸ್ಯವಿಲ್ಲ, ಎಂದು ಹೇಳುತ್ತಿರುತ್ತಾರೆ. ಹಾಗಾದರೆ ಸಾಮರಸ್ಯಕ್ಕೆ ಹಿಡಿಯುವ ಕನ್ನಡಿ ಯಾವುದು? ನೀವು ಯಾವಾಗ ಆಗುತ್ತೀರಿ? ಅಥವಾ ಎರಡು ಯಾವಾಗ ಆದಿರಿ ಮತ್ತು ಮೂರು ಯಾವಾಗ ಆಗುತ್ತೀರಿ? ಅದನ್ನಾದರೂ ದಯಮಾಡಿ ಹೇಳುತ್ತೀರಾ? ಅದಕ್ಕಾದರೂ ಒಂದು ಕಾಲಬದ್ಧತೆಯನ್ನು ನೀವು ತೀರ್ಮಾನ ಮಾಡಿಕೊಳ್ಳಿ. ನೀವು ಒಂದಾಗ ಬೇಕೆನ್ನುವುದು ನಮ್ಮ ಇಷ್ಟ. ಏಕೆಂದರೆ ಜನಸಂಖ್ಯೆ ಜಾಸ್ತಿಯಾಗುತ್ತಿರುವ ರೀತಿಯಲ್ಲಿಯೇ ರಾಜಕೀಯ ಪಕ್ಷಗಳನ್ನು ಕೂಡ ಜಾಸ್ತಿ ಮಾಡಲು ನಾವುಗಳು ಹೋಗಬಾರದು. ಅವುಗಳನ್ನು ಕಡಿಮೆ ಮಾಡಬೇಕು. ಆ ದೃಷ್ಟಿಯಲ್ಲಿ ನೀವೆಲ್ಲರೂ ಒಂದಾಗ ಬೇಕೆಂಬುದು ನಮ್ಮ ಇಚ್ಛೆ ಬೇಕಾದರೆ ಮಾನ್ಯ ಸದಸ್ಯರಾದ ಚೆನ್ನಿಗಪ್ಪನವರನ್ನು ನಿಮ್ಮ ಜೊತೆಯಲ್ಲಿ ಕರೆದುಕೊಳ್ಳಿ.

ಶ್ರೀ ಚೆನ್ನಿಗಪ್ಪ: ಮಾನ್ಯ ಅಧ್ಯಕ್ಷರೇ, ತಾವುಗಳು ನಾವೆಲ್ಲರೂ ಒಂದಾಗಿ ಕೆಲಸ ಮಾಡಲು ಅವಕಾಶ ಮಾಡಿಕೊಟ್ಟರೆ ಒಂದಾಗಿಯೇ ಕೆಲಸ ಮಾಡುತ್ತೇವೆ. ನಮಗೆ ಆ ಶಕ್ತಿ ಇದೆ ಮತ್ತು ನಮ್ಮಲ್ಲಿ ಹಿರಿಯ ನಾಯಕರುಗಳು ಇದ್ದಾರೆ. ಆದರೆ ಕೆಲವರು ಅತ್ತ ಇತ್ತ ಮಾಡುತ್ತಾ ನಮ್ಮನ್ನು ಡಿಫೈಡ್ ಮಾಡುವ ಕೆಲಸ ಮಾಡುತ್ತಾ ಇದ್ದಾರೆ. ನಮ್ಮಲ್ಲಿಯ ಕೆಲವರನ್ನು ತಾವುಗಳು ಕರೆದುಕೊಂಡು ನಿಮ್ಮ ಗುಂಪನ್ನು ಜಾಸ್ತಿ ಮಾಡಿಕೊಂಡಿದ್ದೀರಿ. ತಾವು ಮಾಡಿದ್ದಕ್ಕೆ ನಮಗೆ ಸಂತೋಷವಿದೆ. ನಮಗೂ ಒಳ್ಳೆಯ ಕಾಲ ಬರುತ್ತದೆ. ತಮ್ಮ ಆಶೀರ್ವಾದಗಳು ನಮಗೆ ಇರಲಿ.

ಶ್ರೀ ಎಸ್.ಎಂ.ಕೃಷ್ಣ:ಮಾನ್ಯ ಚೆನ್ನಿಗಪ್ಪನವರಿಂದ ಬಂದಂಥ ಅಮೃತ ವಾಕ್ಯಗಳನ್ನು ನಾನು ಸಂತೋಷದಿಂದ ಗಮನದಲ್ಲಿಟ್ಟುಕೊಳ್ಳುತ್ತೇನೆ. ಆದರೆ ನಾನು ಒಂದು ಭರವಸೆಯನ್ನು ಅವರಿಗೆ ಕೊಡುತ್ತೇನೆ. ನಾವ್ಯಾರೂ ಅವರು ಒಂದಾಗುವುದರಲ್ಲಿ ಮಧ್ಯೆ ಪ್ರವೇಶ ಮಾಡುವುದಿಲ್ಲ.

(ನಗು)

ಶ್ರೀ ಸಿ.ಬೈರೇಗೌಡ: ಆರು ಜನರನ್ನು ಈಗಾಗಲೇ ತೆಗೆದುಕೊಂಡಿದ್ದೀರಿ. ಚೆನ್ನಿಗಪ್ಪನವರನ್ನು ತೆಗೆದುಕೊಂಡು ಬಿಡಿ. ನಮಗೆ ಬಂದ ಸುದ್ದಿಗಳ ಪ್ರಕಾರ ಇನ್ನೂ ಇಬ್ಬರು ತಮ್ಮಲ್ಲಿ ಬರುವವರಿದ್ದಾರೆ. ಅದು ಸತ್ಯವಾಗಿದ್ದಲ್ಲಿ ಬೇಗನೇ ಸೇರಿಸಿಕೊಂಡು ಬಿಡಿ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ನಾವು ನಿಮ್ಮ ಸರಕಾರದ ಕಾರ್ಯಕ್ರಮಗಳು ಚೆನ್ನಾಗಿದ್ದರೆ ಸ್ವಾಗತಿಸುತ್ತೇವೆ. ಇಲ್ಲವಾದಲ್ಲಿ ವಿರೋಧಿಸುತ್ತೇವೆ.

ಶ್ರೀ ಎಸ್.ಎಂ.ಕೃಷ್ಣ: ನಾನು ಈಗ ಮತ್ತೆ ಚೆನ್ನಿಗಪ್ಪನವರಿಗೆ ಈಲ್ಡ್ ಆಗುತ್ತೇನೆ. ಮತ್ತೆ ಇಬ್ಬರು ನಮಗೆ ಯಾರು ಅರ್ಜಿ ಕೊಟ್ಟಿದ್ದಾರೆಂದು ಹೇಳಿ ಬಿಡಿ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ನಮ್ಮ ಪಕ್ಷದ ನಾಯಕರ ಮೇಲೆ ತಾವುಗಳು ಕಣ್ಣಿಟ್ಟಿದ್ದೀರಿ. ಅವರಲ್ಲಿ ಏನಾದರೂ ಸಮ್ಮೋಹನಾಸ್ತ್ರವಿದೆಯೇ? ಈಗಾಗಲೇ ಆರು ಜನರನ್ನು ಕರೆದುಕೊಂಡು ಮತ್ತೆ ನಮ್ಮ ನಾಯಕರಿಗೇ ಗಾಳ ಹಾಕಲು ಹೊರಟಿರುವಿರೆ? ನಿಮಗೆ ಸಾಕಷ್ಟು ಬಹುಮತವಿದ್ದರೂ ಕೂಡ ಇನ್ನೂ ಇಂಥ ಯೋಚನೆ ನಿಮಗೇಕೆ?

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೇ, ಪ್ರಣಾಳಿಕೆಯಲ್ಲಿ ನಾವು ತಿಳಿಸಿದ ಹಾಗೆ ನೀವು ಪಂಚಾಯತ್ ಚುನಾವಣೆಗಳನ್ನು ಮಾಡುವುದಿಲ್ಲ ಎಂದು ಹೇಳಿದ್ದೀರಿ. ಪಂಚಾಯತ್ ಚುನಾವಣೆಯನ್ನು ನಾವು ಮಾಡಿದ್ದೇವೆ. ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಚುನಾವಣೆಗಳನ್ನು ಮಾಡುವುದಿಲ್ಲ ಎಂದು ಹೇಳಿದರು. ಏಕೆಂದರೆ ಅವರಲ್ಲಿ ಬಹಳ ವ್ಯತ್ಯಾಸಗಳು ಇವೆ ಎಂದರು. ''ಘೋರ್ಪಡೆಯವರ ರಾಜೀನಾಮೆ ಕೊಡುತ್ತೇನೆ'' ಎಂದು ಹೇಳಿದ್ದಾರೆ ಎಂದೆಲ್ಲ ಹೇಳಿ ಪಾಪ ಮುಖ್ಯ ಮಂತ್ರಿಯವರು ಘೋರ್ಪಡೆಯವರ ಪರವಾಗಿ ಇರಬೇಕೋ ಅಥವಾ ಅವರ ವಿರುದ್ಧವಾಗಿರಬೇಕೋ ಎಂಬ ಮಾನಸಿಕ ಸಂಕಷ್ಟಕ್ಕೆ ಸಿಲುಕಿ ಪೇಚಾಡುತ್ತಾ ಇದ್ದಾರೆ, ಎಂಥ ಸ್ಥಿತಿಯು ಈ ಸರಕಾರಕ್ಕೆ ಬಂತು ಎಂದು ಬಹಳ ಜನರು ನೊಂದುಕೊಂಡರು. ಅದರಲ್ಲಿ ತಾವುಗಳು ಸಹ ಬಹಳ ನೊಂದು ಹೋಗಿದ್ದೀರಿ. ನನಗೆ ಬಂದ ಸಂಕಷ್ಟ ನೋಡಿಕೊಂಡು ನೀವುಗಳು ನೊಂದುಹೋದಿರಿ.

(ಸಭೆಯಲ್ಲಿ ನಗು)

ತಾಲ್ಲೂಕು ಪಂಚಾಯತ್ ಚುನಾವಣೆಗಳನ್ನು ಜೂನ್ ತಿಂಗಳಲ್ಲಿ ಮಾಡುತ್ತೇವೆ. ನಾವು ಹೇಳಿದ್ದನ್ನು ಎಲ್ಲವನ್ನೂ ಮಾಡುತ್ತೇವೆ. ಇದು ಏನು ತೋರಿಸುತ್ತದೆ? ಸಬೂಬು ಹುಡುಕಿಕೊಂಡು ಚುನಾವಣೆಗಳನ್ನು ಮುಂದಕ್ಕೆ ಹಾಕತಕ್ಕಂಥ ಸರಕಾರ ನಮ್ಮದಲ್ಲ ಎಂಬುದನ್ನು ತೋರಿಸುತ್ತದೆ. ಸಬೂಬು ಎಂದು ಹೇಳಿ ಉದ್ದೇಶಪೂರ್ವಕವಾಗಿ, ಬುದ್ಧಿಪೂರ್ವಕವಾಗಿ,

(ಗೊಂದಲ)

ತಾವುಗಳು ಅಭಿಪ್ರಾಯಪಟ್ಟರಿ? Perhaps ನಿಮ್ಮ perceptionನಲ್ಲಿ Rightly ಏನು ಅಂತ ಹೇಳಿದರೆ ಈಗಿರತಕ್ಕಂಥ ಗ್ರಾಮಪಂಚಾಯತ್‌ಗಳು ಅವರ ಕಾಲ ಮೇಲೆ ನಿಲ್ಲತಕ್ಕಂಥ ಶಕ್ತಿ ಹೊಂದಿಲ್ಲ. ಆದ್ದರಿಂದ ನಾವು ಬಂಚಿಂಗ್ ಆಫ್

ವಿಲೇಜ್‌ಸ್ ಮಾಡತಕ್ಕಂಥಾದ್ದು ಸೂಕ್ತ ಅಂದರೆ ಮಂಡಲ ಪಂಚಾಯತ್‌ಗಳನ್ನು ಮಾಡತಕ್ಕಂಥಾದ್ದು ಸೂಕ್ತ ಎಂದು? ಹಾಗಾದರೆ ಇದು ನಿಮಗೆ 1994ರಲ್ಲಿ, 1995ರಲ್ಲಿ, 1996ರಲ್ಲಿ, 1997ರಲ್ಲಿ ನಿಮಗ ಅರಿವಾಗಲಿಲ್ಲವೆ? ಇಷ್ಟು ವರ್ಷಗಳಲ್ಲಿಯೂ ನಿಮಗೆ ಅನುಭವದಿಂದ ಅರಿವಾಗಲಿಲ್ಲ. ನಿಮಗೆ ಯಾವಾಗ ಇದು ಗೋಚರವಾಯಿತು? ಚುನಾವಣೆಗಳು ಹತ್ತಿರ ಬಂದಾಗ ನಿಮಗೆ ಗೋಚರವಾಯಿತು. ಗ್ರಾಮಪಂಚಾಯತ್‌ಗಳು ತಮ್ಮ ಕಾಲ ಮೇಲೆ ತಾವು ನಿಲ್ಲುವುದಕ್ಕೆ ಸಾಧ್ಯವಾಗುವುದಿಲ್ಲ, ಆದ್ದರಿಂದ ನಿಮ್ಮ ಕಲ್ಪನೆಯ ಮಂಡಲ ಪಂಚಾಯತ್‌ಗಳನ್ನು ನಾವು ಮಾಡಬೇಕಾಯಿತು. ಇದು ಜಬೂಬು ಅಲ್ಲದೆ ಮತ್ತೇನು? ನಿಮ್ಮಲ್ಲಿ ಸಿದ್ಧಾಂತದ ನೆಲೆಗಟ್ಟು ಇದ್ದಿದ್ದರೆ, 1994ರಲ್ಲಿ ಅಧಿಕಾರಕ್ಕೆ ಬಂದ ತತ್‌ಕ್ಷಣ ನೀವು ಆ ದಿಶೆಯಲ್ಲಿ ಕಾರ್ಯೋನ್ಮುಖರಾಗಬೇಕಾಗಿತ್ತು. ಗ್ರಾಮಪಂಚಾಯಿತ್ ಆ್ಯಕ್ಟ್‌ಗೆ ತತ್‌ಕ್ಷಣ ತಿದ್ದುಪಡಿಯನ್ನು ತರತಕ್ಕಂಥ ರಾಜಕೀಯ ಇಚ್ಛಾಶಕ್ತಿಯನ್ನು ನೀವು ತೋರಿಸಬೇಕಾಗಿತ್ತು. ಆ ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದಲೇ ಆವೊತ್ತು ಪಂಚಾಯತ್ ಚುನಾವಣೆಗಳನ್ನು ನಿಮ್ಮಿಂದ ನಡೆಸುವುದಕ್ಕೆ ಸಾಧ್ಯವಾಗಲಿಲ್ಲ. ಒಂದು ಲಕ್ಷ ಇದ್ದುದನ್ನು ಎರಡು ಲಕ್ಷ ಎಂದು ಮಾಡಿದ್ದೇವೆ. ಅದನ್ನು ನೀವೇಕೆ ಮಾಡಲು ಸಾಧ್ಯವಾಗಲಿಲ್ಲ? ಇದು ನಮ್ಮ ಬದ್ಧತೆಯನ್ನು ದೃಢೀಕರಿಸುತ್ತದೆ. ಪಂಚಾಯತ್‌ಗಳಲ್ಲಿ ನಮಗೆ ವಿಶ್ವಾಸವಿದೆ. ಮಾನ್ಯ ರಾಜೀವ ಗಾಂಧೀಯವರು ಏನು ನೆನೆಸಿದ್ದರು, ಅಂಥ ಒಂದು ಪಂಚಾಯತ್ ವ್ಯವಸ್ಥೆ ಮತ್ತು ಅಂಥ ಒಂದು ವಿಕೇಂದ್ರಿಕರಣದ ಪರಿಕಲ್ಪನೆ ನಮಗೆ ಬರಬೇಕು ಅದಕ್ಕೆ ನಾವು ಒತ್ತು ಕೊಡಬೇಕೆಂಬ ದೃಷ್ಟಿಯಿಂದ ಇದು ನಾವು ತೆಗೆದುಕೊಂಡಂಥ ನಿರ್ಣಯವಾಗಿದೆ.

ಈಗಾಗಲೇ ಜಲಾನಯನ ವ್ಯವಸ್ಥೆ ಬಗ್ಗೆ ನಾನು ವಿಶ್ಲೇಷಣೆ ಮಾಡಿದ್ದೇನೆ. ಅದರ ಬಗ್ಗೆ ಹೆಚ್ಚು ಹೇಳುವುದಿಲ್ಲ. ನಮ್ಮ ರಾಜ್ಯದಲ್ಲಿ ಹಲವಾರು ಸಮಸ್ಯೆಗಳು ಇವೆ. ನೀರಾವರಿ ಕ್ಷೇತ್ರದಲ್ಲಿ ಬಹಳ ದೊಡ್ಡ ದೊಡ್ಡ ಸವಾಲುಗಳು ನಮ್ಮ ಮುಂದೆ ಇವೆ. ಇವತ್ತು ಆ ಸವಾಲುಗಳು ಜಟಿಲ ಆಗುತ್ತಿವೆಯೇ ವಿನಃ ಆ ಸವಾಲುಗಳು ಸುಲಭ ಆಗುತ್ತಿಲ್ಲ. ಈಗತಾನೇ ಬಂದಿರತಕ್ಕ ಸುದ್ದಿಯ ಪ್ರಕಾರ ಸುಪ್ರೀಂ ಕೋರ್ಟಿನವರು ತಮ್ಮ ತೀರ್ಮಾನವನ್ನು ಇವತ್ತು ಬೆಳಿಗ್ಗೆ ಕೊಟ್ಟಿದ್ದಾರೆಂದು ಹೇಳಿ ನಮಗೆ ಬಂದಿರತಕ್ಕ ದೂರವಾಣಿ ಮೆಸೇಜ್ ಇದೆ.

"Supreme court upheld orders for raising the Almatti Dam height to 519 Metres as against the demand of Karnataka to raise it to 524 Metres, while Andhra Pradesh has been insisting to restrict the height to 512 Metres. As far as the additional requirement of 5.5 Metres required for power generation, the matter is

reported to have been referred to Krishna Tribunal with a direction to give its report within a period of 3 months."

ಆ ದೃಷ್ಟಿಯಿಂದಲೇ ನಾನು ಹೇಳುತ್ತಿದ್ದೇನೆ ಸಮಸ್ಯೆಗಳು ಜಟಿಲವಾಗುತ್ತಿವೆ ಸುಲಭ ಆಗುತ್ತಿಲ್ಲ. ಇಲ್ಲಿ ಪಕ್ಷ, ಪ್ರತಿ ಪಕ್ಷ ಎನ್ನತಕ್ಕ ಭೇದ ಭಾವ ಇಲ್ಲದೆ ನಾವೆಲ್ಲ ಕನ್ನಡಿಗರ ಪ್ರತಿನಿಧಿಗಳು ನಾವೆಲ್ಲರೂ ಭುವನೇಶ್ವರಿ ತಾಯಿಯ ಮಕ್ಕಳು ಎನ್ನತಕ್ಕ ಮಮಕಾರದಿಂದ ಅಭಿಮಾನದಿಂದ ನಾವು ಈ ಕೃಷ್ಣಾ ನದಿ ಜಲ ವಿವಾದದ ಎಲ್ಲ ವಿಚಾರಗಳಲ್ಲಿ ಕೂಡ ಒಮ್ಮುಖವಾಗಿ ತೀರ್ಮಾನ ಮಾಡಬೇಕಾಗಿದೆ. ಈಗ ಸುಪ್ರೀಂ ಕೋರ್ಟಿನವರು 519ಕ್ಕೆ ನಮಗೆ ಅವಕಾಶ ಕೊಟ್ಟಿರುವುದರಿಂದ ನಾವು ಈಗಾಗಲೇ ನಮ್ಮ ಇಂಜಿನಿಯರ್‌ಗಳಿಗೆ ನಿರ್ದೇಶನವನ್ನು ಕಳುಹಿಸಿದ್ದೇವೆ. ತತ್‌ಕ್ಷಣವೇ ಹಗಲೂ ರಾತ್ರಿ ಕೆಲಸ ಮಾಡಿ. ಈ ಕ್ರಸ್ಟ್ ಗೇಟ್‌ಗಳ ನಿರ್ಮಾಣ ಮಾಡಲಿಕ್ಕೆ ಸ್ಕಿನ್ ಪ್ಲೇಟ್‌ಗಳನ್ನು ಅಳವಡಿಸಲಿಕ್ಕೆ ಅವರು ಕಾರ್ಯೋನ್ಮುಖರಾಗಬೇಕು ಎನ್ನತಕ್ಕಂಥ ತೀರ್ಮಾನವನ್ನು ನಾವು ಈಗಾಗಲೇ ತೆಗೆದುಕೊಂಡು 173 ಟಿಎಂಸಿಎಫ್‌ಟಿ of water can be stored in Almatti Dam.

SRI P.G.R.SINDHIA: I think it is better to discuss outside that matter.

SRI. S.M.KRISHNA: No, no. I would like to be very categorical about the factual position.

ಶ್ರೀ ಪಿ.ಜಿ.ಆರ್.ಸಿಂಧ್ಯ: ಸುಪ್ರೀಂ ಕೋರ್ಟ್ ಆರ್ಡರ್‌ನ ಫುಲ್ ಟೆಕ್ಸ್ಟ್ ಇನ್ನೂ ತಮಗೆ ಬಂದಿಲ್ಲ. ಇದು ಬಂದ ಮೇಲೆ ನೀವು ಎಲ್ಲಾ ಪಕ್ಷದವರನ್ನೂ, ಪರಿಣಿತರನ್ನೂ ಕರೆಸಿ. ಈಗ ಏನು ಮಾಡಬೇಕು ಎನ್ನುವ ಬಗ್ಗೆ ನಾವು ತೀರ್ಮಾನ ಮಾಡೋಣ. ಏಕೆಂದರೆ ಈಗ ತಾನೇ ಸುಪ್ರೀಂ ಕೋರ್ಟಿನವರು ಆರ್ಡರ್ ಕೊಡುತ್ತಾರೆ ಎಂದು ಹೇಳಿ ಗೊತ್ತಿತ್ತು. ಟೆಲಿಫೋನ್ ಮುಖಾಂತರ ತಮಗೆ ನಮ್ಮ ಲಾಯರ್ಸ್ ಹೇಳಿದ್ದಾರೆ. ನಮ್ಮ ಮನವಿ ಏನು ಅಂದರೆ ತಾವು ಹೇಳಿದ ಹಾಗೆ ಜಟಿಲ ಆಗಿದೆಯೇ ಹೊರತು ಸಮಸ್ಯೆ ಬಗೆಹರಿದಿರತಕ್ಕದ್ದು, ನಾವೆಲ್ಲ ಚಪ್ಪಾಳೆ ತಟ್ಟತಕ್ಕ ವಿಚಾರ ಎನ್ನತಕ್ಕದ್ದು ನಮಗೂ ಗೊತ್ತಿದೆ, ನಿಮಗೂ ಗೊತ್ತಿದೆ. ಅದರಿಂದಾಗಿ ನನ್ನ ಸಲಹೆ ಏನು ಅಂದರೆ ತತ್‌ಕ್ಷಣದಲ್ಲಿ ಇದರ ಬಗ್ಗೆ ತಾವು ಇವತ್ತು ರಾತ್ರಿಯೇ ಅಥವಾ ನಾಳೆಯೋ ತೀರ್ಮಾನ ತೆಗೆದುಕೊಳ್ಳಬಹುದು. ಎಲ್ಲಾ ವಿರೋಧ ಪಕ್ಷದವರ ಸರ್ವ ಪಕ್ಷದ ಸಭೆಯನ್ನು, ಮಾಜಿ ಮುಖ್ಯಮಂತ್ರಿಗಳನ್ನು ಮತ್ತು ನೀರಾವರಿ ಪರಿಣಿತರನ್ನು ಕರೆದು ಅಲ್ಲಿ ನಮ್ಮ ಪರವಾಗಿ ವಾದ ಮಾಡುತ್ತಿರತಕ್ಕಂಥ ವಕೀಲರನ್ನೂ ಕರೆಸಿ ಏಕೆಂದರೆ ನಮಗೆ ಗೊತ್ತಿದೆ ಸ್ಕಿನ್ ಪ್ಲೇಟ್‌ಗಳನ್ನು ಅಳವಡಿಸುತ್ತೇವೆಂದ ತಕ್ಷಣ ಮತ್ತೆ ಆಂಧ್ರಪ್ರದೇಶದವರು ಏನು ಮಾಡುತ್ತಾರೆಂಬ ಬಗ್ಗೆ ಇಂಪ್ಲಿಕೇಶನ್ಸ್ ಸಹಿತ ಇರುವಾಗ so, within a day or

two we can take a decision. ತಾವು ದಯವಿಟ್ಟು ಸಭೆಯನ್ನು ಕರೆಯಿರಿ.

ಶ್ರೀ ಎಸ್.ಎಂ.ಕೃಷ್ಣ: ಎಲ್ಲಾ ಪಕ್ಷದ ಮುಖಂಡರುಗಳನ್ನು ಕರೆಸಿ, ಆಹ್ವಾನಿಸಿ ಹಾಗೂ ವಿಚಾರ ವಿನಿಮಯ ಮಾಡಲಿಕ್ಕೆ ಅವಕಾಶ ಇದೆ. ಅದನ್ನು ಅತೀ ಶೀಘ್ರದಲ್ಲಿಯೇ ಮಾಡುತ್ತೇನೆ. ತಮ್ಮ ಈ ಸಲಹೆ ಏನು ಇದೆ, ಅದು ಸ್ವಾಗತಾರ್ಹವಾದಂತಹ ಸಲಹೆ. ಆದರೆ ಈಗಾಗಲೇ ನಾವು ಬಹಳ ಟೈಮ್ ಅನ್ನು ಈ ವಿಚಾರದಲ್ಲಿ ಕಳೆದಿದ್ದೇವೆ. ಇವತ್ತು ನಮ್ಮ ಮುಂದೆ ಇರತಕ್ಕ ವಿಚಾರ ಎಂದರೆ ಈ ಕ್ರಸ್ಟ್ ಗೇಟ್‌ಗಳನ್ನು ನಿರ್ಮಾಣ ಮಾಡತಕ್ಕದ್ದು.

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾನು ಏಕೆ ಈ ಮಾತನ್ನು ಹೇಳಿದೆ ಅಂದರೆ.

ಶ್ರೀ ಎಸ್.ಎಂ.ಕೃಷ್ಣ: ಯಾವುದೇ ಆದರೂ ಆಗಲಿ. ನಾನು ಫ್ಯಾಕ್ಚುಯಲ್ ಪೊಸಿಷನ್ ಹೇಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ತಾವೇ ನೀರಾವರಿ ಮಂತ್ರಿಗಳು ಆಗಿದ್ದಾಗ, ಮಾನ್ಯ ಉಪಮುಖ್ಯಮಂತ್ರಿಗಳು ಆಗಿದ್ದಾಗ ಮತ್ತೆ ಮುಖ್ಯಮಂತ್ರಿಗಳು ಆಗಿದ್ದಂತಹ ಸಂದರ್ಭದಲ್ಲೂ ಕೂಡ ಈ ವಿಚಾರದಲ್ಲಿ ಮಾತು ಕಡಿಮೆ ಮಾಡಬೇಕು ಎಂದು ಹೇಳಿದ್ದೀರಿ. ಅನೇಕ ಸಂದರ್ಭದಲ್ಲಿ ಹೇಳಿದ್ದೀರಿ. ಸದನದಲ್ಲೂ ಹೇಳಿದ್ದೀರಿ ಮತ್ತು ನಮ್ಮ ಸರ್ವ ಪಕ್ಷಗಳ ಸಭೆಯಲ್ಲಿ ಸಹ ಹೇಳಿದ್ದೀರಿ. ಮಾತಿನಿಂದಾಗಿ ನಮಗೆ ಅನೇಕ ಸಮಸ್ಯೆಗಳು ಆಯಿತು ಎಂದು ಹೇಳಿದ್ದೀರಿ. ಅದರಿಂದಾಗಿ ನಾನು ಸಲಹೆ ಮಾಡಿದೆ ಅಷ್ಟೇ.

SRI S.M.KRISHNA: Supreme Court is the highest Court in the land and there is no appeal, to all the decisions of the Supreme Court to a higher body. That is why I feel as far as the height of the dam which is 519 according to them is final. Now 524ಕ್ಕೆ ಹೋಗಬೇಕು ಎಂದು ಹೇಳಿ ನಮ್ಮ ಉದ್ದೇಶ ಏನು ಇದೆ that continues. ಆದ್ದರಿಂದ we will take all possible steps with the cooperation of all the Leaders of the Opposition. I will leave this at that point. ಯಾರೋ ಸದಸ್ಯರು ಹೇಳಿದರು. ಈ ಸರ್ಕಾರ ಮದ್ಯ ಲಾಬಿಯ ಕೈಗೊಂಬೆ ಆಗಿದೆ ಎಂದು ಹೇಳಿದರು. ಮದ್ಯ ಲಾಬಿಯ ಕಾರ್ಯಕರ್ತರು ಎಂದು ಹೇಳಲಿಲ್ಲ. ಲಾಬಿ ಕೈಗೊಂಬೆ ಆಗಿದೆ ಎಂದು ಹೇಳಿದರು. ನಾನು ಆ ಮಾನ್ಯ ಸದಸ್ಯರಿಗೆ ಕೇಳುತ್ತೇನೆ. ಕಳೆದ 20 ವರ್ಷಗಳಲ್ಲಿ ಈ ಪ್ರಮಾಣದ ತೆರಿಗೆಯನ್ನು ಯಾವುದಾದರೂ ಒಂದು ಸರ್ಕಾರ ಈ ಮದ್ಯದ ಲಾಬಿಯ ಮೇಲೆ ಹಾಕಿದೆ ಎನ್ನತಕ್ಕದ್ದನ್ನು ತಾವು ತೋರಿಸಿಕೊಡಿ. ಕಳೆದ 20

ವರ್ಷಗಳ ಆಯವ್ಯಯವನ್ನು ತೆಗೆದುಕೊಂಡು ನೋಡಿ. ಇದು ಅವರ ಕೈಗೊಂಬೆ ಎಂದು ಇದೆಯೋ ಅಥವಾ ಮದ್ಯದ ಲಾಬಿಯವರು ಎಸೆದಿರತಕ್ಕಂಥಹ ಸವಾಲನ್ನು ಈ ಸರ್ಕಾರ ಸ್ವೀಕರಿಸಿದೆ ಎನ್ನತಕ್ಕಂಥ ಮಾತಿನ ಬಗ್ಗೆ.

ಶ್ರೀ ಆರಗ ಜ್ಞಾನೇಂದ್ರ: ನಾನೂ ಮನ್ನಾ ಮಾಡಿರುವ ಬಗ್ಗೆ ಹೇಳಿದ ವಿಚಾರ.

ಶ್ರೀ ಎಸ್.ಎಂ.ಕೃಷ್ಣ: ಎಷ್ಟು ದಿವಸ. 1949ನೇ ಇಸವಿಯಿಂದ 360 ಕೋಟಿ ರೂಪಾಯಿಗಳು ಇವತ್ತು ನಾವು ಈ ದೃಢವಾದ ನಿರ್ಧಾರವನ್ನು ತೆಗೆದುಕೊಳ್ಳದೇ ಹೋಗಿದ್ದರೆ ನಮ್ಮ ಅವಸಾನ ಆದಮೇಲೂ ಕೂಡ ಈ 360 ಕೋಟಿ ರೂಪಾಯಿಗಳು ನಮ್ಮನ್ನು ಕೆಣಕುತ್ತಿದ್ದವು. ಅದಕ್ಕ ಇತಿಶ್ರೀ ಹಾಡಬೇಕು. ಕೆಲವೊಂದು ವಿಚಾರಗಳಲ್ಲಿ ಹಾಗೆ ಮಾಡಬೇಕು. ನಿಮ್ಮ ಸರ್ಕಾರ ಕೇಂದ್ರದಲ್ಲಿ ಕರ ಸಮಾಧಾನ ಏಕೆ ಮಾಡುತ್ತೀರಿ? ಇನ್‌ಕಂ ಟ್ಯಾಕ್ಸ್,ಎಕ್ಸೈಜ್ ಡ್ಯೂಟಿ, ಇವುಗಳಿಗೆ ಕರ ಸಮಾಧಾನ ಎನ್ನತಕ್ಕ ಎಷ್ಟು ಪ್ರೋಗ್ರಾಂಗಳು ಇವೆ? ಕೆಲಸ ಮಾಡತಕ್ಕಂಥ ಸರ್ಕಾರ ತೆಗೆದುಕೊಳ್ಳಬೇಕಾಗಿರತಕ್ಕಂಥ ಒಂದು ನೀತಿ ಇದು. ಇಲ್ಲದೇ ಇದ್ದರೆ ಪ್ರತಿ ವರ್ಷ ಆಯವ್ಯಯದಲ್ಲೂ ಕೂಡ 360 ಕೋಟಿ ರೂಪಾಯಿಗಳು 142 ಕೋಟಿ ರೂಪಾಯಿಗಳು ಅಸಲು, ಅದರ ಅಷ್ಟೇ ಅದಕ್ಕಿಂತ ಜಾಸ್ತಿ ಆಗಿರತಕ್ಕಂಥಹ ಬಡ್ಡಿ ಎಷ್ಟು ದಿವಸ ಇದನ್ನು ಹಾಗೆಯೇ ಬಿಡುವುದು? ಯಾರಾದರೂ ಒಬ್ಬರು ಧೈರ್ಯ ಮಾಡಬೇಕಲ್ಲ. ಆ ಧೈರ್ಯ ಮಾಡಲಿಕ್ಕೆ ಯಾರಿಗೆ ಸಾಧ್ಯ ಎಂದು ಹೇಳಿದರೆ ಕಾಂಗ್ರೆಸ ಪಕ್ಷಕ್ಕೆ ಮಾತ್ರ ಸಾಧ್ಯ. ಆ ಧೈರ್ಯ ಕಾಂಗ್ರೆಸ್ ಸರ್ಕಾರಕ್ಕೆ ಇದೆ. ನಿಮ್ಮಂತಹವರ ಮೂದಲಿಕೆಗಳನ್ನು, ನಿಮ್ಮಂಥವರ ಟೀಕೆಗಳನ್ನು ಎದುರಿಸತಕ್ಕಂಥಹ ಶಕ್ತಿ ನಮ್ಮಲ್ಲಿದೆ. ಆ ಶಕ್ತಿ ಎಲ್ಲಿಂದ ಬರುತ್ತದೆ ಎಂದು ಹೇಳಿದರೆ ನಮಗೆ ಅವರ ಜೊತೆಗೆ 'ಗಳಸ್ಯ ಕಂಠಸ್ಯ' ಇಲ್ಲ ನಮಗೆ. ಯಾವಾಗ ಗಳಸ್ಯ ಕಂಠಸ್ಯ ಇಲ್ಲವೋ ಆಗ ಮಾತ್ರ ಈ ಶಕ್ತಿ ಬರುತ್ತದೆಯೇ ಹೊರತು, ಗಳಸ್ಯ ಕಂಠಸ್ಯ ಇಟ್ಟುಕೊಂಡಿದ್ದವರ ಕೈಯಲ್ಲಿ ಇದನ್ನು ನಿರೀಕ್ಷೆ ಮಾಡತಕ್ಕದ್ದು ಬಹಳ ಕಷ್ಟ. ಅದನ್ನು ಹಿಂದಿನ ಸರ್ಕಾರ ಮಾಡಿ ತೋರಿಸಿದೆ. ಆದ್ದರಿಂದ ನಾವು ಇವತ್ತು ಧೈರ್ಯವಾಗಿ ಹೇಳುತ್ತಿದ್ದೇವೆ. ಇದನ್ನು ಬುದ್ಧಿ ಪೂರ್ವಕವಾಗಿ ನಾವು ತೆಗೆದುಕೊಂಡಿರತಕ್ಕ ನಿರ್ಧಾರ. ಸ್ಪಿರಿಟ್ ಹಗರಣದ ಬಗ್ಗೆ ಯಾರೋ ಮಾತನಾಡಿದರು. ಅದರಲ್ಲಿ ಕೆಲವರು ಸುಮಾರು ಏಳು ಕೋಟಿ ರೂಪಾಯಿಗಳು ಡಿಸ್ಟಿಲರಿಗಳು, ಸಾರಾಯಿ ತಯಾರಿಕಾ ಘಟಕಗಳು 1992ರವರೆಗಿನ ವಿಚಾರ ಹೇಳಿದರು. ಆ ಏಳು ಕೋಟಿ ರೂಪಾಯಿಗಳನ್ನು ಅಂದರೆ 7 ಕೋಟಿ 46 ಲಕ್ಷ, 89 ಸಾವಿರದ 418 ರೂಪಾಯಿಗಳನ್ನು ಡಿಸ್ಟಿಲರಿಯಿಂದ ವಸೂಲಿ ಮಾಡತಕ್ಕಂಥ ನಿರ್ಧಾರವನ್ನು ನಾವು ತೆಗೆದು ಕೊಂಡಿದ್ದೇವೆ. ಕೆಲವು ಐಎಎಸ್ ಅಧಿಕಾರಿಗಳ ಮೇಲೆ ಶಿಸ್ತು ನಡವಳಿಕೆಗಳು ನಡೆಯುತ್ತಿದೆ. ಕೆಲವರ ಹೆಸರುಗಳನ್ನು ಹೇಳಿದರು. ನಾನು ಹೆಸರುಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ.

1. 10 ಪಿ.ಎಂ

ಯಾರೇ ಐಎಎಸ್ ಆಗಲಿ, ಕೆಎಎಸ್ ಆಗಲೀ ಅಥವಾ ನಾನ್ ಗೆಜೆಟೆಡ್ ಆಗಲಿ, ಯಾರು ತಮ್ಮ ನಡವಳಿಕೆಗಳಲ್ಲಿ ಪ್ರಾಮಾಣಿಕತೆಯನ್ನು ತೋರಿಸುವುದಿಲ್ಲ. ಅಥವಾ ಪ್ರಾಮಾಣಿಕತೆಯನ್ನು ತೋರಿಸತಕ್ಕ ಕಾಲದಲ್ಲಿ ವಿಚಲಿತರಾಗುತ್ತಾರೆ. ಅವರ ಮೇಲೆ ಸರ್ಕಾರ ಕ್ರಮವನ್ನು ಜರುಗಿಸುತ್ತದೆ. ಅವರು ಐ.ಎ.ಎಸ್.` ಆಗಿರಲಿ, ಅಥವಾ ಕೆ.ಎ.ಎಸ್. ಆಗಿರಲಿ, ಎಷ್ಟು ಜನ ಅಧಿಕಾರಿಗಳು ಇಂತಹ ಮಿಸ್ ಅಪ್ರೋಪ್ರಿಯೇಷನ್ ಆಫ್ ಪಬ್ಲಿಕ್ ಫಂಡ್ಸ್ ಮಾಡಿದ್ದಾರೆ, ಅಂಥ ಆರೋಪಣೆ ಇದ್ದರೆ, ಆ ಆರೋಪಣೆ ಬಗ್ಗೆ ನಾವು ತನಿಖೆಯನ್ನು ಮಾಡುತ್ತೇವೆ. ಆ ತನಿಖೆ ಮುಗಿದ ಮೇಲೆ ಅವರ ಮೇಲೆ ನಾವು ಶಿಸ್ತಿನ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ. ಯಾರೋ ಒಬ್ಬ ಅಧಿಕಾರಿಯೊಬ್ಬರ ವಿಚಾರವನ್ನು ಒಬ್ಬ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಆದರೆ ಹಿಂದಿನ ಸರ್ಕಾರ ಆ ಅಧಿಕಾರಿ ಬಗ್ಗೆ ಮೂರು ಆರ್ಡರ್‌ಗಳನ್ನು ಮಾಡಿದೆ. ಹಿಂದಿನ ಸರ್ಕಾರ ಮಾಡಿರತಕ್ಕಂಥ ಮೂರು ಆರ್ಡರ್‌ಗಳನ್ನು ಈ ಸರ್ಕಾರ ಏನು ಮಾಡಲಿಕ್ಕೆ ಬರುತ್ತದೆ ಎನ್ನತಕ್ಕದ್ದನ್ನು ತಾವು ಆಲೋಚನೆ ಮಾಡಬೇಕು. ಮೂರು ಆರ್ಡರ್‌ಗಳಲ್ಲಿ ಈ ಅಧಿಕಾರಿ ನಿರ್ದೋಷಿ ಎನ್ನತಕ್ಕ ತೀರ್ಮಾನವನ್ನು ಹಿಂದಿನ ಸರ್ಕಾರ ತೆಗೆದುಕೊಂಡಿತ್ತು. ಆ ಹಿನ್ನೆಲೆಯಲ್ಲಿ ತಾವು ಮುಂದುವರಿಯುವುದಕ್ಕೆ ಸಾಧ್ಯ ಆಗುವುದಿಲ್ಲ ಎನ್ನತಕ್ಕದ್ದನ್ನು ಹೇಳುತ್ತಿದ್ದೇನೆ. ಹೊಸ ಪವರ್ ಪ್ರಾಜೆಕ್ಟ್ ನಮ್ಮ ರಾಜ್ಯದಲ್ಲಿ ಬರುತ್ತಿಲ್ಲ. ಎಷ್ಟೋ ಪ್ರಾಜೆಕ್ಟ್‌ಗಳು ನಮ್ಮಿಂದ ಹೊರಗಡೆ ಹೊರಟು ಹೋಯಿತು ಎಂದು ಮಾನ್ಯ ಸದಸ್ಯರು ಈ ಸರ್ಕಾರದ ಮೇಲೆ ಟೀಕೆ ಮಾಡಿದ್ದಾರೆ. ನಾವು ಒಂದು ಹೊಸ ನೀತಿಯನ್ನು ಈಗ ಒಪ್ಪಿದ್ದೇವೆ. ಈ ಹೊಸ ನೀತಿ ಏನು ಅಂದರೆ ಯಾರೇ ಇಂಡಿಪೆಂಡೆಂಟ್ ಪವರ್ ಪ್ರೊಡ್ಯೂಸರ್‌ಗಳು ನಮ್ಮ ರಾಜ್ಯದಲ್ಲಿ ಈ ವಿದ್ಯುತ್ ಉತ್ಪಾದನೆಯನ್ನು ಮಾಡತಕ್ಕ ಸಮಯದಲ್ಲಿ ನಾವು ಎಸ್ಕ್ರೋ ಕವರ್ ಕೊಡಲಿಕ್ಕೆ ಸಾಧ್ಯ ಆಗುವುದಿಲ್ಲ ಎನ್ನತಕ್ಕದ್ದು ಈ ಸರ್ಕಾರ ಮತ್ತೆ ಬುದ್ಧಿ ಪೂರ್ವಕವಾಗಿ ತೆಗೆದುಕೊಂಡಿರತಕ್ಕ ಒಂದು ನಿರ್ಧಾರ. ಕೆಲವರಿಗೆ ಅನುಮಾನಗಳು ಇರಬಹುದು. ಅದು ಸ್ವಾಭಾವಿಕವಾದಂತಹ ಅನುಮಾನಗಳು. ಏನು ಅಂದರೆ, ಈ ಒಂದು ಹಿನ್ನೆಲೆಯಲ್ಲಿ ಯಾರಾದರೂ ಕೆಲವರು ಮುಂದೆ ಬರುತ್ತಾರೋ ಇಲ್ಲವೋ ಎನ್ನತಕ್ಕಂಥ ಅನುಮಾನಗಳು ನಮ್ಮನ್ನು ಕಾಡಲಿಕ್ಕೆ ಸಾಧ್ಯ. ಆದರೆ ನಾನು ಈ ದಿವಸ ಸ್ಪಷ್ಟವಾಗಿ ಈ ಸದನದ ಮೂಲಕ ಈ ರಾಜ್ಯದ ಜನತೆಗೆ ಹೇಳತಕ್ಕದ್ದು ಏನು ಎಂದು ಹೇಳಿದರೆ ಕರ್ನಾಟಕ ಪವರ್ ಕಾರ್ಪೊರೇಷನ್ನಿನವರು ಈಗಾಗಲೇ ತೀರ್ಮಾನಗಳನ್ನು ತೆಗೆದುಕೊಂಡಿದ್ದಾರೆ. ಅದು ರಾಯಚೂರು ಥರ್ಮಲ್ ಏಳನೇ ಘಟಕದ ಕೆಲಸವನ್ನು ಈ ವರ್ಷ ಪ್ರಾರಂಭಿಸುತ್ತೇವೆ. ಮತ್ತು ಬಿಡದಿಯಲ್ಲಿ ನಾವು ಸುಮಾರು 700 ಮೆಗಾವ್ಯಾಟ್ ವಿದ್ಯುತ್ ಬಗ್ಗೆ, ಸಧ್ಯದಲ್ಲಿ ಮುನ್ನೂರಾ ಹದಿನೈದು ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಕೆಲಸವನ್ನು ಪ್ರಾರಂಭ ಮಾಡಲಿಕ್ಕೆ ನಾವು ಅವರಿಗೆ ಗ್ರೀನ್ ಸಿಗ್ನಲ್ ಕೊಟ್ಟಿದ್ದೇವೆ. ಹಾಗೆಯೇ ಬಳ್ಳಾರಿಯ ವಿಜಯನಗರದಲ್ಲಿ ಸುಮಾರು 750 ಸಾಮರ್ಥ್ಯದ ಮೆಗಾವ್ಯಾಟ್ ಪವರ್ ಅನ್ನು ಅಲ್ಲಿ ಪ್ರಾರಂಭ ಮಾಡಲಿಕ್ಕೆ ಅಲ್ಲಿ ಈಗಾಗಲೇ ಪೂರ್ವಭಾವಿ ಕಾರ್ಯಕ್ರಮಗಳನ್ನು

ತೆಗೆದುಕೊಳ್ಳುತ್ತಿದ್ದೇವೆ. ಅಲ್ಲಿ ನಮಗೆ ಎರಡೂ ಆಪ್ಷನ್ಸ್ ಇವೆ. ಈಗ ಫೀಡ್ ಸ್ಟಾಕ್ ಯಾವುದು ಇರಬೇಕು ಹಾಗೆ ಎಂದು ಹೇಳಿ, ಅದರ ಬಗ್ಗೆ ಮುಂದಿನ ದಿನಗಳಲ್ಲಿ ನಾನು ಸದನದಲ್ಲಿ ಮತ್ತೆ ತಮ್ಮ ಮುಂದೆ ತಿಳಿಸುತ್ತೇನೆ. ಆದರೆ ಇವು ನಾವು ನಮ್ಮ ಪಬ್ಲಿಕ್‌ಸೆಕ್ಟಾರ್‌ನಲ್ಲಿ ಮಾಡುತ್ತಿರತಕ್ಕದ್ದು. ಮತ್ತು ಪ್ರೈವೇಟ್ ಸೆಕ್ಟಾರ್‌ನಲ್ಲಿ ಈಗಾಗಲೇ ಚೈನಾ ಪವರ್ ಅಂಡ್ ಲೈಟ್‌ನವರು ನಮ್ಮ ಜೊತೆಯಲ್ಲಿ ಮಾತುಕತೆಗಳನ್ನು ಪ್ರಾರಂಭ ಮಾಡಿದ್ದಾರೆ. ಕೊಜೆಂಟ್ರಿಕ್ಸ್ ಈಗ ಇತಿಹಾಸ ಆಗಿ ಹೋಯಿತು. ಇನ್ನು ಮೇಲೆ ಆ ಹೆಸರು ಚಾಲ್ತಿಯಲ್ಲಿರುವುದಿಲ್ಲ. ಏಕೆಂದರೆ ಕೊಜೆಂಟ್ರಿಕ್ಸ್‌ನವರು ವಾಪಸ್ ಅಮೇರಿಕಾ ದೇಶದ ಅವರ ಊರಿಗೆ ಹೊರಟು ಹೋದರು. ಅದಕ್ಕೆ ಬದಲು ಚೈನಾ ಪವರ್ ಅಂಡ್ ಲೈಟ್ ಕಂಪನಿಯವರು, ಟಾಟಾ ಕಂಪನಿಯವರು ಸಖ್ಯದಿಂದ ಮಂಗಳೂರಿನಲ್ಲಿ ಈ ವಿದ್ಯುತ್ ಉತ್ಪಾದನಾ ಘಟಕವನ್ನು ಸ್ಥಾಪನೆ ಮಾಡುತ್ತೇವೆ. 1,000 ಮೆಗಾವ್ಯಾಟ್ ಕೆಪಾಸಿಟಿ ಎಂದು ಹೇಳಿ ನಮ್ಮ ಮುಂದೆ ಬಂದಿದ್ದಾರೆ. ಅದಕ್ಕೆ ಪೂರ್ವಭಾವಿ ಸಮಾಲೋಚನೆಗಳು ನಡೆಯುತ್ತಿವೆ. ಇವುಗಳೆಲ್ಲವೂ ಏನು ತೋರಿಸುತ್ತದೆ ಎಂದರೆ ನಾವು ಎಸ್ಕ್ರೋ ಕವರ್ ಕೊಡಲಿಲ್ಲ ಅಂದ ಮಾತ್ರಕ್ಕೆ ಇಲ್ಲಿ ಬಂದಿದ್ದವರೆಲ್ಲ ವಾಪಸ್ ಹೊರಟು ಹೋದರು ಎನ್ನತಕ್ಕ ಏನು ಒಂದು ತಪ್ಪು ಗ್ರಹಿಕೆ ಇದೆ. ಆ ಗ್ರಹಿಕೆಯನ್ನು ನಾನು ನಿವಾರಿಸಲಿಕ್ಕೋಸ್ಕರ ಈ ಮಾತುಗಳನ್ನು ಹೇಳಬೇಕಾಗಿದೆ. ಕೊಜೆಂಟ್ರಿಕ್ಸ್ ಒಂದು ಕಾಲದಲ್ಲಿ ಬಹಳ ದೊಡ್ಡ ಮಾತಾಗಿತ್ತು. ಆದರೆ ಯಾವಾಗ 1990ರ ದಶಕಗಳಲ್ಲಿ ಬಂಡವಾಳ ನಾವು ರೂಢಿಸಲಿಕ್ಕೆ ಸಾಧ್ಯ ಇಲ್ಲ ಎನ್ನತಕ್ಕಂಥ ಪರಿಸ್ಥಿತಿ ನಿರ್ಮಾಣ ಆಗಿದ್ದಂತಹ ಕಾಲದಲ್ಲಿ ಈ ಮಾತು ಬರುತ್ತಿತ್ತು. ಆದರೆ, ಈಗ ನಮ್ಮ ದೇಶದಲ್ಲಿಯೇ ಉದಾಹರಣೆಗಾಗಿ ಐಸಿಐಸಿಐನವರು ಮುಂದೆ ಬಂದಿದ್ದಾರೆ. ನಮ್ಮ ವಿಜಯನಗರದಲ್ಲಿ ಹಾಕತಕ್ಕಂಥ ಪವರ್ ಪ್ರಾಜೆಕ್ಟ್‌ಗೆ ನಾವು ಸಹಭಾಗಿಗಳಾಗುತ್ತೇವೆ ಎನ್ನತಕ್ಕ ವಿಚಾರದಲ್ಲಿ ಅವರು ಮುಂದೆ ಬಂದಿದ್ದಾರೆ. ಆದ್ದರಿಂದ ನಾವು ಈಪವರ್ ಪ್ರಾಜೆಕ್ಟ್ಸ್ ವಿಚಾರದಲ್ಲಿ, ಸದನದಲ್ಲಿ ಕೊಂಚ ಅನುಮಾನಗಳು ಇದ್ದರೆ ಆ ಅನುಮಾನಗಳನ್ನು ನಾವು ನಿವಾರಣೆ ಮಾಡುವುದಕ್ಕೋಸ್ಕರ ಈ ಮಾತುಗಳನ್ನು ಹೇಳುತ್ತಿದ್ದೇವೆ. ರಾಜ್ಯದ ಹತ್ತು ಹಲವಾರು ಸಮಸ್ಯೆಗಳು ನಮ್ಮನ್ನು ಆವರಿಸಿದೆ. ಆ ಸಮಸ್ಯೆಗಳೆಲ್ಲದಕ್ಕೂ ನಾವು ಪರಿಹಾರವನ್ನು ಹುಡುಕಬೇಕಾಗಿರತಕ್ಕದ್ದು ಬಹಳ ಅವಶ್ಯಕತೆ ಇದೆ. ಹಾಗೆ ಹುಡುಕತಕ್ಕಂಥ ಕಾಲದಲ್ಲಿ ನಾವು ನಮ್ಮ ಒಟ್ಟಾರೆ ದೃಷ್ಟಿಯನ್ನು ಗಮನದಲ್ಲಿಟ್ಟಕೊಂಡು ಮುಂದುವರೆಯಬೇಕಾಗುತ್ತದೆ. ಕೇವಲ ಈ ಮಂತ್ರಿಮಂಡಲದ ಪ್ರತಿಷ್ಠೆಯ ವಿಚಾರವಲ್ಲ. ಅಥವಾ ಈ ಸರ್ಕಾರದ ಪ್ರತಿಷ್ಠೆಯ ವಿಚಾರವೂ ಅಲ್ಲ. ನಾವು ನೀವು ಸಹಭಾಗಿಗಳಾಗಿ ಈ ರಾಜ್ಯದ ಸರ್ವತೋಮುಖವಾದಂತಹ ಅಭಿವೃದ್ಧಿಯ ಕಡೆಗೆ ನಮ್ಮ ದೃಷ್ಟಿಯನ್ನು ಬೀರಬೇಕಾಗಿದೆ. ಮಾನ್ಯ ಸದಸ್ಯರು ನಮ್ಮ ರಾಜ್ಯದಲ್ಲಿರತಕ್ಕಂಥಹ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಜನಗಳ ಜ್ವಲಂತ ಸಮಸ್ಯೆ ಬಗ್ಗೆ ನಮ್ಮ ಗಮನವನ್ನು ಸೆಳೆದಿದ್ದಾರೆ. ಈ ಸರ್ಕಾರದ ಪ್ರಿಯಾರಿಟೀಸ್ ವಿಚಾರದಲ್ಲಿ, ಈ ಸರ್ಕಾರದ ಆದ್ಯತಾ ಕ್ಷೇತ್ರ ಯಾವುದಾದರೂ ಒಂದು ಇದ್ದರೆ ಅದು ಈ ಪರಿಶಿಷ್ಟ ಜನಾಂಗ ಮತ್ತು ಪರಿಶಿಷ್ಟ

ಪಂಗಡ ಇವರುಗಳ ಅಭಿವೃದ್ಧಿಗೋಸ್ಕರ ನಾವು ಮುಂದಿನ ದಿನಗಳಲ್ಲಿ ವಿಶೇಷ ಗಮನವನ್ನು ಕೊಡಬೇಕಾಗಿರತಕ್ಕದ್ದು. ಅದೂ ಎಲ್ಲಾ ಕ್ಷೇತ್ರಗಳಿಗಿಂತಲೂ ನಾವು ಹೆಚ್ಚು ಇದಕ್ಕೆ ಒತ್ತನ್ನು ಕೊಡುತ್ತಿದ್ದೇವೆ. ವಿದ್ಯಾಭ್ಯಾಸದ ವಿಚಾರವೇ ಆಗಲೀ ಅಥವಾ ಈ ಗಂಗಾ ಕಲ್ಯಾಣ ಯೋಜನೆ ವಿಚಾರದಲ್ಲಿ ಆಗಲಿ. ಭಾಗ್ಯ ಜ್ಯೋತಿ ವಿಚಾರವೇ ಆಗಲಿ. ಈಗ ಭಾಗ್ಯ ಜ್ಯೋತಿ ಯೋಜನೆಯಲ್ಲಿ ಒಂದು ಕಂಬ ಎಂದು ಇತ್ತು, ಅದನ್ನು ಎರಡು ಕಂಬ ಮಾಡಿರುವ ಉದ್ದೇಶ ಏನು? ಭಾಗ್ಯಜ್ಯೋತಿ ಫಲಾನುಭವಿಗಳಿಗೆ, ಯಾರು ಬಡತನದ ರೇಖೆಯ ಕೆಳಗಡೆ ಇದ್ದಾರೆ, ಅವರ ಬಗ್ಗೆ ವಿಶೇಷವಾದಂತಹ ಕಳಕಳಿ ಸರ್ಕಾರಕ್ಕೆ ಇದೆ ಎನ್ನುವುದಕ್ಕೆ ದ್ಯೋತಕವಾಗಿ ಆ ಎರಡು ಕಂಬಗಳಿಗೆ ವಿಸ್ತರಿಸಲಾಗಿದೆ. ಇದರಿಂದ ಕರ್ನಾಟಕ ಪವರ್ ಟ್ರಾನ್ಸ್‌ಮಿಷನ್ ಕಾರ್ಪೊರೇಷನ್‌ಗೆ ಬಹಳ ದೊಡ್ಡ ಪ್ರಮಾಣದ ಸಂಪನ್ಮೂಲಗಳ ವ್ಯವಸ್ಥೆ ಬೇಕಾಗುತ್ತದೆ. ಆದರೆ ಆ ಸಂಪನ್ಮೂಲಗಳನ್ನು ಒದಗಿಸಿಕೊಡತಕ್ಕ ರಾಜಕೀಯ ಇಚ್ಛಾಶಕ್ತಿಯನ್ನು ಈ ಸರ್ಕಾರ ಪ್ರದರ್ಶನ ಮಾಡಿದೆ ಎನ್ನತಕ್ಕದ್ದನ್ನು ನಾನು ಹೇಳುತ್ತಿದ್ದೇನೆ. ರಾಜಕೀಯಒತ್ತಡಕ್ಕೆ ಮಣಿದು ಜಿಲ್ಲಾಧಿಕಾರಿಗಳನ್ನು ವರ್ಗ ಮಾಡಿದರು ಎಂದು ಹೇಳಿ ಮಾನಯ ಸದಸ್ಯರೊಬ್ಬರು ಟೀಕೆಯನ್ನು ಮಾಡಿದರು. ಜಿಲ್ಲಾಧಿಕಾರಿಗಳನ್ನು ವರ್ಗ ಮಾಡಲೇ ಬೇಕಾಗುತ್ತದೆ. ಈ ಸರ್ಕಾರದ ಬಗ್ಗೆ ನೀವು ಔದಾರ್ಯದಿಂದ ವರ್ತಿಸುತ್ತೀರಿ ಎಂದು ಹೇಳಿ ನಾನು ಭಾವನೆ ಮಾಡಿದ್ದೆ. ಈ ಸರ್ಕಾರ ಆರು ತಿಂಗಳ ಕೆಳಗೆ ಬಂದಾಗ ತಕ್ಷಣದಲ್ಲಿಯೇ ದೊಡ್ಡ ಪ್ರಮಾಣದಲ್ಲಿ ನಾವು ಅಧಿಕಾರಿಗಳ ವರ್ಗಾವಣೆಯನ್ನು ಮಾಡಬಹುದಾಗಿತ್ತು. ಬೇಡ ಎನ್ನುತಕ್ಕಂಥ ಮಾತನ್ನು ಯಾರೂ ಹೇಳಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ. ಆದರೆ, ಯಾವ ಉದ್ದೇಶದಿಂದ ನಾವು ಆ ವರ್ಗಾವಣೆಗಳಿಗೆ ಕೈಹಾಕಲಿಲ್ಲವೆಂದರೆ, ಸರ್ಕಾರಿ ನೌಕರರುಗಳ ಕುಟುಂಬಗಳು, ಅವರ ಮಕ್ಕಳನ್ನು ಗಮನದಲ್ಲಿಟ್ಟುಕೊಂಡಿದ್ದೇವೆ. ಅವರು ತಮ್ಮ ಮಕ್ಕಳನ್ನು ಶಾಲೆಗಳಿಗೆ, ಕಾಲೇಜುಗಳಿಗೆ ಸೇರಿಸಿರುತ್ತಾರೆ, ಅಲ್ಲಿಯೇ ಒಂದು ರೀತಿಯಲ್ಲಿ ಸೆಟ್ಲ್ ಆಗಿರುತ್ತಾರೆ. ವರ್ಷದ ಮಧ್ಯೆ ನಾವು ಅವರನ್ನು ಅನ್‌ಸೆಟ್ಲ್ ಮಾಡತಕ್ಕಂಥ ಕೃತ್ಯಕ್ಕೆ ಹೋಗಬಾರದೆಂಬ ದೃಷ್ಟಿಯಿಂದ ನಾವು ವರ್ಗಾವಣೆಗಳಿಗೆ ಕೈಹಾಕಲಿಲ್ಲ. ಆದರೆ, ಎಷ್ಟು ದಿವಸಗಳ ಕಾಲ ನಾವು ಅವರನ್ನು ಅಲ್ಲಿಯೇ ಬಿಡುವುದಕ್ಕಾಗುತ್ತದೆ? ಕೆಲವರು ನಾಲ್ಕೈದು ವರ್ಷಗಳಿಂದ, ಎಂಟತ್ತು ವರ್ಷಗಳಿಂದಲೂ ಅಥವಾ ಹಿಂದಿನ ಸರ್ಕಾರವಿದ್ದ It was co-terminous. ನ್ಯಾಯವಾಗಿ ಆಗಬೇಕಾಗಿತ್ತು. But, it hasn't become co-terminous. They are still continuing and many of the Hon'ble Members are victims of that kind of a situation. ಆದುದರಿಂದ, ಈ ಒಂದು ಸಿಸ್ಟಂ ಏನಿದೆ, ಇದನ್ನು ಹಾಗೇ ಮುಂದುವರೆಯಲು ಬಿಟ್ಟಿದ್ದೇವೆ. ಅದರಲ್ಲಿ ತಾವು ಮಾನವೀಯತೆಯನ್ನು ನೋಡಬೇಕು. That is the limited point I am going to make. ನಾವು ಅದರಲ್ಲಿ ಮಾನವೀಯತೆಯನ್ನು ಪ್ರದರ್ಶಿಸಿದ್ದೇವೆ. ಬದಲಾಗಿ ಅದರಲ್ಲಿ ರಾಜಕೀಯ

ಮಾಡುವುದಕ್ಕಾಗಲೀ, ಚಿಲ್ಲರೆ ಕೆಲಸ ಮಾಡುವುದಕ್ಕಾಗಲೀ ಈ ಸರ್ಕಾರ ಹೋಗಲಿಲ್ಲವೆನ್ನುವುದು ದಾಖಲೆಯಾಗಬೇಕಾಗಿದೆ. ನೀವೂ ಮಾಡಲಿಲ್ಲವೆಂದರೆ ನಿಮ್ಮಲ್ಲೂ ಮಾನವೀಯತೆ ಇತ್ತೆನ್ನುವುದನ್ನು I concede it if you did not do it. I am only referring to what I have done.

ಶ್ರೀ ಪಿ.ಜಿ.ಆರ್.ಸಿಂಧ್ಯ: ತಾವು ಒಂದು ಗಂಟೆ ಇಪ್ಪತ್ತು ನಿಮಿಷಗಳ ಕಾಲ ಮಾತನಾಡಿ ಉತ್ತರ ಕೊಟ್ಟಿದ್ದೀರಿ. ತಾವು ಮಾತನಾಡುತ್ತಿದ್ದಾಗ ನಾವ್ಯಾರೂ ಕೂಡ ಇಂಟರಪ್ಟ್ ಮಾಡುವುದಕ್ಕೆ ಹೋಗಲಿಲ್ಲ. ನಾವು 1994ರ ನವೆಂಬರ್ ತಿಂಗಳಿನಲ್ಲಿ ಸರ್ಕಾರವನ್ನು ರಚಿಸಿದೆವು. ಸರ್ಕಾರ ಅಸ್ತಿತ್ವಕ್ಕೆ ಬಂದ ಆರು ತಿಂಗಳೊಳಗೆ ನಾವು ಯಾವುದೇ ಅಧಿಕಾರಿಗಳನ್ನು ಸಹ ಬದಲಾವಣೆ ಮಾಡಲಿಲ್ಲ. ಮುಖ್ಯ ಕಾರ್ಯದರ್ಶಿಗಳಿಂದ ಹಿಡಿದು ಡಿ.ಜಿ.ಪಿ.ವರೆವಿಗೂ ಯಾವುದೇ ಅಧಿಕಾರಿಗಳನ್ನು ಮುಟ್ಟಲು ಹೋಗಲಿಲ್ಲ. ಇನ್ನು ಬಹಳಷ್ಟು ವಿಚಾರಗಳಿವೆ, ನಾನು ಹೇಳುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ: ಇದೊಂದು ವಿಚಾರದಲ್ಲಿ ನಾವು ನಿಮ್ಮನ್ನು ಅನುಕರಿಸುತ್ತೇವೆ. ಎಲ್ಲಾದಕ್ಕೂ ಕೂಡ 'ನಾವು ಮಾಡಲಿಲ್ಲ, ನೀವು ಮಾಡಿ' ಎಂದು ಹೇಳುತ್ತಿದ್ದೀರಿ. ನಿಮ್ಮನ್ನು ಮಾಡಬಾರದೆಂದು ಹೇಳಿದವರು ಯಾರು? ಜನರು ನಿಮಗೆ ಮಾಡಬಾರದೆಂದು ಹೇಳಿದರೇ? ನೀವು ಎಷ್ಟೋ ಬಾರಿ ಈ ಮಾತನ್ನು ಹೇಳಿದ್ದೀರಿ. ಇದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಿರಬೇಕು. 'ನಾವು ಮಾಡಲಿಲ್ಲ, ಅದಕ್ಕಾಗಿಯೇ ಇಲ್ಲಿಗೆ ಬಂದು ಕುಳಿತಿದ್ದೇವೆ, ಅದಕ್ಕೋಸ್ಕರ, ನಮ್ಮ ಸಂಖ್ಯೆ 18 ಆಗಿದೆ, 8 ಆಗಿದೆ, 9 ಆಗಿದೆ, ನೀವು ಮಾಡಿ' ಎಂದು ಹೇಳುತ್ತಿದ್ದೀರಲ್ಲ, ಇದು ಕಸುಬುದಾರರ ಲಕ್ಷಣವಲ್ಲ. ಆದುದರಿಂದ, ಈ ಒಂದು ಹತಾಶ ಭಾವನೆ, ಎಸ್ಕೇಪಿಸಂ ಏನಿದೆ.

ಶ್ರೀ ಸಿ.ಬೈರೇಗೌಡ: ಅದನ್ನೇ ನಾನೂ ಹೇಳಿದ್ದು. ಕಸುಬುದಾರರೆಂದರೆ ಒಬ್ಬ ಮಂತ್ರಿಗಳ ಕಛೇರಿಗೆ ಹೋದ ತಕ್ಷಣ ನಾಲ್ಕೈದು ಸೆಲ್ ಫೋನ್‌ಗಳನ್ನು ಇಟ್ಟುಕೊಂಡು ನಿಂತಿರುತ್ತಾರಲ್ಲ, ಅವರುಗಳನ್ನು ನೀವು ಕಸುಬುದಾರರೆಂದು ಒಪ್ಪಿಕೊಂಡಿದ್ದೀರಿ. ಅದಕ್ಕೆ ಧನ್ಯವಾದಗಳು.

ಶ್ರೀ ಎಸ್.ಎಂ.ಕೃಷ್ಣ: ನಾನು ಆ ಕಸುಬನ್ನು ಹೇಳಲಿಲ್ಲ, ಬೇರೆ ಕಸುಬನ್ನು ಹೇಳಿದ್ದು. ಆರು ತಿಂಗಳುಗಳಲ್ಲಿ ಏನು ಸಾಧನೆ ಮಾಡಿದಿರಿ? ಎಂದಿದ್ದೀರಿ. ಕಳೆದ ಆರು ತಿಂಗಳುಗಳಲ್ಲಿ ಕರ್ನಾಟಕದ ಜನತೆ ನಮ್ಮ ಮೇಲಿಟ್ಟಿದ್ದಂಥ ಭರವಸೆಯನ್ನು ಮತ್ತಷ್ಟು ದೃಢೀಕರಿಸಿಕೊಂಡು ವಿಶ್ವಬ್ಯಾಂಕಿನವರು ಯಾವ ರಾಜ್ಯವನ್ನು ತಮ್ಮ ಪ್ರಿಯಾರಿಟಿ ಫೋಕಸ್ ಲಿಸ್ಟ್‌ನಿಂದ ತೆಗೆದು ಹಾಕಿದ್ದರೋ, ಅಲ್ಲಿಗೇ ಪುನಃ ಆ ಫೋಕಸ್ ಅನ್ನು ಜಾರಿಗೆ ತಂದೆವು. ಇನ್ನು ಕನ್ನಡದ ಬಗ್ಗೆ ನಾವು ವಿಶೇಷವಾದ ಗಮನ ಕೊಡಬೇಕಾಗಿರುತ್ತದೆ. ಕನ್ನಡದ ಬಗ್ಗೆ ಬೇಕಾದಷ್ಟು ಜನರ ಅನಿಸಿಕೆಗಳಿವೆ, ಈ ಸದನದ ಆತುರವೂ ಇದೆ. ಬಹಳಷ್ಟು ಸಲ ನಾವು ನಮ್ಮ ಸಹನೆಯನ್ನು ಕಳೆದುಕೊಂಡಿದ್ದೇವೆ. ಕನ್ನಡ ನಾಡಿನಲ್ಲಿ

ಕನ್ನಡಕ್ಕೆ ಆದ್ಯತೆ ಸಿಗುತ್ತಿಲ್ಲ. ನಮ್ಮ ಭಾಷೆ ಬಗ್ಗೆ ನಮಗಿರುವ ಅಭಿಮಾನ ದಿನೇದಿನೇ ಜಾಸ್ತಿಯಾಗಬೇಕು. ಆ ಅಭಿಮಾನಕ್ಕೆ ಪೂರಕವಾಗಿ ಈ ಸರ್ಕಾರ ಕೆಲಸ ಮಾಡಬೇಕೆನ್ನುವುದು ಈ ಸದನದ ಅಂತರಾಳದಲ್ಲಿರುವ ತೀವ್ರತೆಯಾಗಿದೆ. ಕರ್ನಾಟಕದ ಜನ ಸಮುದಾಯಕ್ಕೆ ಉಪಯುಕ್ತವಾಗುವ ದೂರಗಾಮಿ ನಿಲುವನ್ನು ನಮ್ಮ ಸರ್ಕಾರ ತೆಗೆದುಕೊಳ್ಳಬೇಕಾಗಿದೆ. ಕನ್ನಡಿಗರ ಬದುಕಿಗೆ ಬೆಳಕನ್ನು ತರುವ ಕೆಲಸವನ್ನು ನಮ್ಮ ಸರ್ಕಾರ ಮಾಡಬೇಕಾಗಿದೆ. ಇದಕ್ಕೆ ಮಾನ್ಯ ಸದಸ್ಯರುಗಳ ಸಹಕಾರ ಬೇಕಾಗುತ್ತದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ನಮ್ಮ ಗಮನಕ್ಕೆ ತಂದಿರುವ ಒಂದು ವಿಶೇಷವಾದ ವಿಚಾರವೇನೆಂದರೆ, ಒಂದನೇ ತರಗತಿಯಿಂದ ಹತ್ತನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ವೃತ್ತಿ ಶಿಕ್ಷಣದಲ್ಲಿ ಅಂದರೆ, ಇಂಜಿನಿಯರಿಂಗ್, ವೈದ್ಯಕೀಯ, ಎಂ.ಬಿ.ಎ., ಬಿ.ಎಡ್, ಟಿ.ಸಿ.ಹೆಚ್. ಹೀಗೆ ಎಲ್ಲಾ ರೀತಿಯ ವೃತ್ತಿ ಶಿಕ್ಷಣ ಹಾಗೂ ಉನ್ನತ ಶಿಕ್ಷಣದಲ್ಲಿ ಆದ್ಯತೆ ಮೇಲೆ ಪ್ರವೇಶ ಕೊಡಬೇಕೆಂದು ಅವರು ನನ್ನ ಸರ್ಕಾರದ ಗಮನ ಸೆಳೆದಿದ್ದಾರೆ. ಹೀಗೆ ಮಾಡುವುದರಿಂದ ಗ್ರಾಮೀಣ ಮತ್ತು ನಗರಪ್ರದೇಶಗಳ ಬಡ ಹಾಗೂ ಮಧ್ಯಮವರ್ಗದ ಮಕ್ಕಳಿಗೆ ಪ್ರಯೋಜನವಾಗುತ್ತದೆನ್ನುವ ಮಹತ್ವಾಕಾಂಕ್ಷೆ ಅವರದಾಗಿದೆ ಮತ್ತು ಒತ್ತಾಯವಿಲ್ಲದೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಲ್ಲಿ ಕನ್ನಡ ಮಾಧ್ಯಮದಲ್ಲಿ ಓದಿದವರ ಸಂಖ್ಯೆ ಸ್ವಾಭಾವಿಕವಾಗಿ ಹೆಚ್ಚಾಗುತ್ತದೆ ಎನ್ನುವುದರಲ್ಲಿ ಎರಡು ಅಭಿಪ್ರಾಯಗಳು ಬರಲು ಸಾಧ್ಯವಿಲ್ಲ. ಆದುದರಿಂದ ವೃತ್ತಿ ಶಿಕ್ಷಣ ಮತ್ತು ಉನ್ನತ ಶಿಕ್ಷಣದಲ್ಲಿ ಕನ್ನಡ ಮಾಧ್ಯಮದವರಿಗೆ ಆದ್ಯತೆ ಕೊಡುವ ವಿಚಾರದಲ್ಲಿ ಸರ್ಕಾರ ತಾತ್ವಿಕವಾಗಿ ಒಪ್ಪಿದೆ. ಇಷ್ಟರಲ್ಲಿಯೇ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೊಂದಿಗೆ ಮತ್ತು ನಮ್ಮ ಮುಖ್ಯ ಕಾರ್ಯದರ್ಶಿಯವರೊಂದಿಗೆ ಹಾಗೂ ಸಂಬಂಧಪಟ್ಟ ಸಚಿವಾಲಯದ ಅಧಿಕಾರಿಗಳೊಂದಿಗೆ ಚರ್ಚಿಸಿ ಇದರ ಬಗ್ಗೆ ನಿರ್ಣಯ ಕೈಗೊಳ್ಳುತ್ತೇವೆ. ಇದಕ್ಕೆ ಈ ಸದನದ ಒಪ್ಪಿಗೆ ಇದೆಯೆಂದು ನಾನು ಭಾವಿಸುತ್ತೇನೆ. ಮಾನ್ಯ ಅಧ್ಯಕ್ಷರೆ, ನಾನು ಹೇಳಬೇಕಾದಂಥ ಇನ್ನೂ ಹಲವಾರು ವಿಚಾರಗಳಿವೆ. ಇದೇ ನನ್ನ ಕೊನೇ ಭಾಷಣ ಆಗುವುದಕ್ಕೆ ಸಾಧ್ಯವಿಲ್ಲ. ಇದು ಬಜೆಟ್ ಸಮಾವೇಶವಾಗಿದ್ದು, ನಾನಾ ಇಲಾಖೆಗಳ ಬೇಡಿಕೆಗಳ ಮೇಲೆ ಈ ಸದನದಲ್ಲಿ ಆಗತಕ್ಕಂಥ ಚರ್ಚೆಗೆ ನಾನು ಉತ್ತರಿಸಬೇಕಾಗಿದೆ. ನಾನು ಮಾತನಾಡುವಾಗ ನನ್ನ ಭಾಷಣದ ಮಧ್ಯೆ ಕೆಲವು ಟೀಕೆಗಳು ಬಂದಿದ್ದರೆ, ನಾವು ಹೇಗೆ ನೀವು ಮಾಡಿದಂಥ ಟೀಕೆಗಳನ್ನು ತೆಗೆದುಕೊಂಡೆವೋ ಆದೇ ಸ್ಫೂರ್ತಿಯಿಂದ ನಾನು ಹೇಳಿರುವ ನಾಲ್ಕು ಮಾತುಗಳನ್ನು ತಾವು ತೆಗೆದುಕೊಳ್ಳತಕ್ಕಂಥ ಔದಾರ್ಯವನ್ನು ಮತ್ತು ಸಂಸದೀಯ ಪ್ರಬುದ್ಧತೆಯನ್ನು ತೋರುತ್ತೀರೆಂದು ತಿಳಿಸುತ್ತಾ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರ

ಕೊಟ್ಟರು. ಉತ್ತರ ಕೊಡುವಂಥ ಸಂದರ್ಭದಲ್ಲಿ ಕಾನೂನು ಸುವ್ಯವಸ್ಥೆ ಬಗ್ಗೆ ಹಿಂದಿನ ಮತ್ತು ಇವೊತ್ತಿನ ಸರ್ಕಾರದ ಕಂಪ್ಯಾರಿಶನ್ ಬರುತ್ತದೆ. ಅದು ಹಿಂದಿನ ಸರ್ಕಾರದ ಕೊನೇ ವರ್ಷದಲ್ಲಿ ಆದಂಥದ್ದು ಮತ್ತು ಇದು ಈ ವರ್ಷದ ಮೊದಲು ಆದಂಥಾದ್ದು, ಇದರ ಬಗ್ಗೆ ನಾನು ಹೇಳುತ್ತಿದ್ದೇನೆ. ಕ್ರೈಮ್ ವಿಷಯದಲ್ಲಿ ಕಂಪ್ಯಾರಿಶನ್ ಎನ್ನುವುದು ಬರಬಾರದು. ಅಧಿಕಾರಕ್ಕೆ ಬಂದಿರುವ ಎಲ್ಲಾ ಸರ್ಕಾರಗಳು ತಪ್ಪು ಮಾಡಿರುತ್ತವೆ. ಕಾನೂನು ಮತ್ತು ಸುವ್ಯವಸ್ಥೆ ಕೆಟ್ಟು ಹೋಗಿರುತ್ತದೆ, ತಪ್ಪು ಆಗಿರುವುದನ್ನು ಸರಿಪಡಿಸಲೆಂದೇ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಿರುತ್ತದೆ. ಕಂಬಾಲಪಲ್ಲಿಯಂಥ ದುರ್ಘಟನೆ ನಡೆಯಬಾರದು. ಬಹುಶಃ ಇಂತಹ ಘಟನೆ ನಮ್ಮ ರಾಜ್ಯದಲ್ಲಿ ಯಾವತ್ತೂ ಆಗಿಲ್ಲ. ಇವೊತ್ತು ಕಾನೂನು ಮತ್ತು ಸುವ್ಯವಸ್ಥೆಯ ವಿಷಯದಲ್ಲಿ ಕಂಪ್ಯಾರಿಶನ್ ಕೊಡುವಾಗ ಕ್ರೈಮ್ ರೇಟ್ ದಿನೇ ದಿನೇ ಕಡಿಮೆಯಾಗುತ್ತಾ ಹೋಗಬೇಕು. ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ಬಳಿಕ ಕಾನೂನು ಮತ್ತು ಸುವ್ಯವಸ್ಥೆಯನ್ನು ಬಿಗಿಗೊಳಿಸಿ, ದಕ್ಷತೆಯಿಂದ ಕಾರ್ಯನಿರ್ವಹಿಸಿ ಕ್ರೈಮ್ ರೇಟನ್ನು ಕಡಿಮೆ ಮಾಡುತ್ತಾ ಹೋಗಬೇಕು. ಮತ್ತು ಇನ್ನೊಂದು ಬಹಳ ಮುಖ್ಯವಾಗಿ ಪ್ರಸ್ತಾಪವಾಗಿರುವುದೇನೆಂದರೆ, ಯಡವನಹಳ್ಳಿ, ಬುಕ್ಕನಕೇರಿ, ಕಂಪ್ಲಿ ಒಳಗೊಂಡಂತೆ ರಾಜ್ಯದ ಹಲವಾರು ಕಡೆಗಳಲ್ಲಿ ಪೋಲೀಸ್ ಎಕ್ಸೆಸ್ ಆಗುತ್ತಿದ್ದು, ಇವೊತ್ತಿನ ದಿವಸ ರಾಜಕೀಯ ಪಕ್ಷದ ಕಾರ್ಯಕರ್ತರ ಮೇಲೂ ಪೋಲೀಸ್ ಎಕ್ಸೆಸ್ ಆಗುತ್ತಿದೆ.

ಪ್ರತಿಪಕ್ಷದ ಕಾರ್ಯಕರ್ತರ ಮೇಲೆ ಒಂದಲ್ಲ ಒಂದು ರೀತಿಯಲ್ಲಿ ತೊಂದರೆಗಳು ಆಗುತ್ತಿದೆ. ಇದು ನಿಲ್ಲಬೇಕು, ಇದರ ಬಗ್ಗೆ ಹೆಚ್ಚಿನ ಗಮನವನ್ನು ಹರಿಸಬೇಕೆಂದು ಹೇಳಬಯಸುತ್ತೇನೆ. ಕೆಲವು ಆಯೋಗಗಳನ್ನು ಮಾಡಿದ್ದೀರಿ. ಅದರ ಬಗ್ಗೆ ಸ್ಪಷ್ಟೀಕರಣವನ್ನು ಕೇಳಬಯಸುತ್ತೇನೆ. ಟಾಸ್ಕಫೋರ್ಸ್ ಸಮಿತಿಗಳನ್ನು ಮಾಡಿದರು, ಕೆಲವು ಪರಿಣಿತರ ಅಭಿಪ್ರಾಯವನ್ನು ತೆಗೆದುಕೊಂಡರು ಅದರ ಬಗ್ಗೆ ಪ್ರಶ್ನೆ ಇಲ್ಲ. ಆ ರೀತಿ ಮಾಡುವುದು ಸ್ವಾಗತಾರ್ಹ. ಗಡಿ ಪ್ರದೇಶ ಅಭಿವೃದ್ಧಿ ಆಯೋಗವನ್ನು ಮಾಡಿದ್ದಾರೆ. ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಸ್ಥಾನವನ್ನು ಮಾಡಿಕೊಟ್ಟಿದ್ದಕ್ಕೆ ನಮ್ಮ ಅಭ್ಯಂತರವೇನಿಲ್ಲ. ಆದರೆ 1983 ರಿಂದ 1989ರವರೆಗೆ ಮಾನ್ಯ ಪಾಟೀಲಪುಟ್ಟಪ್ಪನವರು ಕನ್ನಡ ಕಾವಲು ಸಮಿತಿಯ ಅಧ್ಯಕ್ಷರಾಗಿದ್ದರು. ಅವರು ಬೇರೆ ಬೇರೆ ರಾಜ್ಯಗಳ ಜೊತೆಗೆ ಸುಮಾರು ಹತ್ತು ಸಾವಿರ ಪತ್ರಗಳ ಕರಸ್ಪಾಂಡೆನ್ಸ್ ಮಾಡಿದರು. ಅವರು ಸಾಕಷ್ಟು ವರದಿಗಳನ್ನು ಕೊಟ್ಟಿದ್ದಾರೆ. ಗಡಿ ಪ್ರದೇಶದ ಅಭಿವೃದ್ಧಿ ಹೇಗೆ ಆಗಬೇಕು ಎಂಬ ಬಗ್ಗೆ ಸರ್ಕಾರದ ಹತ್ತಿರ ಸಾಕಷ್ಟು ಮಾಹಿತಿ ಇದೆ. ಆದ್ದರಿಂದ ತಾವು ಅದರ ಬಗ್ಗೆ ಸಹ ಪರಿಶೀಲನೆ ಮಾಡಬಹುದು. ಮೊನ್ನೆ ಅಥಣಿ ತಾಲ್ಲೂಕಿನ 22 ಹಳ್ಳಿಗಳಲ್ಲಿ ಯಾವುದೇ ಸೌಲಭ್ಯಗಳು ಇಲ್ಲ. ನಾವುಗಳು ಮಹಾರಾಷ್ಟ್ರಕ್ಕೆ ಹೋಗುತ್ತೇವೆ ಎಂದು ಅಲ್ಲಿನ ಜನರು ಅಭಿಪ್ರಾಯ ವ್ಯಕ್ತಮಾಡಿರುವುದು ಪತ್ರಿಕೆಯಲ್ಲಿ ಬಂದಿತ್ತು. ಯಾವುದನ್ನು ಮಾಡಲು ಅವಶ್ಯಕತೆ ಇದೆಯೋ ಅದನ್ನು ಮೊದಲು ಮಾಡಿ, ಆದರೆ

ಯಾವುದು ಅನಾವಶ್ಯಕವಾಗಿದೆಯೊ ಅದನ್ನು ಮಾಡಲು ಹೋಗಬೇಡಿ. ಹೈಕೋರ್ಟ್ ಪೀಠದ ಬಗ್ಗೆ ಸಾಕಷ್ಟು ಸದಸ್ಯರು ಪ್ರಸ್ತಾಪ ಮಾಡಿದ್ದರು. ಅದರ ಬಗ್ಗೆ ಉತ್ತರ ಕೊಟ್ಟಿಲ್ಲ. ವಿಧಾನಪರಿಷತ್ತಿನಲ್ಲಿ ಮುಖ್ಯಮಂತ್ರಿಗಳು ಮುಖ್ಯ ನ್ಯಾಯಮೂರ್ತಿಗಳ ಹತ್ತಿರ ಎಲ್ಲಾ ಪಕ್ಷಗಳ ನಾಯಕರ ನಿಯೋಗವನ್ನು ತೆಗೆದುಕೊಂಡು ಹೋಗಿ ಇದರ ಬಗ್ಗೆ ಚರ್ಚೆ ಮಾಡುತ್ತೇನೆ ಎಂದು ಹೇಳಿದ್ದರು. ಆದರೆ ಆ ಕೆಲಸ ಇನ್ನೂ ಆಗಿಲ್ಲ. ಆದಷ್ಟು ಬೇಗ ಮುಖ್ಯ ನ್ಯಾಯಮೂರ್ತಿಗಳ ಜೊತೆ ಭೇಟಿ ಮಾಡಲು ಅವಾಶವನ್ನು ಪಡೆದು ಕ್ರಮ ತೆಗೆದುಕೊಳ್ಳಬೇಕೆಂದು ಅವರನ್ನು ವೈಯಕ್ತಿಕವಾಗಿ ಭೇಟಿಯಾಗಿದ್ದಾಗ ಕೇಳಿಕೊಂಡಿದ್ದೆ. ಮದ್ರಾಸ್ ಉಚ್ಚ ನ್ಯಾಯಾಲಯದವರು ಕನ್‌ಸೆಂಟ್ ಕೊಟ್ಟು ಮಧುರೈಯಲ್ಲಿ ಮೊನ್ನೆ ಹೈಕೋರ್ಟ್ ಪೀಠ ಪ್ರಾರಂಭವಾಯಿತು. ಆದರೆ ನಮ್ಮಲ್ಲಿ ಆಗುತ್ತಿಲ್ಲ. ಏಕೆಂದರೆ ನಮ್ಮಲ್ಲಿ ರಾಜಕೀಯ ಒತ್ತಡಗಳು ಕಡಿಮೆ ಇದೆ. ಆದ್ದರಿಂದ ಮುಖ್ಯಮಂತ್ರಿಗಳು ನಮ್ಮೆಲ್ಲರನ್ನು ಕರೆದುಕೊಂಡು ಹೋಗಿ ಒತ್ತಡವನ್ನು ಹೇರಿದರೆ ಬಹುಶಃ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಯಾಗಲು ನಾಂದಿಯಾಗುತ್ತದೆ. ಆ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಎರಡು ವಿಚಾರಗಳನ್ನು ನನ್ನ ಗಮನಕ್ಕೆ ತಂದಿದ್ದಾರೆ. ಅದರಲ್ಲಿ ಗಡಿ ವಿಚಾರದ ಬಗ್ಗೆ ಹೇಳುವುದಾದರೆ, ಗಡಿಪ್ರದೇಶದಲ್ಲಿರುವ ಕನ್ನಡ ನಾಡಿನ ಜನರ ಸಮಸ್ಯೆಗಳನ್ನು ಕ್ರೋಢೀಕರಿಸಬೇಕಾಗಿದೆ. ಆ ದಿಸೆಯಿಂದ ನಾವು ಗಡಿನಾಡು ಕನ್ನಡಿಗರ ಸಮಸ್ಯೆಯನ್ನು ಕಾಂಪ್ರಹೆನ್‌ಸೀವ್ ಆಗಿ ಅಧ್ಯಯನ ಮಾಡುವ ಸಲುವಾಗಿ ಮಾನ್ಯ ವಾಟಾಳ್ ನಾಗರಾಜ್‌ರವರು ನೇತೃತ್ವದಲ್ಲಿ ಆಯೋಗವನ್ನು ಮಾಡಿದ್ದೇವೆ. ಇದನ್ನು ಹಿಂದೆಯೇ ಮಾಡಬೇಕಾಗಿತ್ತು. ಮಾನ್ಯ ಪಾಟೀಲಪುಟ್ಟಪ್ಪನವರು ಹತ್ತು ಸಾವಿರ ಪತ್ರಗಳನ್ನು ಬರೆದಿದ್ದ ಮೇಲೆ ಅವರನ್ನೇ ಈ ಗಡಿ ವಿಚಾರದ ಆಯೋಗದ ಅಧ್ಯಕ್ಷರನ್ನಾಗಿ ಮಾಡಬಹುದಿತ್ತು. ಅವರು ಕನ್ನಡ ಕಾವಲು ಸಮಿತಿಯಲ್ಲಿ ಇದ್ದರು, ಅದೇ ಈಗ ಪ್ರಾಧಿಕಾರವೆಂದು ಪುನರ್ನಾಮಕರಣವಾಗಿದೆ. ಅದಕ್ಕೆ ನಾವು ಈಗಾಗಲೇ ಅಧ್ಯಕ್ಷರನ್ನು ನೇಮಕ ಮಾಡಿದ್ದೇವೆ. ಅವರು ಕೆಲಸ ಮಾಡುತ್ತಿದ್ದಾರೆ. ಅವರು ಮಾಡಿರುವಂಥ ಅಮೂಲ್ಯವಾದ ಶಿಫಾರಸ್ಸನ್ನು ನಾವು ತಾತ್ವಿಕವಾಗಿ ಒಪ್ಪಿದ್ದೇವೆ. ಗಡಿ ಭಾಗದಲ್ಲಿರುವ ಕನ್ನಡಿಗರ ಸಮಸ್ಯೆಗಳು ಏನು ಎಂಬುದು ಮೊದಲನೆಯದು. ಅನಂತರ ಆ ಸಮಸ್ಯೆಗಳಿಗೆ ಹೇಗೆ ಸ್ಪಂದಿಸಬೇಕು ಎಂಬುದರ ಬಗ್ಗೆ ಅನಂತರ ನಾವು ನೀವು ಒಟ್ಟುಗೂಡಿ ಯೋಚನೆ ಮಾಡಬೇಕಾಗಿದೆ. ಎರಡನೆಯದಾಗಿ ಹೈಕೋರ್ಟ್ ಪೀಠದ ಬಗ್ಗೆ ಅವರು ಪ್ರಸ್ತಾಪ ಮಾಡಿದ್ದಾರೆ. ಕಳೆದ ಹತ್ತಾರು ದಿವಸಗಳಿಂದ ಹೈಕೋರ್ಟ್‌ನ ಮುಖ್ಯ ನ್ಯಾಯಾಧೀಶರ ಜೊತೆ ಮಾತನಾಡಲು ಪ್ರಯತ್ನ ಮಾಡುತ್ತಿದ್ದೇನೆ. ಆದರೆ ಅನಿವಾರ್ಯವಾಗಿ ಅವರು ಹೊರದೇಶಕ್ಕೆ ಹೋಗಿದ್ದರು. ಅಲ್ಲಿಂದ ವಾಪಸ್ ಬಂದರು,

ವೆಕೇಷನ್ ಪ್ರಾರಂಭವಾಯಿತು, ಅವರು ಈಗ ಆಂಧ್ರಕ್ಕೆ ಹೋಗಿದ್ದಾರೆ. ಅಲ್ಲಿಂದ ಬಂದ ತಕ್ಷಣ ಮಾತನಾಡಲು ಅವರ ಹತ್ತಿರ ಈಗಾಗಲೇ ಅಪಾಯಿಂಟ್‌ಮೆಂಟ್‌ನ್ನು ಕೇಳಿದ್ದೇವೆ, ರಾಜಕೀಯ ಪಕ್ಷದ ಧುರೀಣರ ನಿಯೋಗದೊಂದಿಗೆ ತಮ್ಮ ಹತ್ತಿರ ಬರಬೇಕೆ,ದು ಇದ್ದೇವೆಂದು ಈಗಾಗಲೇ ಅವರಿಗೆ ಪೂರ್ವಸೂಚನೆಯನ್ನು ಕೊಟ್ಟಿದ್ದೇವೆ. ಅವರು ಬಂದ ತಕ್ಷಣ ಅವರು ಸಮಯ ಕೊಟ್ಟಾಗ ನಾವು ನೀವು ಹೋಗಿ ಅವರ್ನು ಭೇಟಿ ಮಾಡಬಹುದು. ಕಂಬಾಲಪಲ್ಲಿ ವಿಚಾರದ ಬಗ್ಗೆ ಇಲ್ಲಿ ದೊಡ್ಡ ಚರ್ಚೆಯಾಯಿತು. ಅದಕ್ಕೇನು ಉತ್ತರವನ್ನು ನಮ್ಮಿಂದ ನಿರೀಕ್ಷೆ ಮಾಡುತ್ತೀರಿ? ಯಡವನಹಳ್ಳಿ ವಿಚಾರದ ಬಗ್ಗೆ ದೊಡ್ಡ ಚರ್ಚೆಯಾಯಿತು, ನನ್ನಿಂದ ಏನು ಉತ್ತರವನ್ನು ಇದರ ಬಗ್ಗೆ ನಿರೀಕ್ಷೆ ಮಾಡುತ್ತೀರಿ? ಕಾನೂನು ಸುವ್ಯವಸ್ಥೆ ಬಹಳ ಹದಗೆಟ್ಟಿದೆ, ನೀವು ಬಂದಮೇಲೆ ಭಯೋತ್ಪನ್ನವಾದ ವಾತಾವರಣ ರಾಜ್ಯದಲ್ಲಿ ಸೃಷ್ಟಿಯಾಗಿದೆಯೆಂದು ಇಲ್ಲಿ ಭಾಷಣಗಳು ನಡೆಯಿತು, ಅದಕ್ಕೆ ಮಾತ್ರ ನಾನು ಸ್ಪಂದಿಸಿದೆನೇ ಹೊರತು ಅದರಲ್ಲಿ ವಿಶೇಷವಾದ ಮಹತ್ವವೇನಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಕನ್ನಡ ಮಾಧ್ಯಮದಲ್ಲಿ ಓದುವ ಮಕ್ಕಳಿಗೆ ತಾಂತ್ರಿಕ ಶಿಕ್ಷಣದಲ್ಲಿ ಆದ್ಯತೆಯನ್ನು ಕೊಟ್ಟು ಪ್ರವೇಶಕ್ಕೆ ಅವಕಾಶವನ್ನು ಕಲ್ಪಿಸುವ ಬಗ್ಗೆ ಮುಖ್ಯಮಂತ್ರಿಗಳೇನು ಘೋಷಣೆ ಮಾಡಿದ್ದಾರೆ ಅದನ್ನು ನಾವು ಸ್ವಾಗತ ಮಾಡುತ್ತೇವೆ. ಬಹುಶಃ ಸದನದ ಎಲ್ಲಾ ಸದಸ್ಯರು ಇದನ್ನು ಸ್ವಾಗತ ಮಾಡುತ್ತಾರೆ. ಇದನ್ನು ಕಾರ್ಯರೂಪಕ್ಕೆ ತರಬೇಕು. ಮಾನ್ಯ ಮುಖ್ಯಮಂತ್ರಿಗಳು ವ್ಯಂಗ್ಯೋಕ್ತಿಯಾಗಿ ಹಿಂದಿನ ಸರ್ಕಾರದ ಬಗ್ಗೆ ಸಾಕಷ್ಟು ಚುಚ್ಚಿ ಚುಚ್ಚಿ ಮಾತನಾಡಿದ್ದಾರೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅದನ್ನೆಲ್ಲ ಸ್ವೀಕಾರ ಮಾಡಲೇಬೇಕು, ಆ ದೃಷ್ಟಿಯಿಂದ ನಾವು ಇಲ್ಲಿ ಕುಳಿತಿದ್ದೇವೆ. ಆದರೆ ಗಾಜಿನ ಮನೆಯಲ್ಲಿ ಇರುವವರು ಕಲ್ಲನ್ನು ಹೊಡೆಯಲು ಹೋಗಬಾರದು ಎಂದು ಗಾದೆ ಇದೆ. ಆದ್ದರಿಂದ ಮುಖ್ಯ ಮಂತ್ರಿಗಳ ಇಂದಿನ ಭಾಷಣವೇನಿದೆ, ಇದನ್ನು ಇನ್ನು ಒಂದು ಇಲ್ಲವೆ ಎರಡು ವರ್ಷಗಳ ನಂತರ ಏನು ಉತ್ತರ ಬರುತ್ತದೆ ಎಂಬುದನ್ನು ನಾವು ನೋಡುತ್ತೇವೆ. ರಾಜಕೀಯ ಪಕ್ಷಗಳ ಹೊಂದಾಣಿಕೆಯ ಬಗ್ಗೆ ಬಹುಶಃ ಮುಖ್ಯಮಂತ್ರಿಗಳಿಗೆ ಏನಾದರೂ ಭಯವಿದೆಯೇ ಎಂದು ನನಗೆ ಅನ್ನಿಸುತ್ತಿಲ್ಲ. ತಮ್ಮ ಭಾಷಣದ ಉದ್ದಕ್ಕೂ ಸಹ ಕಾನೂನು ಸುವ್ಯವಸ್ಥೆಯಿಂದ ಹಿಡಿದು ಕನ್ನಡದ ಮಾಧ್ಯಮದ ಮಕ್ಕಳವರೆಗೆ ಮಾತನಾಡುವ ಎಲ್ಲ ಸಂದರ್ಭದಲ್ಲಿ ಸಹ, ಪುರೋಹಿತರ ಬಗ್ಗೆ ಹೇಳಿದರು, ಪೂಜಾರಿಗಳ ಬಗ್ಗೆ ಹೇಳಿದರು, ಜನತಾದಳ(ಎಸ್) ಮತ್ತು ಜನತಾದಳ(ಯು) ಯಾವಾಗ ಒಂದಾಗುತ್ತದೆ ಪೂಜಾರಿಗಳು ಯಾವಾಗ ಒಂದಾಗುತ್ತಾರೆ ಎನ್ನತಕ್ಕ ಮಾತನ್ನು ಹೇಳಿದರು. ಮತ್ತು ನಮ್ಮ ನಾಲಿಗೆಯ ಬಗ್ಗೆ ಸಹ ಮುಖ್ಯ ಮಂತ್ರಿಗಳು ಪ್ರಶ್ನೆ ಮಾಡಿದ್ದಾರೆ. ರಾಜಕೀಯ ಪಕ್ಷಗಳು ನಮ್ಮ ರಾಷ್ಟ್ರದಲ್ಲಿ ನಿಂತ ನೀರಾಗಿ ಇಲ್ಲ. ರಾಜಕೀಯ ಪಕ್ಷಗಳ ಒಡಕನ್ನು ನಾವು ಹಿಂದಿನಿಂದ ನೋಡಿಕೊಂಡು ಬಂದಿದ್ದೇವೆ. ಕಾಂಗ್ರೆಸ್ ಪಕ್ಷ ಇಬ್ಭಾಗವಾಯಿತು. ಆ ಸಂದರ್ಭದಲ್ಲಿ

ತಾವು ಯಾವ ಭಾಗದಲ್ಲಿ ಇದ್ದಿರಿ ಎಂಬ ಪ್ರಶ್ನೆಯನ್ನು ನಾವು ಮಾಡಬೇಕಾಗುತ್ತದೆ.

ಶ್ರೀ ಸಿ.ಬೈರೇಗೌಡ: ಕಾಂಗ್ರೆಸ್ ಇಬ್ಭಾಗವಾದಾಗ ಇವರು ರೆಡ್ಡಿ ಕಾಂಗ್ರೆಸ್‌ನಲ್ಲಿ ಇದ್ದರು. ಅದು ದಾಖಲೆಯಲ್ಲಿ ಇರತಕ್ಕದ್ದು. ಇವೆಲ್ಲ ನಡೆದುಕೊಂಡು ಬಂದಿರತಕ್ಕದ್ದು. ಇದರಲ್ಲಿ ವಿಶೇಷ ಏನು ಇಲ್ಲ. ಅವರು ರೆಡ್ಡಿ ಕಾಂಗ್ರೆಸ್‌ನಲ್ಲಿ ಇದ್ದು ಅಲ್ಲಿ ಏನು ನಡೆಸಿದರು ಎಂಬುದೆಲ್ಲ ಈಗ ಇತಿಹಾಸದಲ್ಲಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಇವೆಲ್ಲ ರಾಜಕೀಯ ಪಕ್ಷಗಳಲ್ಲಿ ಆಗತಕ್ಕದ್ದು. ಪಶ್ಚಿಮ ಬಂಗಾಳದಲ್ಲಿ ಏನು ನಡೆಯುತ್ತಿದೆ. ನಮ್ಮ ಕಣ್ಣ ಮುಂದಿರುವ ಉದಾಹರಣೆ ಇದು. ಮಹಾಮೈತ್ರಿಯ ಬಗ್ಗೆ ಯಾರ್ಯಾರು ಹೊಂದಾಣಿಕೆ ಮಾಡಿಕೊಳ್ಳಬೇಕೆಂದಿದ್ದಾರೆ, ದೇಶದಲ್ಲಿ ಏನೇನು ಆಗುತ್ತಿದೆ, ಆದರಿಂದ ರಾಜ್ಯ ಸರ್ಕಾರದ ಮೇಲೆ ಆಗುವ ಪರಿಣಾಮವೇನು, ಇದರ ಬಗ್ಗೆ ಸಮಯ ಬಂದಾಗ ವಿಶ್ಲೇಷಣೆ ಮಾಡುತ್ತೇವೆ. ಚುನಾವಣಾ ಪ್ರಣಾಳಿಕೆಯಲ್ಲಿ ಐದು ವರ್ಷದಲ್ಲಿ ಪಶ್ಚಿಮಕ್ಕೆ ಹರಿಯುವ ನದಿಗಳನ್ನು ಪೂರ್ವಕ್ಕೆ ತಿರುಗಿಸುವ ಮಾತನ್ನು ಹೇಳಿದ್ದೀರಿ. ಅದನ್ನು ಪ್ರಾರಂಭ ಮಾಡಿದ್ದೀರಿ ಎಂಬ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದೀರಾ ಎಂದು ಕೇಳಿದ್ದೇವೆಯೇ ಹೊರತು ನೀವು ಮಾಡಿರುವುದು ತಪ್ಪು ಎಂದು ನಾವು ಹೇಳಲು ಹೋಗಿಲ್ಲ. ಆಲಮಟ್ಟಿ ವಿಚಾರದಲ್ಲಿ ಸರ್ವ ಪಕ್ಷಗಳ ಸಭೆಯನ್ನು ಕರೆಯಲು ಮಾನ್ಯ ಮುಖ್ಯಮಂತ್ರಿಯವರು ಒಪ್ಪಿಕೊಂಡಿದ್ದಾರೆ. ಇದು ಒಳ್ಳೆಯ ವಿಚಾರ. ಪೋಲೀಸರ ಹಸ್ತಕ್ಷೇಪದ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಮಾತನಾಡಿದರು. ನಾನು ಮತ್ತೆ ತಮ್ಮ ಚುನಾವಣಾ ಪ್ರಣಾಳಿಕೆಯ ಬಗ್ಗೆ ಮಾತನಾಡಬೇಕಾಗುತ್ತದೆ. ಐದು ವರ್ಷದ ಜನತಾದಳದ ಆಳ್ವಿಕೆ ಇಂಡಿಯಾ ದೇಶದಲ್ಲಿ ಬಿಹಾರ್ ಬಿಟ್ಟರೆ ಕರ್ನಾಟಕದಲ್ಲೇ ಎಂದು ಹೇಳಿದ್ದೀರಿ. ಆ ಪರಿಸ್ಥಿತಿಗೆ ಹೋಗಿರಲಿಲ್ಲ. ತಾವು ಮುಖ್ಯಮಂತ್ರಿಗಳಾದ ಎಂಟು ದಿವಸಗಳಲ್ಲಿ ಹೋಗಿ ನಮ್ಮ ಪೋಲೀಸ್ ಇಲಾಖೆಯ ಬೆನ್ನು ತಟ್ಟಿದಿರಾ ಹುಬ್ಬಳ್ಳಿ ಈದ್ಗಾ ಮೈದಾನದಲ್ಲಿ ಯಾವ ಸಮಸ್ಯೆ ಇತ್ತು, ಆ ಸಮಸ್ಯೆಯನ್ನು ನಾವು ಬಗೆಹರಿಸಲಿಲ್ಲವೆ? ಐದು ವರ್ಷಗಳಲ್ಲಿ ರೈಡಿಂಗ್ ಎಷ್ಟು ಆಗಿದೆ, ಕಮ್ಯೂನಲ್ ಇನ್ಸಿಡೆಂಟ್ ಎಷ್ಟು ಆಗಿದೆ ಎಂಬುದನ್ನು ಹೇಳಿ, ಫೈನಾನ್ಷಿಯಲ್ ಮ್ಯಾನೇಜ್‌ಮೆಂಟ್ ಬಗ್ಗೆ ಹೇಳಿದಿರಿ? ಶ್ವೇತಪತ್ರವನ್ನು ಪ್ರಕಟಣೆ ಮಾಡುವ ಸಂದರ್ಭದಲ್ಲಿ, ಕೆ.ಎಸ್.ಆರ್.ಟಿ.ಸಿ. ಬಗ್ಗೆ ಮಾತನಾಡುತ್ತ ಏನು ಹೇಳಿದಿರಿ, you have paid rich compliments to the previous government. ಕಳೆದ ಐದು ವರ್ಷಗಳಲ್ಲಿ ನಮ್ಮ ರಾಜ್ಯದಲ್ಲಿ ಫೈನಾನ್ಷಿಯಲ್ ಮ್ಯಾನೇಜ್‌ಮೆಂಟ್ ಚೆನ್ನಾಗಿ ಆಗಿದೆಯೆಂದು ಆರ್.ಬಿ.ಐ.ನವರು, ಭಾರತ ಸರ್ಕಾರದವರು ಹೇಳಿದ್ದಾರೆಂದು ಹೇಳಿದ್ದೀರಿ. ಆದ್ದರಿಂದ ತಾವೇನು ಚುಚ್ಚು ಮಾತುಗಳನ್ನಾಡಿದ್ದೀರಿ ಅದನ್ನು ಮಾತನಾಡಲೇಬೇಕು, ಅದನ್ನು ನಾನು ಬೇರೆ ಅರ್ಥದಲ್ಲಿ ತೆಗೆದುಕೊಳ್ಳಲು ಹೋಗುವುದಿಲ್ಲ. ಆದರೆ ನಮಗಿಂತ ಹೆಚ್ಚಾಗಿ ಪ್ರಮುಖವಾದ ಪತ್ರಿಕೆಗಳಲ್ಲಿನ ಸಂಪಾದಕೀಯದ ಅಡಿಯಲ್ಲಿ ಬಂದಿರುವ ವಿಚಾರಗಳು

ವಾಸ್ತುವಿಗೆ ಖರ್ಚಾಗಿದ್ದು ಎಂದು ಬಂದಿದ್ದರ ಆಧಾರದ ಮೇಲೆ ನಾವು ಮಾತನಾಡಿದ್ದೇವೆಯೇ ಹೊರತು ಬೇರೆ ಯಾವ ದೃಷ್ಟಿಯಿಂದಲೂ ಅಲ್ಲ ಎಂಬುದನ್ನು ತಮ್ಮ ಗಮನದಲ್ಲಿ ಇಟ್ಟುಕೊಳ್ಳಬೇಕು.

1-40 ಪಿ.ಎಂ

ವಾಸ್ತುವಿಗಾಗಿ 2 ಕೋಟಿ ರೂಪಾಯಿಗಳು ಸಹಾ ಖರ್ಚಾಗಿದೆ ಎನ್ನುವುದನ್ನೂ ಸಹಿತ ಹೇಳಿದ್ದಾರೆ. ಇದು ಎಷ್ಟು ಸುಳ್ಳೋ, ಎಷ್ಟು ನಿಜವೋ ನನಗೆ ಗೊತ್ತಿಲ್ಲ. ಅದೇನೇ ಇರಲಿ. ನಾನು ಮಾನತಾಡತಕ್ಕ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದೆರಡು ಮನವಿಗಳನ್ನು ಮಾಡಿಕೊಂಡಿದ್ದೆ. ಮೊದಲನೆಯದಾಗಿ, ಮಾರ್ಚ್ 31ನೇ ತಾರೀಖಿನೊಳಗಾಗಿ ಒಂದು ಕ್ಷೇತ್ರಕ್ಕೆ ನಾವು ಒಂದು ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಸರ್ಕಾರ ಹೇಳಿತ್ತು. ಇಎಎಸ್‌ನಿಂದ 30 ಲಕ್ಷ ರೂಪಾಯಿಗಳು ಸ್ಟಾಂಪ್ ಡ್ಯೂಟಿಯಿಂದ 30 ಲಕ್ಷ ರೂಪಾಯಿಗಳು ಉಳಿದ ಮೊತ್ತವನ್ನು ಸರ್ಕಾರವೇ ಬಿಡುಗಡೆ ಮಾಡುವುದಾಗಿ ತಿಳಿಸಲಾಗಿತ್ತು. ಬಹುತೇಕ ಎಲ್ಲ ತಾಲ್ಲೂಕುಗಳಲ್ಲಿ ಆ ಕೆಲಸ ಪ್ರಾರಂಭ ಆಗಿಲ್ಲ ಎಂದು ನಾನು ಹೇಳಬಯಸುತ್ತೇನೆ. ದಯಮಾಡಿ ಆ ಕೆಲಸವನ್ನು ಪ್ರಾರಂಭ ಮಾಡತಕ್ಕಂಥ ಭರವಸೆಯನ್ನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೊಡಬೇಕೆಂದು ಕೋರುತ್ತೇನೆ. ಮಾರ್ಚ್ 31 ಈಗಾಗಲೇ ಮುಗಿದಿದೆ, ನಾವು ಈಗ ಏಪ್ರಿಲ್ 25ನೇ ತಾರೀಖಿನಲ್ಲಿದ್ದೇವೆ. ಎರಡನೆಯದಾಗಿ, ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಸಿಸ್ಟಮ್‌ನಡಿ ಕೊಡತಕ್ಕ ಆಹಾರ ಧಾನ್ಯಗಳು ಮತ್ತು ಸೀಮೆಎಣ್ಣೆ ಬೆಲೆ ಜಾಸ್ತಿಯಾಗಿದೆ, ಕೇರಳ ರಾಜ್ಯ ಸರ್ಕಾರದವರು ತಮ್ಮ ಮಾನ್ಯ ಮುಖ್ಯಮಂತ್ರಿಗಳ ನಾಯಕತ್ವದಲ್ಲಿ ಇದರ ಬಗ್ಗೆ ವಿರೋಧಿಸಿ ಕೇಂದ್ರಕ್ಕೆ ಒಂದು ನಿಯೋಗ ಒಯ್ದಿದ್ದಾರೆ, ನೀವೂ ಕೂಡ ಅದೇ ರೀತಿಯಲ್ಲಿ ಏಕೆ ನಿಯೋಗವೊಂದನ್ನು ದೆಹಲಿಗೆ ಈ ದಿಸೆಯಲ್ಲಿ ಒಯ್ಯಬಾರದು ಎಂಬ ಪ್ರಶ್ನೆಯನ್ನು ನಾನು ಭಾಷಣ ಮಾಡುತ್ತಾ ಹೇಳಿದ್ದೆ. ಕಾಂಗ್ರೆಸ್ ಪಕ್ಷದವರು ಸದನದ ಹೊರಗತೆ ಬೆಲೆಏರಿಕೆ ವಿರುದ್ಧ ಪ್ರತಿಭಟನೆ ಮಾಡಿದ್ದಾರೆ. ಕೇರಳದಲ್ಲಿ ಮಾನ್ಯ ನಾಯನಾರ್‌ರವರು ನಿಯೋಗವೊಂದನ್ನು ದೆಹಲಿಗೆ ಒಯ್ದಿದ್ದಾರೆ. ಅದೇ ರೀತಿಯಲ್ಲಿ ನೀವೂ ಏಕೆ ಮಾಡಬಾರದು? ಇವತ್ತು ಕೂಡ ಎನ್.ಡಿ.ಎ. ಸರ್ಕಾರದ ಮುಂದೆ ಅದರ ಬಗ್ಗೆ ಚರ್ಚೆ ಇದೆ. ಆ ಸರ್ಕಾರದ ಮೇಲೆ ನಾವೂ ಕೂಡ ಒತ್ತಡ ತರೋಣ. ಅದನ್ನು ಮಾಡಲಿಕ್ಕೆ ನಮಗೆ ಸಾಧ್ಯವಿಲ್ಲವೇ? ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರಿಸಬೇಕು. ಮೂರನೆಯದಾಗಿ, ಬಹಳ ಮುಖ್ಯವಾದಂತಹ ವಿಚಾರವಾದ ಗುಲ್ಬರ್ಗಾದಲ್ಲಿರತಕ್ಕಂಥ ಮೂರ್ತೆದಾರರ ಬಗ್ಗೆ ನಾನು ಮಾತನಾಡಿದ್ದೆ. ಮೂರ್ತೆದಾರರು ಬಹಳ ಕಷ್ಟದಲ್ಲಿ ಇರತಕ್ಕ ಜನರಾಗಿದ್ದಾರೆ. ಸುಮಾರು 7 ಲಕ್ಷ ಕುಟುಂಬಗಳು ಆಗ ಹೆಂಡ ನಿಲ್ಲಿಸಿದಂತಹ ಸಂದರ್ಭದಲ್ಲಿ ಅವರು ಆಲ್ಟರ್‌ನೇಟೀವ್ ಜಾಬ್‌ಗೆ ಹೋಗುವುದಕ್ಕೆ ಅವರಿಗೆ ಸಾಧ್ಯವಾಗಿಲ್ಲ. ಕೋ-ಅಪರೇಟಿವ್ ಸೊಸೈಟಿಗಳ ಮೂಲಕ ಸೇಂದಿಯನ್ನು ಹಿಂದೆ ಮಾರಾಟ ಮಾಡುವ ಪದ್ಧತಿ ಇತ್ತು. ಈಗ ಅದನ್ನು

ತಪ್ಪಿಸಿ ಸರ್ಕಾರ ಸೇಂದಿಯನ್ನು ಮಾರಾಟ ಮಾಡುವ ಹಕ್ಕನ್ನು ಹರಾಜಿನ ಮೂಲಕ ವಿಲೇವಾರಿ ಮಾಡುವ ಹಿಂದಿನ ಪದ್ಧತಿಯನ್ನೇ ಜಾರಿಗೆ ತರಲು ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿದೆ. ಇದರಿಂದಾಗಿ ಇವತ್ತು ಮೂರ್ತೆದಾರರು ಬೀದಿ ಪಾಲಾಗಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರದ ಬಗ್ಗೆ ಕೂಡ ಉತ್ತರಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೇ, ಜನತಾ ದಳ(ಯು) ಗುಂಪಿನ ಶಾಸಕಾಂಗ ನಾಯಕರಾದಂತಹ ಮಾನ್ಯ ಸಿಂಧ್ಯಾರವರು 2-3 ಗಂಭೀರವಾದಂತಹ ವಿಚಾರಗಳ ಬಗ್ಗೆ ನನ್ನ ಗಮನವನ್ನು ಸೆಳೆದಿದ್ದಾರೆ. ಮೊದಲನೆಯದಾಗಿ, ರಸ್ತೆಗಳ ದುರಸ್ತಿ ಬಗ್ಗೆ ಒಂದು ಕೋಟಿ ರೂಪಾಯಿಗಳನ್ನು ಏನು ಖರ್ಚು ಮಾಡುತ್ತೇನೆ ಎಂದು ಹೇಳಿದ್ದೆ, ಅದರಲ್ಲಿ ಈಗಾಗಲೇ 45 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ, ಉಳಿದದ್ದನ್ನು ಬಿಡುಗಡೆ ಮಾಡುವುದಕ್ಕೆ ನಾವು ಒಪ್ಪಿದ್ದೇವೆ ಎಂದು ತಿಳಿಸಬಯಸುತ್ತೇನೆ. ಆದರೆ ಇವುಗಳೆಲ್ಲವನ್ನೂ ಕೂಡ ನಾವು ಟೆಂಡರ್ ಕರೆಯುವುದರ ಮೂಲಕ ಕೆಲಸ ಮಾಡಿ ಎಂದು ಹೇಳಿದ್ದೇವೆ. ಅದರಿಂದಾಗಿ ನಿಧಾನವಾಗುತ್ತಿದೆ. ನಾವು ಏನು ಮಾತನ್ನು ಹೇಳಿದ್ದೇವೆ, ಆ ಮಾತನ್ನು ನಾವು ಉಳಿಸಿಕೊಳ್ಳುತ್ತೇವೆ ಎನ್ನತಕ್ಕ ಭರವಸೆಯನ್ನು ನಾನು ಈ ಸದನಕ್ಕೆ ನೀಡಬಯಸುತ್ತೇನೆ. ಇನ್ನು ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಸಿಸ್ಟಮ್ ಬಗ್ಗೆ ಈಗಾಗಲೇ ನಮ್ಮ ಸರ್ಕಾರದ ನಿಲುವನ್ನು ನಾನು ಸ್ಪಷ್ಟಪಡಿಸಿದ್ದೇನೆ. ಸರ್ವಪಕ್ಷಗಳ ನಿಯೋಗವೊಂದನ್ನು ದೆಹಲಿಗೆ ಕರೆದುಕೊಂಡು ಹೋಗುವುದರ ಮೂಲಕ ಈ ಸಮಸ್ಯೆಗೆ ಪರಿಹಾರ ಸಿಗುತ್ತದೆ ಎಂಬುದರಲ್ಲಿ ನನಗೆ ವಿಶ್ವಾಸವಿಲ್ಲ. ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರೋಣ. ಬೆಲೆಗಳನ್ನು ಇಳಿಸುವಂತೆ ಅವರನ್ನು ಆಗ್ರಹಿಸೋಣ. ಈ ಬಗ್ಗೆ ಈಗಾಗಲೇ ನಾವು ಕೇಂದ್ರಕ್ಕೆ ಕಾಗದವನ್ನು ಬರೆಯುವುದರ ಮೂಲಕ ಒತ್ತಾಯ ಮಾಡಿದ್ದೇವೆ. ಪ್ರತಿಯೊಂದು ರಾಜಕೀಯ ಪಕ್ಷವೂ ಕೂಡ ಈ ದಿಸೆಯಲ್ಲಿ ತನ್ನದೇ ಆದಂತಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತದೆ. ಇನ್ನು ಗುಲ್ಬರ್ಗಾದ ಮೂರ್ತೆದಾರರ ವಿಚಾರದ ಬಗ್ಗೆ ಮಾನ್ಯ ಸಿಂಧ್ಯಾರವರು ಏನು ಹೇಳಿದ್ದಾರೆ, ಅದರ ಬಗ್ಗೆ ನನ್ನ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳು ಚರ್ಚೆಗೆ ಬಂದಾಗ ಸರ್ಕಾರದ ಅಧಿಕೃತ ನಿಲುವೇನು ಎಂಬುದನ್ನು ಸದನಕ್ಕೆ ತಿಳಿಸುತ್ತೇನೆ ನನ್ನ ಇಲಾಖೆಗೆ ಸಂಬಂಧಿಸಿದಂತೆ 2-3ನೇ ತಾರೀಖುಗಳಂದು ಬೇಡಿಕೆಗಳು ಚರ್ಚೆಗೆ ಬರುತ್ತಿವೆ. ಆಗ ಅದರ ಬಗ್ಗೆ ಹೇಳುತ್ತೇನೆ.

ಶ್ರೀ ಬಿ.ಬಿ.ಶಿವಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಟೆಂಡರ್ ಮೂಲಕ ಕೆಲಸ ತೆಗೆದುಕೊಳ್ಳುತ್ತೇವೆ ಎಂದು ಈಗ ಹೇಳಿದರು. ನಮ್ಮಲ್ಲಿ ಈಗಾಗಲೇ ಟೆಂಡರ್ ಕರೆಯುವ ಪ್ರಕ್ರಿಯೆ ಪ್ರಾರಂಭವಾಗಿದೆ. 5 ಲಕ್ಷ ರೂಪಾಯಿಗಳ ಕೆಲಸಕ್ಕೆ ಅಲ್ಲಿ 34 ಟೆಂಡರ್‌ಗಳು ಬಂದಿವೆ. ಈಗ ಟೆಂಡರ್ ಹಾಕುವವರದ್ದೇ ಒಂದು ರೀತಿಯ ಲಾಬಿ ಪ್ರಾರಂಭವಾಗಿದೆ. ಅದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಅದನ್ನು ಸರ್ಕಾರ ಯಾವ ರೀತಿ ನಿವಾರಣೆ ಮಾಡುತ್ತದೆ? ಇದರ ಬಗ್ಗೆ ಮಾನ್ಯ

ಮುಖ್ಯಮಂತ್ರಿಗಳು ಸ್ವಲ್ಪ ಗಮನಹರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರತಿಯೊಬ್ಬರಿಗೂ ಒಂದೊಂದು ಸ್ಪಷ್ಟೀಕರಣ ಕೇಳಲು ಮಾತ್ರ ನಾನು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು): ಮಾನ್ಯ ಅಧ್ಯಕ್ಷರೇ, ನಾನು ಪ್ರಸ್ತಾಪ ಮಾಡಿದಂತಹ 2-3 ಪ್ರಮುಖ ವಿಚಾರಗಳಿಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಲಿಲ್ಲ ಎಂಬುದು ನನ್ನ ಅನಿಸಿಕೆಯಾಗಿದೆ. ನಾನು ಅತ್ಯಂತ ತೀಕ್ಷ್ಣವಾಗಿ ಸರ್ಕಾರದ ಮೇಲೆ ಒಂದು ಆರೋಪವನ್ನು ಮಾಡಿದ್ದೆ. ಸರ್ಕಾರಿ ಕಛೇರಿಗಳನ್ನು ಆಡಳಿತ ಪಕ್ಷದ ತಾಳಕ್ಕೆ ತಕ್ಕಂತೆ ಒಂದು ರಾಜಕೀಕರಣ ಮಾಡುವಂತಹ ವ್ಯವಸ್ಥೆ ನಡೆಯುತ್ತಿದೆ ಎಂದು ಹೇಳುವಂತಹ ದೃಷ್ಟಿಯಲ್ಲಿ ನಾನು ನೇರವಾಗಿ, ಈ ಒಂದು ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದನಂತರ ಆದಂತಹ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ಬಹುಶಃ ನಾನು ಅದರಲ್ಲಿ ಪೂರ್ತಿ ವಿಚಾರವನ್ನು ಹೇಳಿದ್ದೇನೆ. ಸನ್ಮಾನ್ಯ ಕೆ.ಗೋವಿಂದರಾಜ್ ಇವರನ್ನು ನೇಮಕಾತಿ ಮಾಡಿದಂತಹ ವಿಚಾರವನ್ನು ನಾನು ಪ್ರಸ್ತಾಪ ಮಾಡಿದ್ದೆ. ನಮ್ಮ ಆಡಳಿತ ಪಾರದರ್ಶಕವಾಗಿರುತ್ತದೆ, ನಾವು ಯಾವುದೇ ಸರ್ಕಾರಿ ಕಛೇರಿಗಳನ್ನು ರಾಜಕೀಕರಣ ಮಾಡುವುದಿಲ್ಲ, ನಿಷ್ಪಕ್ಷಪಾತವಾದಂತಹ ಆಡಳಿತವನ್ನು ಸರ್ಕಾರಿ ಕಛೇರಿಗಳಿಂದ ನಾವು ಕೊಡುತ್ತೇವೆ ಎಂಬ ಮಾತನ್ನು ಸರ್ಕಾರದವರು ಹೇಳಿದ್ದರು. ಅದರ ನಂತರ ನಡೆದಂತಹ ಘಟನೆ ಇದಾಗಿದೆ. ಆ ಬಗ್ಗೆ ನನ್ನಲ್ಲಿ ಎಲ್ಲಾ ದಾಖಲೆಗಳಿವೆ. ಆ ಅಧಿಕಾರಿ ಅವರ ಹುದ್ದೆಗೆ ರಾಜೀನಾಮೆ ಕೊಟ್ಟ ಮೇಲೆ, ಅಲ್ಲಿಯ ಲಾ ಆಫೀಸರ್ ಕೊಟ್ಟ ಅಭಿಪ್ರಾಯ ಸಹಾ ನನ್ನ ಬಳಿ ಇದೆ. ಲಾ ಆಫೀಸರ್ ಆ ಅಧಿಕಾರಿಯನ್ನು ಪುನರ್ ನೇಮಕ ಮಾಡಲಿಕ್ಕೆ ಸಾಧ್ಯವಿಲ್ಲ ಎಂಬ ಅಭಿಪ್ರಾಯ ನೀಡಿದ್ದರು. ಕರ್ನಾಟಕ ಸಿವಿಲ್ ಸರ್ವೀಸ್ ರೂಲ್ಸ್‌ನ ಕಾನೂನಿನ ಪ್ರಕಾರ ಆ ರೀತಿ ಮಾಡಲಿಕ್ಕೆ ಸಾಧ್ಯವಿಲ್ಲ ಎಂದೂ ಸಹಾ ಅವರು ಹೇಳಿದ್ದರು. ಇದೆಲ್ಲಾ ಗೊತ್ತಿದ್ದೂ ಕೂಡ ಅಲ್ಲಿಯ ಅಧಿಕಾರಿಗಳು ತಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಂಡು, ಸರ್ಕಾರಕ್ಕೆ ಈ ಬಗ್ಗೆ ನಿರ್ದಿಷ್ಟ ನಿಲುವನ್ನು ತಿಳಿಸುವಂತೆ ಕಳುಹಿಸಿಕೊಟ್ಟರು. ಸರ್ಕಾರ ನಂತರ ತನ್ನ ಹಂತದಲ್ಲಿ ಆ ಕೆಲಸಗಳನ್ನು ಮಾಡಿದೆ. ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿದಂತಹ ಒಬ್ಬ ವ್ಯಕ್ತಿ, ಪುನಃ ತಾನು ಮೊದಲಿದ್ದ ಹುದ್ದೆಗೆ ನೇಮಕವಾಗಿ ಅಲ್ಲಿ ಕಾಂಗ್ರೆಸ್ ರಾಜಕಾರಣ ಮಾಡಬೇಕು ಎಂಬುದು ಸರ್ಕಾರದ ನಿಲುವಾಗಿದೆ. ಇದಕ್ಕೆ ಸರ್ಕಾರ ಉತ್ತರ ಕೊಡಬೇಕು. ಇದು ಸಣ್ಣ ಸಂಗತಿಯಲ್ಲ, ರಾಜ್ಯದ ಜನತೆ ಇದನ್ನು ಗಮನಿಸುತ್ತಿದ್ದಾರೆ. ಮತ್ತೊಂದು ವಿಚಾರದ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದನೆ ಮಾಡುತ್ತೇನೆ. ನಾನು ಮಾತನಾಡುವಾಗ 5-6 ಜನ ಐ.ಎ.ಎಸ್. ಅಧಿಕಾರಿಗಳ ಹೆಸರುಗಳನ್ನು ಉಲ್ಲೇಖ ಮಾಡಿ ಆರೋಪಣೆ ಮಾಡಿದ್ದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರಿಸುತ್ತಾ ಆ ಐ.ಎ.ಎಸ್. ಅಧಿಕಾರಿಗಳ ಮೇಲೆ ಅಂತಹ ಆರೋಪಗಳೇನಾದರೂ ಇದ್ದರೆ ಅದನ್ನು ತನಿಖೆ ಮಾಡುವಂತಹ ಎಲ್ಲಾ ಕೆಲಸವನ್ನು

ಮಾಡುತ್ತೇವೆ ಎಂದು ಹೇಳಿದ್ದಾರೆ. ಇದು ನಿಜವಾಗಿಯೂ ಕೂಡ ಸ್ವಾಗತಾರ್ಹವಾದಂತಹ ವಿಚಾರವಾಗಿದೆ. ಮುಂದೆ ಆ ದಿಸೆಯಲ್ಲಿ ಏನು ಕ್ರಮ ಕೈಗೊಳ್ಳಲಾಯಿತು ಎಂಬ ಬಗ್ಗೆ ಸದನಕ್ಕೆ ತಿಳಿಸಬೇಕೆಂಬ ವಿನಂತಿಯನ್ನು ನಾನು ಈ ಸಂದರ್ಭದಲ್ಲಿ ಮಾಡಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಇಡೀ ಸದನಕ್ಕೆ ಸಂತಸ ತರುವಂತಹ ಮತ್ತೊಂದು ವಿಚಾರವನ್ನು ಇಲ್ಲಿ ಹೇಳಿದರು. ಆ ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳು ಆಗಾಗ ಹೇಳುತ್ತಿದ್ದರು. ಎಲ್ಲಾ ವಿಧಾನ ಸಭಾ ಸದಸ್ಯರಿಗೆ ಅವರವರ ಭಾಗದಲ್ಲಿ ಆದ್ಯತೆ ಆಧಾರದಲ್ಲಿ ಕೆಲವೊಂದು ಕೆಲಸಗಳನ್ನು ಮಾಡಿಸಲು ಅಗತ್ಯವಾದ ನಿಧಿಯನ್ನು ಸ್ಥಾಪನೆ ಮಾಡುತ್ತೇನೆ ಎಂಬ ಮಾತನ್ನು ಮುಖ್ಯಮಂತ್ರಿಗಳು ಹಿಂದೆ ಹೇಳಿದ್ದರು. ಅದರ ಬಗ್ಗೆ ಈಗ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಸ್ಪಷ್ಟವಾದ ನಿಲುವನ್ನು ಪ್ರಕಟಿಸಬೇಕು ಎಂದು ಕೋರುತ್ತೇನೆ. ಇನ್ನು ಮಾನ್ಯ ಮುಖ್ಯಮಂತ್ರಿಗಳು ಪ್ರಾರಂಭದಲ್ಲಿ ಮಾತನಾಡುತ್ತಾ ನಮ್ಮ ಮೇಲೆ ಅವರ ದಾಳಿಯನ್ನು ಆರಂಭಿಸಿದರು. ನೈತಿಕ ದಿವಾಳಿತನದಲ್ಲಿ ಭಾರತೀಯ ಜನತಾ ಪಾರ್ಟಿಯವರಿದ್ದಾರೆ ಎಂದು ನಮ್ಮ ಕಡೆಗೆ ಕೈ ತೋರಿಸಿ ಆಗಲೇ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ನೈತಿಕ ದಿವಾಳಿತನ ಎಂದರೆ ಏನು ಎಂದು ನನಗೆ ಅರ್ಥವಾಗಲಿಲ್ಲ. ನಾವು ಹಿಂದಿನ ಸರ್ಕಾರವನ್ನು ಈಗ ತರಾಟೆಗೆ ತೆಗೆದುಕೊಳ್ಳುವಂತಹ ಅವಶ್ಯಕತೆ ಇಲ್ಲ. ಅಧಿಕೃತ ವಿರೋಧ ಪಕ್ಷವಾಗಿ ನಾವು ಇವತ್ತು ಸ್ಥಾಪನೆಗೊಂಡಿರುವಾಗ ಕಳೆದ ಆರು ತಿಂಗಲ್ಲಿ ಈ ಸರ್ಕಾರ ನಡೆದಂತಹ ದಾರಿಯ ಬಗ್ಗೆ ಮಾತ್ರ ನಾವು ಇಲ್ಲಿ ಹೇಳಬೇಕೇ ಹೊರತು ಹಿಂದಿನ ಸರ್ಕಾರದ ಬಗ್ಗೆ ಹೇಳುವುದಲ್ಲ. ಅದರ ಬಗ್ಗೆ ನೀವೇ ಹೇಳಬೇಕು. ಕಳೆದ ಐದು ವರ್ಷಗಳ ಕಾಲ ಅವರು ಮಾಡಿದಂತಹ ಅಧಿಕಾರವನ್ನು ನಾವು ನೋಡಿದ್ದೇವೆ. ಜನ ಅದಕ್ಕೆ ತೀರ್ಮಾನ ಸಹಾ ಕೊಟ್ಟಿದ್ದಾರೆ. ಅದು ಮುಗಿದ ಅಧ್ಯಾಯ. ಆ ರೀತಿಯ ಒಂದು ವ್ಯವಸ್ಥೆಯಲ್ಲಿ ನಾವು ನಡೆದಿಲ್ಲ. ಸರ್ಕಾರಿ ಕಛೇರಿಗಳಲ್ಲಿನ ರಾಜಕೀಕರಣ ಇತ್ಯಾದಿ ನಾನು ಪ್ರಸ್ತಾಪಿಸಿದ ವಿಷಯಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಈಗ ಉತ್ತರ ಕೊಡಬೇಕೆಂದು ನಾನು ಕೋರುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೇ, ಈ ಸರ್ಕಾರಕ್ಕೆ ರಾಜಕೀಕರಣ ಮಾಡತಕ್ಕಂತಹ ಉದ್ದೇಶವಿಲ್ಲ. ಅಧಿಕಾರಿಗಳು ನಿಷ್ಪಕ್ಷಪಾತವಾಗಿ ಕೆಲಸ ಕಾರ್ಯಗಳನ್ನು ಮಾಡಬೇಕು, ಅದಕ್ಕೆ ಮುಕ್ತವಾದಂತಹ ಅವಕಾಶ ಅವರಿಗೆ ಇದೆ. ಯಾವುದೋ ಒಂದು ಹೆಸರನ್ನು ಮಾನ್ಯ ಸದಸ್ಯರು ಹೇಳಿದರು. ಅದನ್ನು ಅಷ್ಟು ದೊಡ್ಡದು ಮಾಡತಕ್ಕ ಅವಶ್ಯಕತೆ ಇಲ್ಲ. ಯಾರೋ ಒಬ್ಬ ಸಣ್ಣ ಅಧಿಕಾರಿಯನ್ನು ನಾವು ಪುನಃ ಕೆಲಸಕ್ಕೆ ವಾಪಸ್ ತೆಗೆದುಕೊಂಡೆವು ಎಂಬುದನ್ನೇ ಪ್ರಧಾನವಾಗಿ ರಾಜ್ಯಪಾಲರ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡುತ್ತಾ ಮಾನ್ಯ ಸದಸ್ಯರು ನನ್ನ ಗಮನವನ್ನು ಸೆಳೆದಿದ್ದಾರೆ. ಯಾವ ಕಾರಣಕ್ಕೋಸ್ಕರ ಅದನ್ನು ಮಾಡಲಾಯಿತು ಎಂಬುದನ್ನು ನಾನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಮಿಕ್ಕ ಐ.ಎ.ಎಸ್. ಅಧಿಕಾರಿಗಳ

ವಿಚಾರದಲ್ಲಿ ಮಾನ್ಯ ಸದಸ್ಯರು ಏನು ಹೇಳಿದರೋ ಅದರ ಬಗ್ಗೆ ಯಾವ ಕಾರ್ಯಕ್ರಮಗಳನ್ನು ನಾವು ತೆಗೆದುಕೊಂಡಿದ್ದೇವೆ ಎಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ ಎಂದು ಹೇಳಬಯಸುತ್ತೇನೆ. ಇನ್ನು ಮಾನ್ಯ ಸದಸ್ಯರುಗಳಿಗೆ ಕೊಡತಕ್ಕಂಥ ಅಥವಾ ಕೊಡಬಹುದಾದಂತಹ ಶಾಸಕರ ಕ್ಷೇತ್ರ ನಿಧಿ ಬಗ್ಗೆ ಹೇಳುವುದಾದರೆ, ಅದರ ಬಗ್ಗೆ ನನ್ನ ಆಯವ್ಯಯ ಭಾಷಣದಲ್ಲಿ ನಾನು ನಮೂದು ಮಾಡಿದ್ದೇನೆ. ಈ ಮಧ್ಯೆ ಈಗ ಲೋಕಸಭಾ ಸದಸ್ಯರುಗಳಿಗೆ ಕೇಂದ್ರ ಸರ್ಕಾರ ಪ್ರತಿ ಕ್ಷೇತ್ರಕ್ಕೆ ಇಂತಿಷ್ಟು ಎಂದು ನೀಡಲಾಗುತ್ತಿರುವ ನಿಧಿಯ ಬಗ್ಗೆ ಒಂದು ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆಯೊಂದು ಈಗ ಸುಪ್ರೀಂ ಕೋರ್ಟ್ ಮುಂದಿದೆ. ಇದರಿಂದಾಗಿ ಒಂದು ರೀತಿಯ ಬೆಳವಣಿಗೆಯಾಗಿದೆ. ಈ ಮೊಕದ್ದಮೆ ಬಗ್ಗೆ ಸುಪ್ರೀಂ ಕೋರ್ಟ್‌ನ ಡಿಸಿಷನ್ ಅನ್ನು ನಾವು ಕಾಯಬೇಕೇ? ಅಥವಾ ನಮ್ಮದೇ ಆದಂತಹ ಯೋಜನೆಯೊಂದನ್ನು ನಾವು ಜಾರಿಗೊಳಸಬೇಕೇ? ಎಂಬ ಬಗ್ಗೆ ಮಾನ್ಯ ಸದಸ್ಯರುಗಳು ಏನು ಹೇಳುತ್ತಾರೋ ಅದರ ಬಗ್ಗೆ ನಾವು ಯೋಚನೆ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್: ಅಲ್ಲಿಯವರೆಗೆ ಕಾಯುವುದಕ್ಕಾಗುವುದಿಲ್ಲ, ಕೆಲಸ ಪ್ರಾರಂಭವಾಗಬೇಕು.

ಶ್ರೀ ಚಂದ್ರಪ್ಪ: ಪಬ್ಲಿಕ್ ಇಂಟರೆಸ್ಟ್ ಇರುತ್ತದೆ. ಶಾಸಕರ ಅನುದಾನ ಕೊಡತಕ್ಕಂಥದ್ದರ ಬಗ್ಗೆ ತಮ್ಮ ನಿಲುವು ಏನು?

ಶ್ರೀ ಬಿ.ಸೋಮಶೇಖರ್: ಮಾನ್ಯ ಸಭಾಧ್ಯಕ್ಷರೆ, ಮುಖ್ಯ ಮಂತ್ರಿಗಳ ಭಾಷಣ ಕೇಳಿ ನನಗೆ ಏಕೋ ನಿರಾಶೆಯಾಯಿತು. ಮಾನ್ಯ ಸದಸ್ಯರುಗಳು ಅನೇಕ ಪ್ರಮುಖವಾದ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆ ಎಲ್ಲ ವಿಚಾರಗಳಿಗೆ ಉತ್ತರ ಕೊಡುತ್ತಾರೆಂದು ನಾನು ಅಂದುಕೊಂಡಿದ್ದೆ. ಅದರ ಬದಲಾಗಿ ನಮ್ಮದು ಯಾವುದೋ ಒಂದೆರಡು-ಮೂರು ವಿಷಯಗಳನ್ನು ಹಿಡಿದುಕೊಂಡು ಚುಚ್ಚುವುದಕ್ಕೆ ಪ್ರಯತ್ನ ಮಾಡಿದ್ದಾರೆಯೇ ಹೊರತು ಎಲ್ಲ ಸದಸ್ಯರುಗಳ ವಿಚಾರಗಳಿಗೆ ಉತ್ತರ ಕೊಟ್ಟಿಲ್ಲವೆಂದು ನನಗೆ ನಿರಾಶೆಯಾಗಿದೆ. ಮೊದಲನೆಯದಾಗಿ ನಾವು ಹೇಳುವಂಥದ್ದು ವಾಸ್ತು ಬಗ್ಗೆ ಖರ್ಚು ಮಾಡಿರುವುದು. ಮಂತ್ರಿಗಳು ಮನೆಗಳಿಗೆ ಸ್ವಲ್ಪ ಹೆಚ್ಚಿಗೆ ಖರ್ಚು ಮಾಡಿರಬಹುದು ಅಥವಾ ಸ್ವಲ್ಪ ಕಡಿಮೆ ಮಾಡಿರಬಹುದು. ಇದರ ಬಗ್ಗೆ ನಮ್ಮ ವಿರೋಧ ಇರಲಿಲ್ಲ. ನಾನು ಏನು ಹೇಳಿದೆ ಎಂದರೆ, ಈ ವಿಧಾನ ಸೌಧದ ಸುತ್ತಮುತ್ತ ಇರತಕ್ಕಂತಹ ಕಟ್ಟಡಗಳಿಗೆ ಏನಾದರೂ ಬದಲಾವಣೆ ಮಾಡಬೇಕಾದರೆ ಬಾಗಿಲು ತೆಗೆದು ಬೇರೆ ಕಡೆ ಹಾಕುವುದಕ್ಕಾಗಲಿ, ಬೇರೆ ಸ್ಟ್ರಕ್ಚರಲ್ ಛೇಂಜಸ್ ಆಗಬೇಕಾದರೆ ನಾವು ಸ್ವಇಚ್ಛೆಯಿಂದ ನಮಗೆ ಬೇಕಾದ ಹಾಗೆ ಮಾಡುವುದಕ್ಕೆ ಬರುವುದಿಲ್ಲ. ಅರ್ಬನ್ ಆರ್ಟ್ಸ್ ಕಮೀಷನ್ ಏನಿದೆ, ಅವರಿಂದ ನೀವು ಪರ್ಮಿಷನ್ ತೆಗೆದುಕೊಳ್ಳಬೇಕಾಗಿತ್ತು. ಅದಿಲ್ಲದೆ ನಾನು ಇದ್ದ ಮನೆಯಲ್ಲಿ, ಮುಖ್ಯಮಂತ್ರಿಗಳು ಇದ್ದ ಮನೆಯಲ್ಲಿ ಬದಲಾವಣೆ

ಮಾಡಿದ್ದಾರೆ. ಸರ್ಕಾರ ಹಣ ದುರುಪಯೋಗ ಮಾಡಿದೆ. ಈ ಮೂಢನಂಬಿಕೆ ನಂಬಿ ಸರ್ಕಾರ ಹಣ ದುರುಪಯೋಗ ಮಾಡಿದೆ. ಅದಕ್ಕೆ ಹೆಚ್ಚು ಖರ್ಚಾಗಿದೆ ಎಂದು ಹೇಳಿದ್ದೇನೆ. ಅದರ ಬಗ್ಗೆ ಅವರು ಉತ್ತರ ಹೇಳಲಿಲ್ಲ. ಮಧ್ಯ ಲಾಬಿಗಳಿಗೆ ಕಾಂಗ್ರೆಸ್ ಸರ್ಕಾರ ಕೈಗೊಂಬೆಯಾಗಿಲ್ಲ ಆಗುವುದೂ ಇಲ್ಲವೆಂದು ಹೇಳಿದ್ದಾರೆ. ಆದರೆ ಅದಕ್ಕೆ ಅನೇಕ ವಿವರಗಳನ್ನು ಅನೇಕ ಸದಸ್ಯರು ಪ್ರಸ್ತಾಪ ಮಾಡಿದರು. ಕೆಲವು ನಿರ್ದಿಷ್ಟವಾದ ಪ್ರಕರಣಗಳನ್ನು ಹೇಳಿದ್ದಾರೆ. ಇಂತಿಂಥ ವಿಚಾರಗಳಲ್ಲಿ ಕೆಲವು ಜಿಲ್ಲಾಧಿಕಾರಿಗಳನ್ನು ಬದಲಾವಣೆ ಮಾಡಿದ್ದಾರೆ. ಕೆಲವು ಈ ರೀತಿ ಬೆಂಬಲ ಕೊಟ್ಟಿದ್ದೀರಿ ಎಂದು ವಿಚಾರ ಇದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮುಗುಮ್ಮಾಗಿ ಜಿಲ್ಲಾಧಿಕಾರಿಗಳ ವರ್ಗಾವರ್ಗಿ ಬಗ್ಗೆ ಡಿಮ್ಯಾಂಡ್ಸ್ ಬಗ್ಗೆ ಚರ್ಚೆ ಮಾಡುವಾಗ ಹೇಳುತ್ತೇನೆ ಎಂದರು. ಇದರ ಬಗ್ಗೆ ಸರಿಯಾಗಿ ಪ್ರಸ್ತಾಪ ಮಾಡಿಲ್ಲ, ಅದರ ಬಗ್ಗೆ ಸ್ಪಷ್ಟೀಕರಣ ನೀಡಿಲ್ಲ. ಇನ್ನೊಂದು ವಿಚಾರ ಏನೆಂದರೆ ಕೊಜೆಂಟ್ರಿಕ್ಸ್ ಹೋಗಿ ಅದರ ಬದಲಿಗೆ ಇವತ್ತು China Light & Power Co. ಮತ್ತು ಟಾಟಾದವರ ಜೊತೆ ಬೇರೆ ಯೋಜನೆ ತಯಾರಾಗಿದೆ ಅದನ್ನು ನಾವು ಪ್ರಸ್ತಾಪ ಮಾಡಿದೆವು. ಅದಕ್ಕೆ Escrow ಕವರ್ ಕೊಡುತ್ತಿದ್ದೀರೋ ಇಲ್ಲವೋ ಎಂಬ ಬಗ್ಗೆ ಹೇಳಲಿಲ್ಲ. ಇನ್ನು 25-30 ಸಣ್ಣ ಸಣ್ಣ ಘಟಕಗಳು Escrow ಕವರ್ ಇಲ್ಲದೆ ವಾಪಸ್ ಹೋಗಿದ್ದಾರೆ ಎನ್ನತಕ್ಕಂಥದ್ದು ಹೇಳಿದ್ದೇವೆ. ಅವರು ಯಾವ ಕಾರಣಕ್ಕೋಸ್ಕರ ವಾಪಸ್ ಹೋಗಿದ್ದಾರೆ, ಅದರ ಬಗ್ಗೆ ಸ್ಪಷ್ಟೀಕರಣ ನೀಡಬೇಕು. ನಮ್ಮ ಸರ್ಕಾರ ಸುಮಾರು 7-8 ಹೊಸ ಜಿಲ್ಲೆಗಳನ್ನು ಪ್ರಾರಂಭ ಮಾಡಿತ್ತು, ಅನೇಕ ಸದಸ್ಯರು ಹೊಸ ಜಿಲ್ಲೆಗಳಿಂದ ಬಂದವರು ಮೂಲಭೂತ ಸೌಕರ್ಯಗಳನ್ನು ಒದಗಿಸುವ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದರು ಅದನ್ನು ಹೇಳಲಿಲ್ಲ. ಇದಕ್ಕೆ ಸ್ಪಷ್ಟೀಕರಣ ನೀಡಬೇಕು ಎಂದು ಕೇಳುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ: ವಸತಿಗೃಹಗಳಿಗೂ ಅರ್ಬನ್ ಆರ್ಟ್ ಕಮೀಷನ್‌ಗೂ ಸಂಬಂಧ ಇಲ್ಲ. ಅರ್ಬನ್ ಆರ್ಟ್ಸ್ ಕಮೀಷನ್ ಹೆರಿಟೇಜ್ ಬಿಲ್ಡಿಂಗ್‌ಗೆ, ಟಿಪ್ಪುಸುಲ್ತಾನ್ ಅರಮನೆಗೆ ವೈಸ್‌ರಾಯ್‌ರವರ ಲಾಡ್ಜ್‌ಗೆ ವಿಧಾನಸೌಧಕ್ಕೆ ಅಪ್ಲೈ ಆಗುತ್ತದೆಯೇ ಹೊರತು ಮಂತ್ರಿಗಳ ವಸತಿ ಗೃಹಗಳಿಗೆ ಅರ್ಬನ್ ಆರ್ಟ್ಸ್ ಕಮೀಷನ್ ಕೊಟ್ಟರೆ ದೇವರೇ ಗತಿ. ಏನೂ ಮಾಡುವುದಕ್ಕೆ ಬರುವುದಿಲ್ಲ. ಇನ್ನು ವಿಧಾನ ಸೌಧದ ಸುತ್ತಮುತ್ತ ಇರತಕ್ಕಂತಹ ಅಂದ ಚಂದಗಳನ್ನು ಕಾಪಾಡುವುದು ನಮ್ಮ ಕರ್ತವ್ಯ. ಅದನ್ನು ಮಾಡುತ್ತೇವೆ. ಪವರ್ ವಿಚಾರದಲ್ಲಿ ಹೇಳಿದರು Escrow ಪವರ್ ಯಾರಿಗೂ ಕೊಡುವುದಿಲ್ಲವೆಂದು ಸ್ಪಷ್ಟಪಡಿಸಿದೆ. ಆ ಪಾಲಿಸಿ ಚೈನಾ ಪವರ್ಗೂ ಅಪ್ಲೈ ಆಗುತ್ತದೆ. ಏಳೆಂಟು ಜಿಲ್ಲೆಗಳನ್ನು ಹೊಸದಾಗಿ ರಚನೆ ಮಾಡಿದರು. ಹೊಸದಾಗಿ ಮಾಡುವಾಗ ಯೊಚನೆ ಮಾಡಬೇಕಾಗಿತ್ತು. ಏಳೆಂಟು ಜಿಲ್ಲೆಗಳಲ್ಲಿ ಇನ್‌ಫ್ರಾಸ್ಟ್ರಕ್ಚರ್ ಏನು ಮಾಡಬೇಕೋ, ಈಗ ಅದನ್ನು ಮಾಡುತ್ತೇವೆ. ಏಳೆಂಟು ಜಿಲ್ಲೆಗಳಲ್ಲಿ ಮಿನಿ ವಿಧಾನ ಸೌಧ ಎಂದು ಮಾಡಬೇಕು ಅದನ್ನು ಮಿನಿ ಎಂದು ಕರೆದರೆ ತಪ್ಪಾಗಬಹುದು.

ಜಿಲ್ಲಾ ಹೆಡ್ ಕ್ವಾರ್ಟರ್ಸ್‌ನಲ್ಲಿ ಕಲೆಕ್ಟರ್ಸ್ ಆಫೀಸ್, ಸೂಪರಿಂಟೆಂಡೆಂಟ್ ಆಫೀಸ್, ಸಿಇಓ ಆಫೀಸ್ ಮತ್ತು ಜಿಲ್ಲಾ ಪರಿಷತ್ತು ಅದನ್ನು ನಾವು ಮಾಡಬೇಕು, ಅದಕ್ಕೆ ನಾನು ಬಡ್ಜೆಟ್‌ನಲ್ಲಿ ಬುದ್ಧಿಪೂರ್ವಕವಾಗಿ ಹಣ ಒದಗಿಸಲಿಲ್ಲ. ಕಾರಣವೇನೆಂದರೆ, ಅದನ್ನು ಸಾಲ ತೆಗೆದುಕೊಂಡು ಬಂದು ಮಾಡುತ್ತೇವೆ. ಏಕೆಂದರೆ these are asset forming of the government. ಒಂದು ಬಿಲ್ಡಿಂಗ್ ಕಟ್ಟಿದರೆ it is an asset ನಮ್ಮ ಕರ್ನಾಟಕ ರಾಜ್ಯದ ಅಸೆಟ್ ಗೊತ್ತು ಮಾಡತಕ್ಕಂತಹ ಕಾಲದಲ್ಲಿ ಕರ್ನಾಟಕ ರಾಜ್ಯದಲ್ಲಿ ಎಷ್ಟು ರಸ್ತೆಗಳಿವೆ, ಎಷ್ಟು ಬಿಲ್ಡಿಂಗ್ ಇದೆ, ಇವುಗಳ ಆಧಾರದ ಮೇಲೆ ನಾವು ಮಾಡುತ್ತೇವೆ. ಏಳೆಂಟು ಜಿಲ್ಲೆಗಳಿಗೆ ವಿಶೇಷವಾಗಿ ಗಮನ ಕೊಟ್ಟು ನಾವು ಅಲ್ಲಿ ಇನ್‌ಫ್ರಾಸ್ಟ್ರಕ್ಚರ್ ಅಭಿವೃದ್ಧಿ ಮಾಡತಕ್ಕಂಥದ್ದು ಒಂದು ಪ್ರಿಯಾರಿಟಿ ಏರಿಯಾ ಎನ್ನತಕ್ಕಂಥದ್ದರ ಬಗ್ಗೆ ನಾನು ಸ್ಪಷ್ಟವಾದ ಭರವಸೆಯನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ.

ಶ್ರೀ ಸಿ.ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡತಕ್ಕಂತಹ ಸಂದರ್ಭದಲ್ಲಿ ನಾನು ವಾಸ ಮಾಡತಕ್ಕಂತಹ ಕಟ್ಟಡದ ಬಗ್ಗೆ 11 ಲಕ್ಷ ರೂಪಾಯಿಗಳು ಖರ್ಚಾಗಿದೆ ಎಂದರು. ಆ ಕಟ್ಟಡಕ್ಕೆ ಹೆಚ್ಚುವರಿಯಾಗಿ ಕೊಠಡಿಗಳು ಬೇಕಾಗಿರುವ ಕಾರಣದಿಂದ ಖರ್ಚಾಗಿದೆ ವಿನಃ ವಾಸ್ತು ಕಾರಣ ಅಲ್ಲ. ಅದನ್ನು ಬಹಳ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಆ ಕಾರಣ ಕೊಡತಕ್ಕಂಥವರು ನಿಮ್ಮ ಮಂತ್ರಿಗಳು. ವಾಸ್ತುವಿಗೂ ನಮಗೂ ಸಂಬಂಧವಿಲ್ಲ. ಈ ರೀತಿ ನಾನು ಹೇಳಿದ್ದು ಅವೈಜ್ಞಾನಿಕವಾದ ವಿಚಾರಗಳಿಗೆ ಸಾರ್ವಜನಿಕರ ಹಣ ಪೋಲು ಮಾಡುತ್ತಿದ್ದೀರಿ ಎಂದು ನಾನು ಹೇಳಿದ್ದು. ಅದು ಅಷ್ಟಕ್ಕೆ ಬಿಡುತ್ತೇನೆ. ಮುಖ್ಯ ಮಂತ್ರಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಕಾರಣವೇನೆಂದರೆ ಒಂದು ಕುರ್ಚಿ ಬಿಟ್ಟು ಎಲ್ಲ ಕುರ್ಚಿಗಳು ಭರ್ತಿ ಇವೆ. ದೊಡ್ಡ ಎಕ್ಸ್‌ರ್ಸೈಜ್ ಮಾಡಿದ್ದಾರೆ. ಇವರು ಏನು ಹೇಳುತ್ತಿದ್ದಾರೆಂದು ಇವತ್ತಿನ ಪತ್ರಿಕೆಯಲ್ಲಿ ಕೂಡ ಬಂದಿದೆ. "Attend House or go out - CM tells ministers. You all will be under watch."

ಅಧ್ಯಕ್ಷರು: ರಾಜ್ಯಪಾಲರ ಭಾಷಣದ ಬಗ್ಗೆ ಕ್ಲ್ಯಾರಿಫಿಕೇಷನ್ ಕೇಳಬೇಕು.

ಶ್ರೀ ಸಿ.ಬೈರೇಗೌಡ: ಸರ್ಕಾರದ ವ್ಯವಹಾರ ಎಲ್ಲಿಯವರೆಗೆ ಹೋಗಿದೆ ಎಂದರೆ, ಮಂತ್ರಿಗಳಿಗೆ ಶಾಸಕರಿಗೆ ಹೆದರಿಸುವಂತಹ ಪರಿಸ್ಥಿತಿಗೆ ಹೋಗಿದೆ.

Further it is reported, "Mr.Krishna told has colleagues that he would watch their attitude till May 5, and on the basis of his findings he would report it to the party high command."

ಅಧ್ಯಕ್ಷರು: ನೀವು ಅನುಭವಿ ರಾಜಕಾರಣಿ. ಇದಕ್ಕೂ ಅದಕ್ಕೂ ಸಂಬಂಧವಿಲ್ಲ.

ಶ್ರೀ ಸಿ.ಬೈರೇಗೌಡ: ಮುಖ್ಯಮಂತ್ರಿಗಳು ಅವರ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದಾರೆ.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆ ತಮ್ಮಲ್ಲಿ ಒಂದು ಪ್ರಾರ್ಥನೆ ಮಾಡಿದ್ದೆ, ನಿಯಮಾವಳಿ ಪ್ರಕಾರ ನಾವು ಈ ಅಧಿವೇಶನವನ್ನು, ಈ ಸಭೆಯನ್ನು ನಡೆಸಬೇಕು. ಈಗ ಎರಡು ಗಂಟೆಯಾಗಿದೆ, ಕ್ಲಾರಿಫಿಕೇಷನ್ ಪ್ರಾರಂಭವಾಗಿದೆ, ಸಭೆಯನ್ನು ಮುಕ್ತಾಯ ಮಾಡಬೇಕು. ಒಂದೊಂದು ಪಕ್ಷದಲ್ಲಿ ಮೂರು ನಾಲ್ಕು ಜನ ಕೇಳಿದರೆ ಮುಗಿಸುವುದು ಹೇಗೆ.

ಅಧ್ಯಕ್ಷರು: ನಿಮ್ಮ ಪಾರ್ಟಿಯಲ್ಲಿ ಮೂರು ಜನ ಕೇಳಿದ್ದಾರೆ.

ಶ್ರೀ ಎಂ.ಭಕ್ತವತ್ಸಲಂ: ಮಾನ್ಯ ಅಧ್ಯಕ್ಷರೆ ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ನಮ್ಮ ಕರ್ನಾಟಕದಲ್ಲಿ ಗೋಲ್ಡ್ ಮೈನ್ಸ್ ಬಹಳ ಇಂಪಾರ್ಟೆಂಟ್ ಪ್ಲೇಸ್ 120 ವರ್ಷಗಳ ಗೋಲ್ಡ್ ಮೈನ್ಸ್‌ನ್ನು ಕೇಂದ್ರ ಸರ್ಕಾರದವರು ಕ್ಲೋಸ್ ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆ.

ಬಿ.ಜಿ.ಎಂ.ಎಲ್.ನಲ್ಲಿ ಇರುವವರಲ್ಲಿ ಶೇಕಡ 60ರಷ್ಟು ಕಾರ್ಮಿಕರು ಎಸ್.ಸಿ. ವರ್ಗಕ್ಕೇ ಸೇರಿದವರಾಗಿರುತ್ತಾರೆ. ಇದನ್ನು ಮುಚ್ಚಬಾರದೆಂದು ಕೇಳಿದ್ದೇನೆ. ನಾನು ಈ ವಿಚಾರವನ್ನು ಹೇಳಿದಾಗ ಅಂದು ಮಾನ್ಯ ಸುರೇಶ್‌ಕುಮಾರ್‌ರವರು ಮತ್ತು ಸೋಮಶೇಖರ್‌ರವರೂ ಕೂಡ ಬಿ.ಜಿ.ಎಂ.ಎಲ್.ನ್ನು ಮುಚ್ಚಬಾರದೆನ್ನುವುದನ್ನು ಬೆಂಬಲಿಸಿಯೇ ಮಾತನಾಡಿದ್ದಾರೆ. ಇದರ ಬಗ್ಗೆ ಈ ಸದನದಲ್ಲಿ ಒಂದು ಠರಾವನ್ನು ಪಾಸ್ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕೆಂದು ನಾನು ವಿನಂತಿ ಮಾಡಿದ್ದೆ. ಇದರ ಬಗ್ಗೆ ಮುಖ್ಯಮಂತ್ರಿಗಳು ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಮತ್ತೊಮ್ಮೆ ವಿನಂತಿಸುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಕಳಕಳಿಯನ್ನು ಸರ್ಕಾರ ಅರ್ಥ ಮಾಡಿಕೊಳ್ಳುತ್ತದೆ. ಈ ಸದನದ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ನಾಯಕರು ಒಪ್ಪುವುದಾದರೆ ಒಂದು ಠರಾವನ್ನು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಲಾಗುವುದು.

ಶ್ರೀ ಪಿ.ಜಿ.ಆರ್.ಸಿಂಧ್ಯ: ಇದಕ್ಕೆ ನಮ್ಮೆಲ್ಲರ ಒಪ್ಪಿಗೆ ಇದೆ.

ಶ್ರೀ ಸಿ.ಚೆನ್ನಿಗಪ್ಪ: ಮಾನ್ಯ ಅಧ್ಯಕ್ಷರೆ, ಆಶ್ರಯ ಯೋಜನೆ ಬಗ್ಗೆ, ಗ್ರಾಮೀಣ ಪ್ರದೇಶದ ಅಭ್ಯರ್ಥಿಗಳಿಗೆ ಉದ್ಯೋಗ ನೀಡುವಾಗ ಕೊಡುತ್ತಿದ್ದ ಕೃಪಾಂಕದ ಬಗ್ಗೆ

ಮತ್ತು ಕೆ.ಪಿ.ಎಸ್.ಸಿ. ನಡೆಸುವ ಕೆ.ಎ.ಎಸ್ ಪರೀಕ್ಷೆಯಲ್ಲಿ ಆಗಿರುವ ಅವ್ಯವಹಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಏನನ್ನೂ ಹೇಳಿಯೇ ಇಲ್ಲ. ಅದರ ಬಗ್ಗೆ ಹೇಳಬೇಕೆಂದು ವಿನಂತಿಸುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೆ, ಆಶ್ರಯ ಸಮಿತಿಗಳನ್ನು ಮಾಡಿದ್ದೇವೆ, ಶಾಸಕರೇ ಆಶ್ರಯ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಇನ್ನು ಕೃಪಾಂಕದ ಬಗ್ಗೆ ಹೇಳುವುದಾದರೆ ಈಗಾಗಲೇ ಒಂದು ಕಮೀಶನ್‌ನ್ನು ಮಾಡಿದ್ದು ಅವರಿಂದ ಮಾಹಿತಿ ಬಂದಮೇಲೆ ಅದರ ಆಧಾರದ ಮೇಲೆ ನಿಮ್ಮೆಲ್ಲರನ್ನು ಸಭೆಗೆ ಕರೆದು ಮಾರ್ಗದರ್ಶನ ಪಡೆದು ಕ್ರಮ ತೆಗೆದುಕೊಳ್ಳಲಾಗುವುದು.

ಅಧ್ಯಕ್ಷರು: ಬನ್ನಿಕೋಡ್‌ರವರೆ ತಿದ್ದುಪಡಿಯನ್ನು ನೀವು ಮೂವ್ ಮಾಡುತ್ತೀರಾ?

ಶ್ರೀ ಬಿ.ಹೆಚ್.ಬನ್ನಿಕೋಡ್: ಮಾನ್ಯ ಅಧ್ಯಕ್ಷರೆ, ಈ ವಿಚಾರದ ಬಗ್ಗೆ ಕೆಲವೊಂದು ವಿಷಯಗಳನ್ನು ನಾನು ಪ್ರಸ್ತಾಪ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಅನೇಕ ವಿಚಾರಗಳನ್ನು ರಾಜ್ಯಪಾಲರ ಭಾಷಣದ ಮೂಲಕ ಸದನದಲ್ಲಿ ತಿಳಿಸಿದ್ದಾರೆ. ಅದರ ಮೇಲೆ ಚರ್ಚೆಯೂ ಕೂಡ ಆಗಿದೆ. ನಾನು ತಮ್ಮ ಮೂಲಕ ಹೇಳಬಯಸುವುದೇನೆಂದರೆ ರಾಜ್ಯದ ರೈತರು ಬೆಳೆಯುವ ಬೆಳೆಗಳಿಗೆ ಯೋಗ್ಯವಾದ ಬೆಲೆಯನ್ನು ನಿಗಧಿ ಮಾಡುವಲ್ಲಿ ರಾಜ್ಯ ಸರ್ಕಾರದಲ್ಲಿ ಯಾವುದೇ ಯೋಜನೆಗಳು ಇಲ್ಲದೇ ಇರುವುದರಿಂದ ಈ ಒಂದು ತಿದ್ದುಪಡಿಯನ್ನು ತರುವುದಕ್ಕೆ ನಾನು ತಮಗೆ ಕಳುಹಿಸಿಕೊಟ್ಟಿದ್ದೆ. ರಾಜ್ಯಪಾಲರ ಭಾಷಣದ ನಾಲ್ಕನೇ ಕಂಡಿಕೆಯಲ್ಲಿ ಕೃಷಿ ಕಾರ್ಯನೀತಿ ಮತ್ತು ಗುರಿಗಳ ಪುನರಾವಲೋಕನಕ್ಕಾಗಿ ಮಾನ್ಯ ಮುಖ್ಯಮಂತ್ರಿಯವರ ನೇತೃತ್ವದಲ್ಲಿ ಸಚಿವರ ಸಂಪುಟದ ಉಪ ಸಮಿತಿಯೊಂದನ್ನು ರಚಿಸಲಾಗುವುದು ಎನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ರೈತರ ಅಭಿವೃದ್ಧಿ ಬಗ್ಗೆ ನಿರ್ದಿಷ್ಟವಾದ ಹೇಳಿಕೆ ಇಲ್ಲದೇ ಇದ್ದದ್ದರಿಂದ ನಾನು ನಿರ್ದಿಷ್ಟವಾಗಿ ನಾಲ್ಕನೇ ಕಂಡಿಕೆಯ ಕೊನೆಯಲ್ಲಿ ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳಿಗೆ ಕನಿಷ್ಟ ಶೇಕಡ 25ರಷ್ಟು ಲಾಭದಾಯಕ ಬೆಲೆಯನ್ನು ನಿಗದಿಪಡಿಸಲು ಕ್ರಮ ಕೈಗೊಳ್ಳಲಾಗುವುದು ಎನ್ನುವ ಮಾತನ್ನು ಸೇರಿಸಬೇಕೆಂದು ಹೇಳಿ ತಮ್ಮ ಮೂಲಕ ಒಂದು ತಿದ್ದುಪಡಿಯನ್ನು ತಂದಿದ್ದೇನೆ. ಇಂದು ಸರ್ಕಾರಿ ನೌಕರರಿಗೆ ತುಟ್ಟಿಭತ್ಯೆಯನ್ನು ಪದಾರ್ಥಗಳ ಬೆಲೆ ಏರಿಕೆಯ ಸೂಚ್ಯಂಕದಂತೆ ಹೆಚ್ಚಿಸುವ ವ್ಯವಸ್ಥೆ ಇದೆ. ರೈತರನ್ನು ಬಿಟ್ಟು ಬೇರೆಲ್ಲರಿಗೂ ದುಡಿಮೆಗೆ ತಕ್ಕ ಪ್ರತಿಫಲ ಸಿಗುವ ವ್ಯವಸ್ಥೆ ಇದೆ. ರೈತರ ಹೊಲಗದ್ದೆಗಳಲ್ಲಿ ದುಡಿಯುವ ರೈತಕಾರ್ಮಿಕರಿಗೆ, ಶ್ರಮಕ್ಕೆ ತಕ್ಕ ಪ್ರತಿಫಲ ಈ ರಾಜ್ಯ ಮತ್ತು ರಾಷ್ಟ್ರದಲ್ಲಿ ಇಲ್ಲದೇ ಇರುವುದರಿಂದ ಇತ್ತ ಕಡೆ ಗಮನ ಹರಿಸಬೇಕಾದುದು ಅವಶ್ಯವಾಗಿದೆ. ರಾಜಕಾರಣಿಗಳಾದ ನಾವೆಲ್ಲರೂ ರೈತರ ಮತ್ತು ರೈತಕಾರ್ಮಿಕರ ಮತ್ತು ಕೂಲಿಯಾಳುಗಳ ಮತಗಳಿಂದ ಆಯ್ಕೆಯಾಗಿದ್ದೇವೆ ಎನ್ನುವುದನ್ನು ಮರೆಯಬಾರದು.

ಇದರಲ್ಲಿ ರಾಜ್ಯಸಭಾ ಸದಸ್ಯರು, ಲೋಕಸಭಾ ಸದಸ್ಯರು ಮತ್ತು ವಿಧಾನಸಭೆ, ವಿಧಾನಪರಿಷತ್ ಸದಸ್ಯರೆಲ್ಲರೂ ಸೇರುತ್ತಾರೆ. ಇಂದು ರಾಜ್ಯದ ರೈತರು ಬೆಳೆದಿರುವ ಕಬ್ಬನ್ನು ಸಕ್ಕರೆ ಕಾರ್ಖಾನೆಗೆ ಕೊಟ್ಟರೆ ಅದಕ್ಕೆ ಯೋಗ್ಯ ಬೆಲೆಯೇ ಸಿಗುತ್ತಿಲ್ಲ. ಟಮೋಟೋವನ್ನು ಬೆಳೆದ ರೈತರು ಯೋಗ್ಯ ಬೆಲೆ ಸಿಗದೇ ಬೀದಿಯಲ್ಲಿಯೇ ಅದನ್ನು ಚೆಲ್ಲುವಂಥ ಪರಿಸ್ಥಿತಿ ಬಂದಿದೆ. ಮಾನ್ಯ ಖರ್ಗೆಯವರು ವಿರೋಧ ಪಕ್ಷದ ನಾಯಕರಾಗಿದ್ದಾಗ ಗುಲ್ಬರ್ಗಾದಲ್ಲಿ ತೊಗರಿಯನ್ನು ಬೆಳೆದ ರೈತರಿಗೆ ಯೋಗ್ಯ ಬೆಲೆ ಸಿಗದೇ ತೊಂದರೆಯಾಗಿ ಬೆಳೆಯೆಲ್ಲಾ ರೋಗದಿಂದ ನಾಶವಾಯಿತು ಎಂಬ ವಿಚಾರವನ್ನು ಅಂದು ಹೇಳಿದ್ದರು. ಇಂದು ರೈತರು ಬೆಳೆಯನ್ನು ಬೆಳೆಯಲು ಬೇಕಾದ ಬೀಜ, ಗೊಬ್ಬರ ಮತ್ತಿತರ ಖರ್ಚುಗಳನ್ನು ಏನು ಮಾಡಿರುತ್ತಾರೆ ಅಷ್ಟು ಹಣ ಕೂಡ ಬೆಳೆಗಳಿಗೆ ಸಿಗದೇ ಇರತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ರೈತರು ಬೆಳೆ ಬೆಳೆಯಲು ತೆಗೆದುಕೊಂಡ ಸಾಲವನ್ನು ತೀರಿಸಲಾಗದೇ ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣಗಳ ಬಗ್ಗೆ ಇದೇ ಸದನದಲ್ಲಿ ಚರ್ಚೆಯಾಗಿದೆ. ದುಡಿದಂತ ರೈತರು ಶ್ರೀಮಂತರಾಗಬೇಕಾಗಿತ್ತು. ಆದರೆ ರೈತರು ದರಿದ್ರರಾಗಬೇಕಾದ ಪರಿಸ್ಥಿತಿ ಈ ದೇಶದಲ್ಲಿ ನಿರ್ಮಾಣವಾಗಿದೆ ಇಂಥ ವಿಚಾರಗಳನ್ನು ಮಾತನಾಡಲು ಕೂಡ ಸದನದಲ್ಲಿ ಅವಕಾಶವೇ ಇಲ್ಲವೇನೋ ಎನ್ನುವ ಭಾವನೆ ನನಗೆ ಬರುತ್ತಿದೆ. ಬೇರೆ ಹಲವಾರು ವಿಚಾರಗಳು ಸದನದಲ್ಲಿ ಚರ್ಚೆಯಾಗುತ್ತಿದೆ. ಆದರೆ ರೈತರು ಬೆಳೆದ ಬೆಳೆಗಳಿಗೆ ಯೋಗ್ಯ ಬೆಲೆ ಕೊಡಬೇಕಾದ ನಿಟ್ಟಿನಲ್ಲಿ ಯೋಚನೆಯನ್ನೇ ಮಾಡಲು ಅವಕಾಶವಿಲ್ಲವಾಗಿದೆ. ಯೋಜನೆಗಳನ್ನು ತಯಾರಿಸುವುದಕ್ಕೆ ಸರ್ಕಾರಕ್ಕೆ ಇಚ್ಛಾಶಕ್ತಿ ಇಲ್ಲವಾಗಿದೆ. ಅದಕ್ಕಾಗಿ ನಾನು ತಮ್ಮ ಮೂಲಕ ಸರ್ಕಾರಕ್ಕೆ ಹೇಳಬಯಸುವುದೇನೆಂದರೆ ಇಂದು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಪ್ರವೃತ್ತಿಯನ್ನು ನಿಲ್ಲಿಸಲು ಏನಾದರೂ ಮಾರ್ಗೋಪಾಯಗಳನ್ನು ಹುಡುಕಬೇಕಾದುದು ಅವಶ್ಯವಿದೆ. ಈ ವ್ಯವಸ್ಥೆಯನ್ನು ರಾಜ್ಯಸರ್ಕಾರವೊಂದೇ ಮಾಡಲು ಸಾಧ್ಯವಾಗುವುದಿಲ್ಲವೆನ್ನುವುದನ್ನು ನಾನು ಬಲ್ಲೆ. ಇದರ ಬಗ್ಗೆ ಇಡೀ ರಾಷ್ಟ್ರದಲ್ಲಿಯೇ ಸಮಗ್ರವಾಗಿ ಚಿಂತನೆ ಮಾಡಿ ವ್ಯವಸ್ಥೆಯನ್ನು ಜಾರಿಗೆ ತರಬೇಕಾಗಿದೆ. ಈ ದಿಸೆಯಲ್ಲಿ ಮೊದಲು ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಒಂದು ಯೋಜನೆಯನ್ನು ಮಾಡಿ ರಾಷ್ಟ್ರಕ್ಕೆ ಮಾದರಿಯಾಗುವ ಹಾಗೆ ಮಾಡಬೇಕೆಂದು ತಿಳಿಸಬಯಸುತ್ತೇನೆ. ಇಂದು ಆತ್ಮಹತ್ಯೆ ಮಾಡಿಕೊಂಡಾಗ ಅವರ ಕುಟುಂಬದವರಿಗೆ ಲಕ್ಷ ರೂಪಾಯಿಗಳ ಹಣ ಕೊಡುವುದಕ್ಕೆ ನಾವಿಲ್ಲ ರಾಜಕೀಯ ಮಾಡುತ್ತಿದ್ದೇವೆ. ರೈತರು ಆತ್ಮಹತ್ಯೆ ಮಾಡಿಕೊಳ್ಳಬೇಕಾದ ಪರಿಸ್ಥಿತಿಗೆ ಬರಲು ಈ ರಾಷ್ಟ್ರದ ರಾಜಕಾರಣವೇ ಕಾರಣ ಎನ್ನುವುದನ್ನು ನಾವು ಮರೆತಿದ್ದೇವೆ. ಒಬ್ಬ ರೈತ ಇವೊತ್ತು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಕಾರಣವೇನು? ರೈತ ಸಾಲ ಮಾಡಿ ಬೀಜಗಳನ್ನು ತಂದು, ಗೊಬ್ಬರವನ್ನು ತಂದು ಬಿತ್ತಿದ ಮೇಲೆ ನೀರಾವರಿಗೆ ತೊಂದರೆಯಾಗಿದೆ, ಪಂಪ್‌ಸೆಟ್‌ಗೆ ಸರಿಯಾಗಿ ವಿದ್ಯುತ್ ಅಭಾವವುಂಟಾಗಿ ತೊಂದರೆಯಾಗಿದೆ. ಇವೆಲ್ಲ ಕಷ್ಟಗಳನ್ನು ಎದುರಿಸಿ ಬೆಳೆ ಬೆಳೆದರೆ ಅದಕ್ಕೆ ಸರಿಯಾದ ಬೆಲೆ ಸಿಗುವ ವ್ಯವಸ್ಥೆಯೂ ಕೂಡ ಇಂದು ಇಲ್ಲವಾಗಿದೆ. ಇಂದು

ರೈತ ಪ್ರಾಣ ಕಳೆದುಕೊಳ್ಳುವ ಪರಿಸ್ಥಿತಿಯನ್ನು ಕಂಡೂ ನಾವು ಅವರ ಬಗ್ಗೆ ಯೋಚನೆ ಮಾಡದೇ ಹೋದರೆ ರಾಜ್ಯದ ಜನತೆ ನಮ್ಮನ್ನು ಖಂಡಿತವಾಗಿಯೂ ಕ್ಷಮಿಸುವುದಿಲ್ಲವಾದ ಕಾರಣ ಈ ದಿಸೆಯಲ್ಲಿ ತುರ್ತಾಗಿ ಒಂದು ಯೋಜನೆಯನ್ನು ಮಾನ್ಯ ಮುಖ್ಯಮಂತ್ರಿಗಳು ಹಾಕಬೇಕೆಂದು ತಮ್ಮ ಮೂಲಕ ಹೇಳಿ ಈಗಾಗಲೇ ಮುಖ್ಯಮಂತ್ರಿಗಳು ಕೃಷಿಕರ ಬೆಳೆಗೆ ಯೋಗ್ಯ ಬೆಲೆ ನಿಗದಿಪಡಿಸುವಲ್ಲಿ ಕೃಷಿ ಕಾರ್ಯನೀತಿ ಮತ್ತು ಗುರಿಗಳ ಪುನರಾವಲೋಕನಕ್ಕಾಗಿ ಸಚಿವ ಸಂಪುಟದ ಉಪ ಸಮಿತಿಯನ್ನು ಏನು ರಚಿಸಿದ್ದಾರೆ ಅವರಿಂದ ಯೋಗ್ಯ ಬೆಲೆ ನಿಗದಿಪಡಿಸಲು ಸಾಧ್ಯವಾಗದಿದ್ದರೆ ವೈಜ್ಞಾನಿಕವಾಗಿ ವಿಚಾರಗಳನ್ನು ಕಂಡುಹಿಡಿಯುವುದಕ್ಕೆ ತಾಂತ್ರಿಕವಾದಂಥ ಪರಿಣಿತರ ಸಮಿತಿಯನ್ನು ರಚಿಸಿ ಅವರ ಮೂಲಕವಾದರೂ ರಾಜ್ಯದ ರೈತರು ಬೆಳೆದ ಬೆಳೆಗಳಿಗೆ ಯೋಗ್ಯವಾದ ಬೆಲೆಯನ್ನು ನಿಗದಿಪಡಿಸಲು ಪ್ರಯತ್ನ ಮಾಡಬೇಕೆಂದು ಹೇಳಿ ನನ್ನ ತಿದ್ದುಪಡಿಗೆ ಮುಖ್ಯಮಂತ್ರಿಗಳು ಏನು ಹೇಳುತ್ತಾರೆಂಬುದನ್ನು ಕೇಳಿ ಮತ್ತೆ ಮಾತನಾಡಬಯಸುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಬನ್ನಿಕೋಡ್‌ರವರು ರಾಜ್ಯದ ರೈತರು ಬೆಳೆದ ಬೆಳೆಗಳಿಗೆ ಯೋಗ್ಯವಾದ ಬೆಲೆ ಸಿಗತಕ್ಕಂಥ ವ್ಯವಸ್ಥೆಯೇ ನಮ್ಮಲ್ಲಿ ಇಲ್ಲ ಎಂದು ತೀವ್ರ ಕಳವಳವನ್ನು ಏನು ವ್ಯಕ್ತಪಡಿಸಿದ್ದಾರೆ ಆ ಕಳವಳದಲ್ಲಿ ಈ ಸದನದಲ್ಲಿರತಕ್ಕಂಥ ನಾವೆಲ್ಲರೂ ಭಾಗಿಗಳಾಗಿದ್ದೇವೆ. ಈ ವಿಚಾರವಾಗಿಯೇ ಕೇಂದ್ರ ಸರ್ಕಾರದವರು ತಂದಿರುವ ಕ್ರಾಪ್ ಇನ್‌ಶ್ಯೂರೆನ್ಸ್‌ನಲ್ಲಿ ಭಾಗವಹಿಸುತ್ತೇವೆಂದು ನಾವು ಒಪ್ಪಿಕೊಂಡು ಇದಕ್ಕಾಗಿಯೇ ಆಯವ್ಯಯದಲ್ಲಿ 100 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದೇವೆ ಎನ್ನತಕ್ಕಂಥ ಸಂದೇಶವನ್ನು ರಾಜ್ಯದ ರೈತ ಸಮುದಾಯಕ್ಕೆ ಹೊರಡಿಸಿದ್ದೇವೆ.

2- 10 ಪಿ.ಎಂ

ಜೊತೆಗೆ ತಾವೇನು ಪರಿಣಿತರ ಸಮಿತಿ ಮಾಡಿ ಇದರ ಬಗ್ಗೆ ಅಧ್ಯಯನ ಮಾಡಬೇಕು ಹಾಗೂ ಈ ಸಮಸ್ಯೆಯನ್ನು ನಾವು ಏನು ಮಾಡಬೇಕೆನ್ನುವುದಕ್ಕೆ ಈಗಾಗಲೇ ಕೃಷಿ ಆಯೋಗ ಒಂದನ್ನು ಡಾ:ದ್ವಾರಕನಾಥ್ ಅವರ ಅಧ್ಯಕ್ಷತೆಯಲ್ಲಿ ಈಗಾಗಲೇ ಸ್ಥಾಪಿಸಿದ್ದೇವೆ. ಆ ಕೃಷಿ ಆಯೋಗದ ಅಧ್ಯಕ್ಷರಾದ ಡಾ:ದ್ವಾರಕನಾಥ್ ಅವರು ಇದರ ಬಗ್ಗೆ ವಿಶೇಷವಾದಂತಹ ಅಧ್ಯಯನವನ್ನು ಮಾಡಬೇಕೆಂದು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇವೆ. ಈ ಹಿನ್ನೆಲೆಯಲ್ಲಿ ಮಾನ್ಯ ಬನ್ನಿಕೋಡ್‌ರವರು ತಮ್ಮ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಮಾನ್ಯ ಸದಸ್ಯರು ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಳ್ಳುತ್ತೀರಾ? ಅಥವಾ ಪ್ರೆಸ್ ಮಾಡುತ್ತೀರಾ?

ಶ್ರೀ ಬಿ.ಹೆಚ್.ಬನ್ನಿಕೋಡ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಈ

ವಿಚಾರದಲ್ಲಿ ಸ್ಪಂದಿಸಿರುವುದರಿಂದ, ಕಾರ್ಯೋನ್ಮುಖರಾಗುತ್ತೇವೆ ಎಂದು ಹೇಳಿರುವುದರಿಂದ ನಾನು ಈ ಸರ್ಕಾರ ಎಷ್ಟರಮಟ್ಟಿಗೆ ಈ ವಿಚಾರದಲ್ಲಿ ಸಹಾಯ ಮಾಡುವುದಕ್ಕಾಗುತ್ತದೆ ಎನ್ನುವುದು ಅದು ಬೇರೆ ವಿಚಾರ. ರೈತರು ತಾವು ಮಾರಾಟ ಮಾಡಿದಂತಹ ಬೆಳೆಗಳಲ್ಲಿ ನೂರಕ್ಕೆ ಒಂದೆರಡರಷ್ಟು ಅದನ್ನೆ ಸಂಗ್ರಹ ಮಾಡಿ, 5-10 ವರ್ಷಗಳ ಒಂದು ಯೋಜನೆ ಹಾಕಿಕೊಂಡು, ಸಾವಿರಾರು ಕೋಟಿ ರೂಪಾಯಿಗಳ ನಿಧಿಯನ್ನು ರೈತರಿಂದ ಪಡೆದುಕೊಂಡು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಸಹಾಯ ಮಾಡಿ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯ ಎಂದು ಹೇಳಿ ಈ ಒಂದು ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು: ಮಾನ್ಯ ಸದಸ್ಯರು ತಿದ್ದುಪಡಿಯನ್ನು ವಾಪಸ್ಸು ಪಡೆದಿರುವುದರಿಂದ ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವು ಹೀಗಿದೆ,

''ದಿನಾಂಕ 15.3.2000ದಂದು ವಿಧಾನಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇನೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ವಂದನಾ ನಿರ್ಣಯದ ಪ್ರಸ್ತಾವಕ್ಕೆ ಸಭೆಯು ಅನುಮೋದನೆ ನೀಡಿತು.

(ವಂದನಾ ನಿರ್ಣಯವನ್ನು ಸನ್ಮಾನ್ಯ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುವುದು)

ಈಗ ಸಭೆಯನ್ನು ಮುಂದೂಡಿ ಮತ್ತೆ ಮಧಾಹ್ನ 3-00 ಗಂಟೆ 15 ನಿಮಿಷಕ್ಕೆ ಸಭೆ ಸೇರುತ್ತದೆ.

(ಸಭೆಯು 2-12ಕ್ಕೆ ಮುಕ್ತಾಯಗೊಂಡು ಮತ್ತೆ ಮಧ್ಯಾಹ್ನ 3-15ಕ್ಕೆ ಸೇರಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 3 ಗಂಟೆ 30 ನಿಮಿಷಕ್ಕೆ ಸಮಾವೇಶಗೊಂಡಿತು)

(ಮಾನ್ಯ ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಅಧ್ಯಕ್ಷರು: ಈಗ ಪ್ರಶ್ನೋತ್ತರ ವೇಳೆ ಪ್ರಾರಂಭವಾಗುವುದಕ್ಕೆ ಮುಂಚೆ ಒಂದು ಸೂಚನೆ ಏನೆಂದರೆ ಪ್ರಶ್ನೋತ್ತರ ವೇಳೆ ಪ್ರತಿದಿವಸ ಕನಿಷ್ಟ 10 ರಿಂದ 20 ನಿಮಿಷ ಸಮಯ ಮುಂದೆ ಹೋಗುತ್ತಿದೆ. ನಿನ್ನೆಯ ದಿವಸ ಯಾವುದೋ ಪ್ರಶ್ನೆಗೆ 10-15 ನಿಮಿಷ ಕಾಲ ಡಿಸ್ಟರ್ಬೆನ್ಸ್ ಆಗಿದ್ದರಿಂದ ಸುಮಾರು ಒಂದೂವರೆ ಗಂಟೆ ಕಾಲ